ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಮೇ 2020, ಬೆಲೆ ರೂ. 5/-



ಕೇಳಿರೋ ಭಾಗ್ಯವೂ ವಿಷ್ಣು ಕಥೆ...

- ಅನ್ನಮಯ್ಯ







ಶ್ರೀ ರಾಮನವಮಿ ಪರ್ವದಿನದ ಸಂದರ್ಭವಾಗಿ 07-04-2020 ದಿನದಂದು
ಒಂಟಿಮಿಟ್ಟ, ಶ್ರೀ ಕೋದಂಡರಾಮಾಲಯದಲ್ಲಿ ನಡೆದ ಶ್ರೀ ಸೀತಾರಾಮರ ಕಲ್ಯಾಣ ಮಹೋತ್ಸವದ ದೃಶ್ಯಗಳು.
ಕರೋನ ವೈರಸ್ ಕಾರಣವಾಗಿ ಅರ್ಚಕರು ಏಕಾಂತವಾಗಿ ಈ ಕಲ್ಯಾಣ ಮಹೋತ್ಸವವನ್ನು ನಿರ್ವಹಿಸಿದರು.



ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಮ್।
ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಭೀಮಾಭಿರಕ್ಷಿತಮ್॥

(ಶ್ರೀ ಮದ್ಭಗವದ್ಗೀತೆ - 1, ಶ್ಲೋಕ -10)

ಭೀಷ್ಮರ ರಕ್ಷಣೆಗೆ ಒಳಪಟ್ಟಿರುವ ನಮ್ಮ ದೊಡ್ಡ ಈ ದಂಡೂ ಸಾಲದೇನೋ ಎನಿಸುತ್ತಿದೆ. ಭೀಮನ ರಕ್ಷಣೆಗೆ ಒಳಪಟ್ಟಿರುವ ಪಾಂಡವರ ಆ ಸೇನೆ ಸಾಕಷ್ಟು ಸಮರ್ಥವಾಗಿದೆ.






ನರಸಿಂಹನ ಪಾದಭಜನೆಯ ಮಾಡೋ
ನರಸಿಂಹನ ಪಾದಭಜನೆಯ ಮಾಡಲು
ದುರಿತ ಪರ್ವತವ ಖಂಡಿಸುವ ಕುಲಿಶದಂತೆ
ತೆರಳನ ಮೊರೆ ಕೇಳಿ ತವಕದಿಂದಲಿ ಬಂದು।
ದುರಳನ ಕರುಳ ತನ್ಕೊರಳಲಿ ಧರಿಸಿದ
ಸುರರೆಲ್ಲ ನಡುಗಲು ಸಿರಿದೇವಿ ಮೊರೆಯಿಡೆ।
ವರ ಕಂಬದಿಂದ ಬಂದ ವೈಕುಂಠಪತಿ ನಮ್ಮ
ಹರಿವಿರಂಚಾದಿಗಳು ಕರವೆತ್ತಿ ಮುಗಿಯಲು।
ಪರಮ ಶಾಂತನಾದ ಪುರಂದರವಿಠಲ

-ಶ್ರೀ ಪುರಂದರದಾಸರು

(ಐದನೆಯ ದಶಕ)

# ದಯಾ ಶತಕಮ್

- ಎನ್. ನರಸಿಂಹಾಚಾರ್ಯ



**ಯಸ್ಮಿನ್ ದೃಷ್ಟೇ ತದಿತರಸುಖೈರ್ಗಮ್ಯತೇ ಗೋಷ್ಪದತ್ವಂ  ಸತ್ಯಂ ಜ್ಞಾನಂ ತ್ರಿಭಿರವಧಿಭಿರ್ಮುಕ್ತಮಾನಂದಸಿಂಧುಮ್।**

**ತ್ವತ್ಸ್ವೀಕಾರತ್ತಮಿಹ ಕೃತಿನಃ ಸೂರಿಬೃಂದಾನುಭಾವ್ಯಂ ನಿತ್ಯಾಪೂರ್ವಂ ನಿಧಿಮಿವ ದಯೇ ನಿರ್ವಿಶಂತ್ಯಂಜನಾದ್ರೌ ॥ ೪೪॥**

ಹಿಂದಿನ ಪದ್ಯದಲ್ಲಿ ದಿವ್ಯಮಂಗಳ ವಿಗ್ರಹಸೇವೆಯೆಂಬ ಮಹಾಲಾಭವು ಹೇಳಲ್ಪಟ್ಟಿತು. ಇಲ್ಲಿ ಆ ದಿವ್ಯಮಂಗಳವಿಗ್ರಹಮೂಲಕವಾಗಿ ದೊರಕುವ ದಿವ್ಯಾತ್ಮ ಸ್ವರೂಪ ಸಾಕ್ಷಾತ್ಕಾರವೆಂಬ ಲಾಭವು ತಿಳಿಸಲ್ಪಡುವುದು. ಉಪನಿಷತ್ತುಗಳಲ್ಲಿ ಹೇಳಿರುವ ರೀತಿಯಲ್ಲಿಯೇ ದಿವ್ಯಾತ್ಮ ಸ್ವರೂಪಕ್ಕಿರುವ ಹಿರಿಮೆಯನ್ನು ಅಲ್ಲಿರುವ ಪದಗಳಿಂದಲೇ ಆಚಾರ್ಯರು ಈ ಪದ್ಯದಲ್ಲಿ ವರ್ಣಿಸಿರುವರು. "ತಸ್ಮಿನ್ ದೃಷ್ಟೇ ಪರಾವರೇ" - ಎಂಬಂತೆ, ಅಪರಿಚ್ಛಿನ್ನವಾದ ಆನಂದಸಮುದ್ರನಾದ ಪರಮಾತ್ಮನ ಸ್ವರೂಪವನ್ನು ಕಂಡ ಮೇಲೆ, ಇಷ್ಟೊಂದು ದಿನಗಳವರೆಗೂ ಸುಖರೂಪವಾಗಿ ತೋರಿದ ಸಾಂಸಾರಿಕವಾದ ಸರ್ವಸುಖಗಳೂ (ಚತುರ್ಮುಖೈಶ್ವರ್ಯ ಪರ್ಯಂತವಾದ ಸರ್ವಸುಖಗಳೂ) ಸಮುದ್ರದಲ್ಲಿ ಒಂದು ಹಸುವಿನ ಪಾದದಂತೆ ಆಗಿಬಿಡುವುವು. ಒಂದು ಮಹಾಸಾಗರದಲ್ಲಿರುವ  ನೀರಿಗೂ ಹಸುವಿನ ಪಾದಪ್ರಮಾಣದಲ್ಲಿ ನಿಲ್ಲುವ ನೀರಿಗೂ ಎಷ್ಟು ಅಂತರವಿರುವುದೋ ಅಷ್ಟೇ ಅಂತರವು ಪರಮಾತ್ಮಾನಂದಕ್ಕೂ ಇತರ ಸುಖಗಳಿಗೂ ಉಂಟೆಂಬುದನ್ನು ಆ ಪರಮಾತ್ಮನನ್ನು ಕಂಡವನು ತಿಳಿಯಬಲ್ಲನು. ಅಂತಹ  ಆನಂದ ಸಮುದ್ರ ಸ್ವರೂಪವುಳ್ಳದ್ದು ಆ ಪರಮಾತ್ಮ ಸ್ವರೂಪ. ಅಲ್ಲದೆ, ಅಚೇತನವಸ್ತುಗಳಂತೆ ಸ್ವರೂಪದಿಂದಲೂ ಚೇತನ ವಸ್ತುಗಳಂತೆ ಸ್ವಭಾವದಿಂದಲೂ, ಯಾವಾಗಲೂ ವಿಕಾರ ರಹಿತವಾದುದು. ನಿರುಪಾಧಿಕವಾದ ಸ್ವಯಂಪ್ರಕಾಶವಸ್ತು - ಅಂದರೆ, ತನ್ನ ಪ್ರಕಾಶದಲ್ಲಿ ಮತ್ತೊಂದು ವಸ್ತುವಿನ ಸಹಾಯವನ್ನು ಅಪೇಕ್ಷಿಸದೆ  ಇರುವಂತಹುದು. ದೇಶಪರಿಚ್ಛೇದ, ಕಾಲಪರಿಚ್ಛೇದ  ಮತ್ತು  ವಸ್ತುಪರಿಚ್ಛೇದವೆಂಬ ಮೂರುವಿಧವಾದ  ಪರಿಚ್ಛೇದವಿಲ್ಲದುದು. ಇಲ್ಲಿ ಮಾತ್ರವೇ  ಇರುತ್ತದೆ. ಈಗ ಮಾತ್ರ  ಇರುತ್ತದೆ.  ಈ ವಸ್ತುವಾಗಿ ಮಾತ್ರ  ಇರುತ್ತದೆ - ಎಂಬುದೇ ಆ ಮೂರು ವಿಧವಾದ ಪರಿಚ್ಛೇದಗಳು.  ಪರಮಾತ್ಮ ಸ್ವರೂಪಕ್ಕೆ  ಈ ವಿಧವಾದ  ಪರಿಚ್ಛೇದಗಳಿಲ್ಲ. ಎಲ್ಲೆಲ್ಲಿಯೂ ಇರುತ್ತದೆ.  ಯಾವಾಗಲೂ ಇರುತ್ತದೆ. ಮತ್ತು ಎಲ್ಲವೂ ಆಗಿರುತ್ತದೆ. (ಎಲ್ಲ ವಸ್ತುಗಳಲ್ಲಿಯೂ ಇರುವುದರಿಂದ ಎಲ್ಲ ಶಬ್ದಗಳೂ  ಪರಮಾತ್ಮನನ್ನೇ ಹೇಳುವುವು.) "ಸತ್ಯಂ ಜ್ಞಾನ ಮನಂತಂ ಬ್ರಹ್ಮ" ಎಂದು ಉಪನಿಷತ್ತು ಹೇಳಿರುವೂದೂ ಇದನ್ನೇ ಅಲ್ಲಿರುವ "ಅನಂತ" ಎಂಬ ಪದದ ವಿವರಣೆಯೇ "ತ್ರಿಭಿರವಧಿಭಿ ರ್ಮುಕ್ತಂ" ಎಂಬುದು. ಹಾಗೂ ಆ ಪರಮಾತ್ಮಸ್ವರೂಪವು ನಿತ್ಯ ಸೂರಿಗಳಿಂದಲೂ ಮುಕ್ತರಿಂದಲೂ ಕೂಡಿ ಅನುಭವಿಸಲು ಯೋಗ್ಯವಾದುದು.  ಎಷ್ಟೊಂದು  ಕಾಲ ಅನುಭವಿಸಿದರೂ ಆಗ ತಾನೇ ಹೊಸ ಹೊಸದಾಗಿ ಕಂಡು ಬರುವಂತಹ ಒಂದು ವಿಲಕ್ಷಣವಾದ ಭೋಗ್ಯತೆಯುಳ್ಳದ್ದು;  ಇಂತಹ ಹಿರಿಮೆಯುಳ್ಳ  ಆ ದಿವ್ಯಾತ್ಮಸ್ವರೂಪವನ್ನು  ಅಂಜನಾದ್ರಿಯಲ್ಲಿ ಜನ್ಮವನ್ನು ಹೊಂದಿದ ಭಾಗ್ಯವಂತರು ನಿನ್ನ (ದಯೆಯ) ಸ್ವೀಕಾರದಿಂದ ಈ ಪ್ರಕೃತಿಮಂಡಲದಲ್ಲಿಯೇ "ಅಮೃತಇಹ ಭವತಿ" ಎಂಬಂತೆ ಈ ತಿರುಮಲೆಯಲ್ಲಿಯೇ  ಒಂದು  ದೊಡ್ಡ ನಿಧಿಯಂತೆ ಅನುಭವಿಸುತ್ತಾರೆ. ನಿನ್ನ ಸ್ವೀಕಾರದಿಂದ ಅನುಭವಿಸುತ್ತಾರೆಂಬುದಕ್ಕೆ ಎರಡು ವಿಧವಾಗಿ ಅಭಿಪ್ರಾಯವನ್ನು ಹೇಳಬಹುದು.  ನಮಗೆ ಸೇರಿದವನೆಂಬ ನಿನ್ನ (ದಯೆಯ) ಅನುಗ್ರಹ ರೂಪವಾದ ಅಂಗೀಕಾರವನ್ನು ಪಡೆದವರು ಭಾಗ್ಯವಂತರು. ಆದ್ದರಿಂದ ಅವರು ಇಲ್ಲಿಯೇ ಆ ಪರಮಾತ್ಮನನ್ನು ಅನುಭವಿಸುವರೆಂಬುದು ಒಂದು ರೀತಿ. ನಿನ್ನ ಅಂಗೀಕಾರವು ಪರಮಾತ್ಮನಿಗೆ ಉಂಟಾಗುವುದರಿಂದ ನೀನು ಅವನನ್ನು ಇಲ್ಲಿಗೆ ಕರೆತಂದು ಇಹ ಲೋಕದಲ್ಲಿರುವವರೂ ಆ ದಿವ್ಯಾತ್ಮಸ್ವರೂಪವನ್ನು ಅನುಭವಿಸುವಂತೆ ಮಾಡುವೆ ಎಂಬುದು ಇನ್ನೊಂದು ರೀತಿ. ಉಪನಿಷತ್ತುಗಳು ಪರಬ್ರಹ್ಮ ಸ್ವರೂಪವನ್ನು ನಿಧಿಯನ್ನಾಗಿ ವರ್ಣಿಸಿವೆ ಅದರಂತೆ ಈ ಪದ್ಯದಲ್ಲಿಯೂ ನಿಧಿಯನ್ನಾಗಿ ವರ್ಣಿಸಿರುವುದು ಉಪನಿಷತ್ತುಗಳ ಸಾರವನ್ನು ಪ್ರಕಾಶಪಡಿಸುತ್ತದೆ.




50

# ಸಪ್ತಗಿರಿ

1970 2020

ಸಚಿತ್ರ ಮಾಸಪತ್ರಿಕೆ




ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವ್ರೋ ನ ಭೂತೋ ನ ಭವಿಷ್ಯತಿ


ತಿರುಮಲೆ ತಿರುಪತಿ ದೇವಸ್ಥಾನಗಳು

ಶ್ರೀ ಶಾರ್ವರಿನಾಮ-ಸಂವತ್ಸರ ವೈಶಾಖ -ಜ್ಯೇಷ್ಠ ಮಾಸ ಸಂಚಿಕೆ



**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಬಿ.ಎ.ಬಿ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ/ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507
ಕಾರ್ಯಾಲಯ: 0877 - 2264543, 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.



**ಸಂಪುಟ - 50 ಮೇ 2020 ಸಂಚಿಕೆ - 12**


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಸನಾತನ ಹಿಂದೂಧರ್ಮ ಪ್ರಚಾರದಲ್ಲಿ | | |
| ಸಪ್ತಗಿರಿ ಮಾಸಪತ್ರಿಕೆ | - ಕೆ. ನರಸಿಂಹಮೂರ್ತಿ | 7 |
| ಸಿಂಹ ರೂಪನಾದ ಶ್ರೀ ಹರಿ | - ವೆಂಕಟರಾಘವನ್. ಎಸ್ | 10 |
| ಶ್ರೀ ಪೆರುಂದೇವಿ ಸಮೇತ ಶ್ರೀ ಕರಿವರದರಾಜ ಸ್ವಾಮಿ | | |
| ದೇವಸ್ಥಾನ - ಸತ್ರವಾಡ | - ಭಾರತಿ ರಘುನಾಥ್ | 14 |
| ಪುಂಸವನ ವೃತ್ತ | - ಡಿ. ಎಸ್. ಬದ್ರಿನಾಥ್ | 16 |
| ಹರಿದಾಸ ಸಾರಸ್ವತ ಸಂಗ್ರಹ | -ಸುಸ್ವರಂ ನಾಗರಾಜಾಚಾರ್ಯ | 18 |
| ಮಂಗಳಪ್ರದ ಆರೋಗ್ಯ ಪ್ರದ | | |
| - ಖರ್ಜೂರ | - ಶ್ರೀಮತಿ | 21 |
| ಅನ್ನಮಯ್ಯ ಜೀವನ ಚರಿತ್ರೆ | - ಶ್ರೀಮತಿ. ಬಿ. ಪದ್ಮಜ | 24 |
| ನಮಾಮಿ ನರಸಿಂಹ | -ಡಾ ॥ ಗುರುರಾಜ ಪೋಶೆಟ್ಟಿಹಳ್ಳಿ | 31 |
| ಚಿನಿವಾರ ಪುರಂದರದಾಸರು | - ಡಾ॥ ವಾಸುದೇವ ಅಗ್ನಿಹೋತ್ರಿ | 35 |
| ಇದೇ ಕರ್ಮಭೂಮಿ | -ಡಿ. ಎಸ್. ಭೂಮಿಕ | 39 |
| ಸಂಸ್ಕೃತ ಕಲಿಯೋಣ! | - ಕಿರಣ್‌ಭಟ್ | 40 |
| ನರಸಿಂಹಾವತಾರದ ರಹಸ್ಯ | - ಶ್ರೀಮತಿ. ಸಿ. ಎಸ್. ಊರ್ಮಿಳಾ | 41 |
| ಹರಿದಾಸರು ಬೆಳಗಿಸಿದ ಭಾವದೀಪ | -ಶ್ರೀ ರಾಜ. ಎಸ್. ರಾಜಗೋಪಾಲಚಾರ್ಯರು | 45 |
| ಶ್ರೀ ವಿಷ್ಣುಸಹಸ್ರನಾಮ ಅಮೃತ | - ಶ್ರೀಮತಿ. ಎ. ಗೀತಾವೀರರಾಘವನ್ | 49 |
| ಸಪ್ತಗಿರಿ ಮಾಸಪತ್ರಿಕೆಗೆ ಸುವರ್ಣಸಂಭ್ರಮ | - ಬೆಳವಾಡಿ ಅಶ್ವತ್ಥನಾರಾಯಣ | 51 |
| ಸಪ್ತಗಿರಿ ಸಪ್ತಗಿರೀಶನ ಕರುಣಾಲಹರಿ | - ಡಾ॥ ಸುಮನ ಬದರೀನಾಥ್ | 53 |


ಮುಖಚಿತ್ರ - **ಕೇಳಿರೋ ಭಾಗ್ಯವ ವಿಷ್ಣು ಕಥೆ**

ಹಿಂಬದಿಚಿತ್ರ - **ಶ್ರೀ ವೆಂಕಟೇಶ್ವರನ ಸನ್ನಿಧಿಯಲ್ಲಿ ವೆಂಗಮಾಂಬ**


| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |
| ವಿದೇಶಿ ವಾರ್ಷಿಕ ಚಂದಾ | ರೂ. | 850/- |



ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ಸಂಪಾದಕೀಯ

# ಸಪ್ತಗಿರಿ ಸುವರ್ಣ ಮಹೋತ್ಸವದ ಶುಭವೇಳೆ



ಮನುಷ್ಯನ ಜೀವನದಲ್ಲಿ ಆಧ್ಯಾತ್ಮಿಕ ಹಾಗೂ ಲೌಕಿಕತೆಯು ಜೋಡೆತ್ತು ಕಟ್ಟಿರುವ ಬಂಡಿ ಇದ್ದಾಂಗೆ. ಆಗಲೇ ಜೀವನವು ಸುಖವಾಗಿ, ಸಂತೃಪ್ತಿಯಿಂದ ಪ್ರಶಾಂತವಾಗಿ ಸಾಗುತ್ತದೆ. ಮಾನವನಿಗೆ ಸಂಪಾದನೆಯು ಅವಶ್ಯಕವೇ. ಆದರೆ ಅದರೊಟ್ಟಿಗೆ ಆಧ್ಯಾತ್ಮಿಕತೆಯ ಜ್ಞಾನವನ್ನು ಹೊಂದಬೇಕು. ದೇವರಲ್ಲಿ ಭಕ್ತಿ , ಪಾಪದ ಭೀತಿಯಂತಹ ಉತ್ತಮ ಲಕ್ಷಣಗಳನ್ನು ಅಭ್ಯಾಸ ಮಾಡಬೇಕು. ಹೃದಯದಲ್ಲಿ ಪ್ರೇಮ, ಕ್ಷಮೆ, ಕಾರುಣ್ಯ ಇರಬೇಕು. ಹತ್ತು ಜನರಿಗೆ ಉಪಕಾರ ಮಾಡಬೇಕು. ಬಂಡಿಗೆ ಎರಡು ಚಕ್ರಗಳಿದ್ದಂತೆ ಪಕ್ಷಿಗಳಿಗೆ ಎರಡು ಬದಿಯಲ್ಲಿ ಇರುವ ರೆಕ್ಕೆಗಳಂತೆ ಲೌಕಿಕತೆ ಮತ್ತು ಆಧ್ಯಾತ್ಮಿಕತೆಗಳನ್ನು ಜೀವನದಲ್ಲಿ ಸಮ ಪ್ರಮಾಣದಲ್ಲಿ, ಮೇಳೈಸಿ ಕೊಂಡರೆ ಉನ್ನತವಾದ ಉತ್ತಮವಾದ ಜೀವನ ವಿಧಾನವನ್ನು ಅಳವಡಿಸಿಕೊಳ್ಳಬಹುದು. ಇದನ್ನು ಸಾಧಿಸಲು ಒಂದು ಪ್ರೇರಣಾ ಶಕ್ತಿಯ ಅವಶ್ಯಕತೆ ಇದೆ. ಈ ಕೊರತೆಯನ್ನು "ಸಪ್ತಗಿರಿ" ತೀರಿಸುತ್ತದೆ. ಇದು ಅತಿಶಯೋಕ್ತಿ ಅದಕ್ಕಿಂತ ಮಿಗಿಲಾದ ಅಲಂಕಾರಿಕ ಪ್ರಯೋಗವಿಲ್ಲ.

"ಸಮಾಜದ ಶ್ರೇಯಸ್ಸೇ ಸಾಹಿತ್ಯದ ಪರಮಾರ್ಥ" ಎಂದು ಹಿರಿಯರು ಹೇಳಿದ ಮಾತನ್ನು ಅಕ್ಷರಶಃ ಪಾಲಿಸುತ್ತಿರುವ ಕೆಲವೇ ಪತ್ರಿಕೆಗಳಲ್ಲಿ "ಸಪ್ತಗಿರಿ" ಪತ್ರಿಕೆಯು ಉನ್ನತ ಸ್ಥಾನದಲ್ಲಿದೆ ಎಂದು ನಿಸ್ಸಂಕೋಚವಾಗಿ ಹೇಳಬಹುದು. ತಿರುಮಲೆ ಗಿರಿಯಲ್ಲಿ ನಡೆಯುವ ಸಾರ್ವಭೌಮನ ಲೀಲಾ ವಿಶೇಷಗಳನ್ನು ಲಕ್ಷಾನುಗಟ್ಟಲೆ ಭಕ್ತರ ಹೃದಯದಲ್ಲಿ ಮುದ್ರಿಸುವ ಕಾರ್ಯವನ್ನು ಪತ್ರಿಕೆಯು ಮಾಡುತ್ತಿದೆ. ಆ ಅಕ್ಷರಗಳಲ್ಲಿ ತುಂಬಿ ತುಳುಕಾಡುತ್ತಿರುವ ಶ್ರೀ ಸ್ವಾಮಿಯವರ ಅನಂತ ಶಕ್ತಿಯನ್ನು ಕೂಡಾ ಅವರು ಅನುಭವಿಸುವಂತೆ ಮಾಡುತ್ತಿದೆ. "ಅಕ್ಷರಾನಾಂ ಅರೌರೋಸ್ಮ" ಎಂದು ಸ್ವಾಮಿ ಹೇಳಿದ್ದಾರೆ. ಆ ಮಾತು ಸುಳ್ಳಾಗದಂತೆ ಪತ್ರಿಕೆಯಲ್ಲಿನ ಪ್ರತಿ ಪುಟವೂ ಶ್ರೀ ಸ್ವಾಮಿಯವರ ಪಾದಾರವಿಂದಗಳಿಗೆ ಅಕ್ಷರಾರ್ಚನೆ ಮಾಡುತ್ತಿದೆ. ಈ ಪ್ರಸಾದವನ್ನು 50 ವರ್ಷಗಳಿಂದ ನಿರಂತರವಾಗಿ ಭಕ್ತರಿಗೆ ನೀಡುತ್ತಿದೆ. ತಿರುಮಲೆ ಯಾತ್ರೆ ಎಂದರೆ ಒಂದು ದಿವ್ಯಾನುಭೂತಿ! ಒಂದು ತರಹದ ಆನಂದ, ಪರಮಾನಂದ. ಆದ್ದರಿಂದ ತಿರುಮಲೆ ಯಾತ್ರಿಕರಲ್ಲಿ ವಿಶೇಷತೆ ಇದೆ. ಸ್ವಾಮಿಯವರನ್ನು ಬೇಡಿಕೊಂಡು, ಆ ಬೇಡಿಕೆಯು ತೀರುವ ತನಕ ಮನೆಯಿಂದ ಹೊರಟ ಕ್ಷಣದಿಂದಲೂ ಯಾತ್ರೆಯಿಂದ ಮರಳಿ ಬರುವವರೆಗೂ ಗೋವಿಂದ ನಾಮವನ್ನು ಜಪಿಸುತ್ತಾ ಇರುತ್ತಾರೆ. "ಕಲೌ ಸ್ಮರಣಾನ್ಮುಕ್ತಿಃ" ಎಂದಿದ್ದಾರೆ ಸ್ವಾಮಿಯವರು. ಅಂತಹ ನಾಮಸ್ಮರಣೆಯಿಂದಲೇ ಭಕ್ತರನ್ನು ಭವಸಾಗರದಿಂದ ವೇಂಕಟಪತಿಯವರು ಪಾರು ಮಾಡುತ್ತಿದ್ದಾರೆ. ಆದರೂ ಮಾನವರಾದ ನಮಗೆ ಲೌಕಿಕ ಬಂಧಗಳಿಂದ ಮುಕ್ತಿಯಲ್ಲಿ ಅಲ್ಲವೇ? ಎಷ್ಟೇ ಬೇಡ ಅಂದರೂ, ಬಿಡಿಸಿ ಕೊಳ್ಳಬೇಕೆಂದರೂ ಮಾಯೆಯನ್ನು ಮೆಟ್ಟುವುದು ಸುಲಭದ ಕಾರ್ಯವಲ್ಲ ಆದ್ದರಿಂದ ಆ ಕಾರ್ಯವನ್ನು ಕೂಡ ಸ್ವಯಂ ಭಗವಂತನೇ ತನ್ನ ಭುಜದ ಮೇಲೆ ಹೇಳಿ ಕೊಂಡಿದ್ದಾನೆ. ಭಕ್ತರನ್ನು ಸಂತೃಪ್ತಿಗೊಳಿಸಲು ಸ್ವಾಮಿ ಎಷ್ಟೋ ಕಷ್ಟಗಳನ್ನು ಎದುರಿಸುತ್ತಾರೆ. ಯಾವುದೇ ಕಾರ್ಯವನ್ನಾದರೂ ಮಾಡುತ್ತಾರೆ. ಆದ್ದರಿಂದ ಯಾತ್ರೆ ಮುಗಿಸಿ, ಮನೆಗೆ ಮರು ಪ್ರಯಾಣ ಮಾಡುವ ಭಕ್ತರೊಂದಿಗೆ ಸಪ್ತಗಿರೀಶನು 'ಸಪ್ತಗಿರಿ' ರೂಪದಲ್ಲಿ ಬರುತ್ತಾನೆ ಕೈ ಹಿಡಿದು, ಅವರ ಕೈಯಲ್ಲಿ ಸಪ್ತಗಿರಿಯನ್ನು ನೀಡಿ ಬಾಯಿಯಿಂದ ನಾಮವನ್ನು ಜಪಿಸುವಂತೆ ಮಾಡುತ್ತಾನೆ. ಅದು ಬೆಟ್ಟದ ರಾಜನ ಬೆಟ್ಟದಂತಹ ಘನತೆಯಾಗಿದೆ.

ಸ್ವಾಮಿಯನ್ನು ಹತ್ತಿರದಿಂದ ದರ್ಶಿಸುವಂತಹ ಅನುಭೂತಿಯನ್ನು ಉಂಟು ಮಾಡುವ ಚಿತ್ರಗಳು ಭಕ್ತರ ಮನಸ್ಸನ್ನು ಹಿಡಿದಿಡುತ್ತವೆ. ಉದ್ದಂಡ ಪಂಡಿತರ ರಚನೆಗಳು ಪತ್ರಿಕೆಯನ್ನು ಅಮೂಲಾಗ್ರವಾಗಿ ಓದುವಂತೆ ಮಾಡುತ್ತವೆ. ಆಯಾ ಸಂದರ್ಭಕ್ಕೆ ಅನುಗುಣವಾಗಿ ಸಂಚಿಕೆಯಲ್ಲಿ ಯಾವ ವಿಷಯವನ್ನು ನೀಡಿದರೆ ಸಮಯೋಚಿತವಾಗುವುದೆಂದು ಯೋಚಿಸಿ ಆರಿಸಿ, ನೀಡುತ್ತಿರುವ ಪತ್ರಿಕೆಯು ವಿಶೇಷ ಓದುಗರನ್ನು ಹೊಂದುತ್ತಿರುವುದು ಆನಂದಿಸುವ ವಿಷಯವಾಗಿದೆ. ಸಪ್ತಗಿರಿ ಪತ್ರಿಕೆ ಸಿಬ್ಬಂದಿಯೂ ಕೂಡಾ ಉದ್ಯೋಗವನ್ನು ಉದ್ಯೋಗವೆಂದು ಪರಿಗಣಿಸದೇ, ವೇಂಕಟಪತಿಯ ಚರಣ ಸೇವೆ ಮಾಡುವ ಮಹಾಭಾಗ್ಯವೆಂದು, ಒಂದು ಸದಾವಕಾಶವೆಂದು ಭಾವಿಸಿ ಇವರೆಲ್ಲರೂ ಮಾಡುತ್ತಿರುವ ಸೇವೆಯು ಭಕ್ತರ ಹೃದಯಗಳನ್ನು ತಿಮ್ಮಪ್ಪನ ಕರುಣಾ ಸಾಗರದಲ್ಲಿ ಮುಳುಗಿಸಿ ಪುಣ್ಯಸ್ನಾನವನ್ನು ಮಾಡಿಸುತ್ತಿದೆ. ಭಕ್ತರ ಅನುಭವಗಳು, ಅಧಿಕಾರಿಗಳ ಸೂಚನೆಗಳು, ಮಾರ್ಗದರ್ಶಕರು, ಭಕ್ತರ ಸಮಸ್ಯೆಗಳಿಗೆ ಪರಿಹಾರಗಳು, ತಿರುಮಲೆ ಯಾತ್ರೆಗೆ ಮಾರ್ಗದರ್ಶನ, ಆಲಯದಲ್ಲಿ ಸ್ವಾಮಿಗೆ ಜರುಗುವ ಅರ್ಚನಾದಿ ಕೈಂಕರ್ಯಗಳು, ಉತ್ಸವ ವಿಶೇಷಗಳು, ಆಲಯದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳು, ಮಾಸ ವಿಶೇಷಗಳು.... ಎಲ್ಲವೂ ಮೇರು ಪರ್ವತದಂತೆ ಪತ್ರಿಕೆಯಲ್ಲಿ ಸಮರ್ಪಕವಾಗಿ ಅಲಂಕರಿಸುತ್ತವೆ. ಅಗಾಢ ಭಕ್ತರು ಪತ್ರಿಕೆಯನ್ನು ಓದುವಂತೆ ಮಾಡುತ್ತವೆ.

"ಸಪ್ತಗಿರಿ" ಅಸಾಧಾರಣ ಪತ್ರಿಕೆ. ವೇಂಕಟಾಚಲ ರಮಣನ ಲೀಲಾ ತರಂಗಿಣಿ ಭಕ್ತ ಭಾವ ಝರಿ!




# ಸನಾತನ ಹಿಂದೂಧರ್ಮ ಪ್ರಚಾರದಲ್ಲಿ ಸಪ್ತಗಿರಿ ಮಾಸಪತ್ರಿಕೆ




- ಮೂಲ ಕೆ. ರಾಧಾರಮಣ

- ಅನುವಾದ : ಕೆ. ನರಸಿಂಹಮೂರ್ತಿ



ಪ್ರಜೆಗಳಲ್ಲಿ ಸತ್ವರಿವರ್ತನೆ, ಸದಾಚಾರ, ಧರ್ಮಚಾರಣೆಯಂತಹ ಗುಣಗಳನ್ನು ಪ್ರೇರೇಪಿಸಿ ಮುನ್ನಡೆಸುವ ವಿಷಯದಲ್ಲಿ ಧಾರ್ಮಿಕ ಪತ್ರಿಕೆಗಳ ಸ್ಥಾನ ವಿಶೇಷವಾದುದು. ಅದರಲ್ಲೂ ತಿರುಮಲೆ ತಿರುಪತಿ ದೇವಸ್ಥಾನ ಪ್ರಚಾರ ಗೈಯುತ್ತಿರುವ 'ಸಪ್ತಗಿರಿ' ಧಾರ್ಮಿಕ ಮಾಸಪತ್ರಿಕೆಯ ಸ್ಥಾನ ಮತ್ತಷ್ಟೂ ವಿಶಿಷ್ಟವಾದುದು. ಈ ಪತ್ರಿಕೆಯ ಪೂರ್ವಾಪರಗಳನ್ನು ಪರಿಶೀಲಿಸೋಣ!

ಶೇಷಾಚಲಪತಿಯಾದ ಶ್ರೀನಿವಾಸವನ್ನು ಸಂದರ್ಶಿಸಲು ಬರುವ ಸಾವಿರಾರು ಯಾತ್ರಿಕರಿಗೆ ದೇವಸ್ಥಾನ ಮಾಡುವ, ಮಾಡಲಿರುವ ಸತ್ಕಾರ್ಯಗಳ ವಿವರ ಗಳನ್ನು ಮೂಲೆ-ಮೂಲೆಯಲ್ಲಿರುವ ಭಕ್ತರಿಗೆ ತಿಳಿಸುವುದರ ಜೊತೆಗೆ ಕ್ಷೇತ್ರಮಹಿಮೆ,ಮತ್ತಿತರ ಪೌರಾಣಿಕ, ವೈದಿಕ ವಿಜ್ಞಾನ ವನ್ನು ಪ್ರಭೋಧಿಸಿ,ಆಸ್ತಿಕರಲ್ಲಿ ಆಧ್ಯಾತ್ಮಿಕ ತೇಜಸ್ಸು ಅವಿಚ್ಛಿನ್ನ ವಾಗಿ ಬೆಳಗಲು, ಜೊತೆಯಲ್ಲಿರಲು 1949 ನೇ ಇಸವಿಯಲ್ಲಿ ತಿರುಮಲೆ ತಿರುಪತಿ ದೇವಸ್ಥಾನವು ಒಂದು ಪ್ರಚಾರ ಸಾಧನವನ್ನೇರ್ಪಡಿಸಲು ಶ್ರೀಕಾರ ಆರಂಭಿಸಿದೆ. ಅದರ ಫಲವಾಗಿ ಏಪ್ರಿಲ್ 1949 ನೇ ವರ್ಷದಲ್ಲಿ ಒಂದು ಪ್ರಚಾರ ಮಾತ್ರವೇ ಆಗಿತ್ತು, ಅದರ ಹೆಸರೇ ದೇವಸ್ಥಾನದ 'ಬುಲೆಟನ್' ಸುದೀರ್ಘವಾಗಿ ಈ ವೇಂಕಟೇಶ್ವರ ಸೇವಾ ಕಾರ್ಯಕ್ರಮವು ದಿನೇ ದಿನೇ ಪ್ರವರ್ಧಮಾನವಾಗಿ ದೇವಸ್ಥಾನದ ಸಮಾಚಾರದ ಜೊತೆ ಜೊತೆಗೆ ಹಲವಾರು ಆರ್ಯವಿಜ್ಞಾನ ದಿಗ್ಗಜರಂತಹ ಪಂಡಿತರ ಸಹಕಾರದಿಂದ ಉತ್ತಮ ಆಧ್ಯಾತ್ಮಿಕ ಜ್ಞಾನ ಸಾಹಿತ್ಯ ಸೌರಭಗಳನ್ನು 1961 ನೇ ಇಸವಿವರೆಗೂ ಹೊರ ಚೆಲ್ಲಿದೆ. ಈ ನಡುಗಾಲದಲ್ಲಿ ಶ್ರೀ ವೇಂಕಟೇಶ್ವರ ಪಾಚ್ಯ ಪರಿಶೋಧನಾಲಯವೂ ಸಹ ದೇವಸ್ಥಾನದ ಆಧೀನದಲ್ಲಿತ್ತಾದ್ದರಿಂದ ಎಲ್ಲಾ ಪಂಡಿತರು ತಮ್ಮ ನಿರ್ವಹಣೆಯಲ್ಲಿ ವ್ಯಾಸ ರೂಪದಿಂದ ಪತ್ರಿಕೆಗೆ ಬೇಕಾದ ಮಾಹಿತಿ-ಪ್ರಣಾಳಿಕೆಗಳನ್ನು ಹೊಂದಿಸಿಕೊಟ್ಟಿದ್ದಾರೆ. ವಾಸ್ತವದಲ್ಲಿ ದೇವಸ್ಥಾನದಿಂದ ಬೆಳಕಿಗೆ ಬಂದ ಗ್ರಂಥಗಳಲ್ಲಿ ಬಹುತೇಕ ಗ್ರಂಥಗಳು ಮೊದಲು ಮಾಸ ಪತ್ರಿಕೆಯಲ್ಲಿ ಮುದ್ರಣಗೊಂಡು ನಂತರ ಗ್ರಂಥ ರೂಪವನ್ನು ಪಡೆದುಕೊಂಡಿವೆಯೆಂದರೆ ತಪ್ಪಾಗಲಾರದು.

ಮೊದಲು ಸಂಗ್ರಹಗೊಂಡು ನಂತರ ಸಂಸ್ಕರಣಗೊಳ್ಳುವುದು ರಿವಾಜು. ಹಾಗೆಯೇ, ಈ ಪತ್ರಿಕೆಯನ್ನು ಕೇವಲ ತಿರುಪತಿ ಯಾತ್ರಿಕರ ಸಹಾಯಕ ಕೈಪಿಡಿಯಾಗಿ ನಿಲ್ಲಿಸದೇ, ಅದನ್ನೊಂದು ಮಹೋನ್ನತ ಆಧ್ಯಾತ್ಮಿಕ ಕಥಾ ಪ್ರಸಾರಣ ಪತ್ರಿಕೆಯನ್ನಾಗಿ ನಿಲ್ಲಿಸುವ ಮಾಸಪತ್ರಿಕೆಯಾಗಿ ತಿದ್ದಿತೀಡುವ ಪ್ರಯತ್ನ 1961 ನೇ ವರ್ಷದಲ್ಲೇ ಆರಂಭಗೊಂಡಿದೆ. 'ಬುಲ್ಲೆಟನ್' ಮಾಸಪತ್ರಿಕೆಯಾಗಿ, ವಾರ್ತಾಪತ್ರಿಕೆಗಳ ನಿಬಂಧನೆಗಳನುಗುಣವಾಗಿ ತನ್ನ ಹೆಸರನ್ನು ಬದಲಾಯಿಸಿಕೊಂಡಿದ್ದು ಸಹಾ 1961ನೇ ಇಸವಿಯಲ್ಲೇ ಇದರ ಕಾರ್ಯರೂಪವೇ ಒಬ್ಬ ಸಂಪಾದಕನನ್ನು ಸಂಸ್ಕರಣ ಸಿಬ್ಬಂದಿಯನ್ನು 1963 ರಲ್ಲಿ ನೇಮಿಸಲಾದುದ್ದು. ಇದ್ದರಿಂದ ಇಂದರಿಂದಾಗಿಯೇ ಪತ್ರಿಕೆಯ ವಿಷಯವಾಗಿ ಅದರ ಪ್ರಗತಿ ಪರ ವಿಷಯದಲ್ಲಿ ಪ್ರತ್ಯೇಕ ಶ್ರದ್ಧೆಯನ್ನು ತೆಗೆದುಕೊಳ್ಳುವ ಅವಕಾಶ ಉಂಟಾದುದು. ಆ ಕಾಲಕ್ಕೆ ಪತ್ರಿಕೆಗಳ ಸಂಖ್ಯೆ 3000 ಮಾತ್ರವೇ. ಒಂದು ಚಿಕ್ಕ ಮುದ್ರಣದ (1/8 ಭಾಗ ) ದಷ್ಟು ಇದ್ದ ಈ ಪತ್ರಿಕೆ ಆ ದಿನಗಳಲ್ಲಿ ಚಂದಾದಾರರಿಗೆ ಹಂಚುವುದರ ಮೂಲಕ ತಿರುಮಲೆ, ಮದ್ರಾಸು, ಹೈದ್ರಾಬಾದ್, ಬೆಂಗಳೂರುಗಳಲ್ಲಿ ಪತ್ರಿಕಾ ವಿಕ್ರಯ ನಡೆಯುತ್ತಿತ್ತು. ಆಂಗ್ಲ, ತಮಿಳು, ತೆಲುಗು, ಕನ್ನಡ, ಹಿಂದಿ ಭಾಷೆಗಳ ಮುದ್ರಣಗಳು ಚಿಕ್ಕ ಚಿಕ್ಕ ಪ್ರಮಾಣದಲ್ಲಿ ವಿತರಣೆಗೊಳ್ಳುತ್ತಿದ್ದವು.

ಅಪೇಕ್ಷಿಸಿದ ಫಲಿತಾಂಶವು ಸ್ವಲ್ಪವಾದರೂ ದೊರಕಬೇಕೆಂದರೆ ಪತ್ರಿಕೆಯ ಇರುವಿಕೆಯನ್ನು ಹತ್ತು ಮಂದಿಗೆ ತಿಳಿಸುವ ಅವಶ್ಯಕತೆಯು ಸ್ವಲ್ಪವಾದರೂ ಇದ್ದೇ ಇರುತ್ತದೆ. ಈ ಪ್ರಣಾಳಿಕೆಯ ಆರಂಭದಲ್ಲಿ ಪತ್ರಿಕಾ ಕೈಂಕರ್ಯವನ್ನೂ ತಿರುಮಲೆ ತಿರುಪತಿ ದೇವಸ್ಥಾನದಲ್ಲಿ ಆ ದಿನಗಳಲ್ಲಿದ್ದ ಧರ್ಮಶಾಲೆಗಳು, ದೇವಾಲಯ, ಸಮಾಚಾರಕೇಂದ್ರಗಳು 1966 ರ ಜುಲೈಯಲ್ಲಿ ಆರಂಭಿಸಲಾಯಿತು. ಸಂಸ್ಕರಣ ಕೇಂದ್ರಗಳು ಮೂರರಿಂದ ಹನ್ನೆರಡಕ್ಕೇರಿ ಆ ನಂತರ ವಿಸ್ತರಣಗೊಂಡಿತು. ಇದರೊಂದಿಗೆ ಪತ್ರಿಕಾ ಸಿಬ್ಬಂದಿಯ ಸಂಖ್ಯೆ ಕೂಡಾ ಬೆಳೆಯಿತು.

ದೇವಸ್ಥಾನದ ವಿಧಿ- ವಿಧಾನಗಳ ಪ್ರಚಾರ, ಆರ್ಯ ವಿಜ್ಞಾನದ ಪ್ರಸರಣಗಳು ಮುಖ್ಯ ಗುರಿಯಾಗಿರುವಾಗ ಪತ್ರಿಕೆಯನ್ನು ಈ ಪರಿಧಿದಾದ ಇತರ ಹಲವಾರು ಪ್ರಾಂತ್ಯಗಳಲ್ಲಿ ವಿಸ್ತರಿಸುವುದು ಅನಿವಾರ್ಯವಾಗಿದೆ. ಆದ್ದರಿಂದಲೇ ಪತ್ರಿಕೆಯನ್ನು ಕಮಿಷನ್ ಮತ್ತಿತರ ವ್ಯಕ್ತಿಗಳ ಮೂಲಕ ಮಾರಾಟ ಮಾಡುವ ಪ್ರಕ್ರಿಯೆಯನ್ನು 1967 ಏಪ್ರಿಲ್ ತಿಂಗಳಿನಿಂದ ಆರಂಭಿಸಲಾಯಿತು.

ಬಹುಭಾಷೆಯಲ್ಲಿ ಪ್ರಚುರಗೊಂಡ ದೇವಸ್ಥಾನ ಪತ್ರಿಕೆಯನ್ನು 1970 ರ ಜನವರಿಯಲ್ಲಿ ಇಂಗ್ಲೀಷ್, ಸಂಸ್ಕೃತ ಪ್ರತಿಭಾಗಗಳಾದ ಪತ್ರಿಕೆಯನ್ನು ತೆಲುಗು,ತಮಿಳು, ಕನ್ನಡ, ಹಿಂದಿ ಭಾಷೆಯ ಪತ್ರಿಕೆಗಳಿಂದ ಬೇರ್ಪಡಿಸಿ ಬಿಡುಗಡೆ ಮಾಡಲಾಯಿತು. ಇದರ ಮೂಲಕ ಆ ಭಾಷೆಯ ಪತ್ರಿಕೆ ಆಯಾ ಭಾಷಾ ಪ್ರಾಂತ್ಯದ ಮೂಲೆ ಮೂಲೆಗಳಲ್ಲಿ ತಲುಪುವ ಅವಕಾಶ ದೊರತಂತಾಯಿತು. ಅಂದರೆ ಸ್ಥಿರ ಅಸ್ತಿತ್ವಕ್ಕಾಗಿ ಪತ್ರಿಕೆಯನ್ನು ರೂಪುಗೊಳಿಸುವ ಕಾರ್ಯವು 1966 ರಿಂದ 1970 ರ ವರೆಗೆ ಹತ್ತು ಕಡೆಗಳಲ್ಲಿ ಹಮ್ಮಿ ಕೊಳ್ಳಲಾಯಿತು.

1949 ರಿಂದ 1970 ನೇ ಇಸವಿಯವರೆಗೆ ಅಂದರೆ ಸುಮಾರು 20 ವರ್ಷಗಳ ಕಾಲ ಪತ್ರಿಕೆಯು ಪತ್ರಿಕಾ ಸಂಪ್ರದಾಯದನುಸಾರವಾಗಿ ಸ್ವಾವಲಂಭಿಯಾಗಿ, ಸಾಂಕೇತಿಕವಾಗಿ ಯಾವುದೇ ನಾಮಧೇಯವಿಲ್ಲದೆ. ಬೆಳೆಯುತ್ತಲೇ ಬಂದಿದೆ. 1970 ರ ಜೂನ್‌ನಲ್ಲಿ ಏಳುಬೆಟ್ಟಗಳ ಸಾಂಕೇತಿಕ ಪತ್ರಿಕೆಯಾಗಿ, 'ಬುಲೆಟನ್' ಆಗಿ ಜನಿಸಿ ಪತ್ರಿಕೆಯಾಗಿ ಬೆಳೆದು "ಸಪ್ತಗಿರಿ"ಯಾಗಿ ಅವತರಿಸಿದೆ. ಅಂದಿನಿಂದ ಇಂದಿನವರೆಗಿನ ಸುದೀರ್ಘ ಚರಿತ್ರೆಯಿದೆ ಈ ಪತ್ರಿಕೆಗೆ.




ಈ ಹಂತದಿಂದ ಪತ್ರಿಕಾಪಥದಲ್ಲಿ ಗಣನೀಯವಾದ ಮಾರ್ಪಾಡುಗಳನ್ನು ತರುವ ಕಾರ್ಯ ಆರಂಭವಾಗಿದೆ. ಇಷ್ಟು ವರ್ಷಗಳವರೆಗೆ ಒಂದು ಚಿಕ್ಕ ಪತ್ರಿಕೆಯಾಗಿ ಬಂದ ಈ ಪತ್ರಿಕೆಯನ್ನು ಏಪ್ರಿಲ್ 1972 ರಲ್ಲಿ 1/4 ಕ್ರೌನ್ ಪರಿಮಾಣದಲ್ಲಿ ಹೊರ ಬರುವ ಪ್ರಯತ್ನ ನಡೆದಿದೆ. ಇಂಗ್ಲಿಷ್, ಸಂಸ್ಕೃತ ಪತ್ರಿಕೆಗಳು ಇತರ ಪತ್ರಿಕೆಗಳು ಸಮಾನವಾಗಿಯೇ ಇರುವುವು. ಆದರೆ ಅವಶ್ಯಕತೆಯೇ ಇಲ್ಲದವರ ಮೇಲೆ ಹೊರಹೇರುವುದು ವಿವಿಧ ಭಾಷೆಯ ಪ್ರಾಂತ್ಯದ ಪತ್ರಿಕೆಗಳು ಆಯಾ ಪ್ರಾಂತ್ಯದಲ್ಲಿ ಗಣನೀಯ ಸ್ಥಾಯಿ ಪಡೆಯಲು ಜನವರಿ 1975ರಿಂದ ಇಂಗ್ಲೀಷ್ ಭಾಷೆಯ ಭಾಗವನ್ನು ಬೇರ್ಪಡಿಸಿ ಐದು ಭಾಷೆಗಳಲ್ಲಿ ಪತ್ರಿಕೆಗಳನ್ನು ಬೇರೆ ಬೇರೆಯಾಗಿ ಬಿಡುಗಡೆ ಮಾಡಲಾಯಿತು. ಈ ರಿವಾಜಿನಿಂದ ಪ್ರತಿ ಸಪ್ತಗಿರಿ ಇತರ ಭಾಷೆಯ ಪತ್ರಿಕೆಯೊಡನೆ ಸಂಬಂಧಪಟ್ಟಿರದೇ ಮುಂದೆ ಬಿಡುಗಡೆಯಾಗುವ ಅವಕಾಶವು ಒದಗಿ ಬಂದಿದೆ. 1975 ಆಗಸ್ಟ್ ಪತ್ರಿಕೆಯನ್ನು 1/4 ಕೌನ್ ನಿಂದ 1/4 ಡೆಮ್ಮಿ ಸೈಜಿಗೆ ಪರಿವರ್ತಿಸಲಾಯಿತು.

ಸಪ್ತಗಿರಿ ಮಾಸಪತ್ರಿಕೆ ಪಾಠಕಲೋಕದಲ್ಲೇ ಒಂದು ಆದರಣೀಯ ಮಾನವಾಗಿ ದಿನಂಪ್ರತಿ ಪ್ರವರ್ಧಮಾನವಾಗಿ ವಿಸ್ತರಿತವಾಯಿತು. ಇದರ ಅಂಗವಾಗೇ 2014 ಏಪ್ರಿಲ್ ತಿಂಗಳಿನಿಂದ ಸಂಸ್ಕೃತ ಭಾಷೆಯಲ್ಲೂ ಕೂಡಾ ಪತ್ರಿಕೆ ಹೊರ ಬರಲು ಆರಂಭವಾಯಿತು. 2016 ಜನವರಿಯಿಂದ ಸಪ್ತಗಿರಿ ಪತ್ರಿಕೆ ಆರು ಭಾಷೆಗಳಲ್ಲಿ (ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲಿಷ್, ಸಂಸ್ಕೃತ) ಸಂಪೂರ್ಣ ವರ್ಣರಂಜಿತ ಸಚಿತ್ರ ಮಾಸಪತ್ರಿಕೆಯಾಗಿ ಹೊರಹೊಮ್ಮಿದೆ. ಕೇವಲ 3000 ಪ್ರತಿಗಳಿಂದ ಆರಂಭಗೊಂಡ ಸಪ್ತಗಿರಿ ಪತ್ರಿಕೆ ಇಂಚಿಂಚು ಬೆಳೆದು ಈ ದಿನಕ್ಕೆ 2,00,000 ಪ್ರತಿಗಳ ಸರ್ಕ್ಯುಲೇಷನ್ ಹೊಂದಿದೆ. ಪ್ರಸ್ತುತ ಅತ್ಯಧಿಕ ಸರ್ಕ್ಯುಲೇಶನ್ ಹೊಂದಿರುವ ಆಧ್ಯಾತ್ಮಿಕ ಪತ್ರಿಕೆ 'ಸಪ್ತಗಿರಿ' ಆಗಿರುವುದು ಸಂತೋಷಕರವಾದ ವಿಷಯ.

ಈ ಕೃಷಿ,ವೃದ್ಧಿ, ಪ್ರತಿಫಲ ಯಾವುದೋ ವ್ಯಕ್ತಿಗೆ ಸಲ್ಲುವಂತದ್ದಲ್ಲ. ದೇವಸ್ಥಾನ ಕಾರ್ಯ ನಿರ್ವಹಣಾಧಿಕಾರಿಗಳೆಲ್ಲರೂ ಪ್ರತಿಯೊಬ್ಬೊಬ್ಬರಾಗಿ ತಮ್ಮದೇ ರೀತಿಯಲ್ಲಿ 'ಸಪ್ತಗಿರಿ' ಪ್ರಗತಿಗೆ ಹೆಗಲುಗೊಂಡು ನಿಂತಿರುವುದರಲ್ಲಿ ಸಂದೇಹವೇ ಇಲ್ಲ.

ಪ್ರಾರಂಭಿಸಿದ ದಿನದಿಂದ 'ಸಪ್ತಗಿರಿ' ಪತ್ರಿಕೆ ಭಕ್ತಿಗೆ, ಧಾರ್ಮಿಕತೆಗೆ,ಆಧ್ಯಾತ್ಮಕ್ಕೆ, ಇತರ ಪುಣ್ಯಕ್ಷೇತ್ರಗಳ ಕುರಿತು, ದೇವತೆಗಳ ಕುರಿತು - ತ್ರಿವಿಧ ಮತಾಚಾರ್ಯರ ಶ್ರೇಷ್ಠತೆಯನ್ನು, ಸಿದ್ಧಾಂತಗಳನ್ನೂ - ಅವು ಹೇಗೆ ಸಮಾಜಕ್ಕೆ, ಉಪಯೋಗವಾಗುತ್ತವೆಯೆಂಬುದನನ್ನು ಕುರಿತು ಭಕ್ತಿ ಮಾರ್ಗಗಳೂ, ಭಕ್ತರ ಚರಿತ್ರೆಗಳೂ,ಧಾರ್ಮಿಕ-ತಾತ್ವಿಕ ಗ್ರಂಥ ಪರಿಚಯಗಳನ್ನು ನೈಜ ಭಾಷೆಯಲ್ಲಿ ಸಮಾಜಕ್ಕೆ ತಲುಪಿಸುತ್ತಿದೆ. ಅಷ್ಟೇ ಅಲ್ಲದೇ-ಭಗವಂತನ ಆಲಯಗಳ ಇನ್ನಿತರ ದೇವಾಲಯಗಳಲ್ಲಿ ಜರಗುವ ಉತ್ಸವ ವಿಶೇಷ ಮಾಹಿತಿಗಳನ್ನು ಈ ಪತ್ರಿಕೆಯಲ್ಲಿ ಸಂದರ್ಭಾನುಸಾರ ಮುದ್ರಿತಗೊಳ್ಳುತ್ತಿರುತ್ತವೆ.


ದೇವಸ್ಥಾನ ಪತ್ರಿಕೆ-ಸಪ್ತಗಿರಿಗೂ, ಸಪ್ತಗಿರೀಶನಿಗೆ ಪತ್ರಿಕೆಯಾಗಿ 'ಸಪ್ತಗಿರಿ' ಎಂಬ ಹೆಸರು ಹೊಂದಿದೆ. ಈ ಹೆಸರು ಕೇಳುತ್ತಲೇ ಸಪ್ತಗಿರೀಶನೂ, ಸಪ್ತಗಿರಿಯೆಂಬ ನಿಟ್ಟಿನಲ್ಲಿ ಮೊದಲುಗೊಳ್ಳುತ್ತದೆ. ಕಾಲಾನುಸಾರವಾಗಿ ಎಷ್ಟೋ ಭಕ್ತಿ ಪತ್ರಿಕೆಗಳು ಬರುತ್ತಿದ್ದರೂ - ಈ ಪತ್ರಿಕೆ ಮಾತ್ರ ತನ್ನ ನಿಲುವನ್ನು ತಾನೇ ನಿಲ್ಲಿಸಿಕೊಳ್ಳುತ್ತಿದೆ. ಶಿಷ್ಟ ಸಾಹಿತ್ಯದಿಂದ ವಿಶಿಷ್ಟ ಸಾಹಿತ್ಯದವರೆಗೆ ಆಧ್ಯಾತ್ಮಕ್ಕೇ ಪ್ರಾಮುಖ್ಯತೆ ಯನ್ನು ನೀಡುತ್ತಿರುವ ವಿಶಿಷ್ಟ ಪತ್ರಿಕೆ 'ಸಪ್ತಗಿರಿ'ಆ ಬಾಲವೃದ್ದರಿಗೆಲ್ಲ ಸಹಾ ಆನಂದವನ್ನು ಜಿಜ್ಞಾಸೆಯನ್ನು ಪ್ರಚೋದಿಸುವ ಉತ್ತಮ ಪತ್ರಿಕೆ 'ಸಪ್ತಗಿರಿ'.

ಈವರೆಗೆ 'ಸಪ್ತಗಿರಿ' ಮಾಸಪತ್ರಿಕೆ ಆರಂಭಿಸಿ 50 ವಸಂತಗಳನ್ನು 2020 ನೇ ಮೇ ತಿಂಗಳಿಗೆ ಪೂರ್ತಿ ಮಾಡಿಕೊಳ್ಳಲಿದೆ. ಈ ಸಂದರ್ಭದಲ್ಲಿ 2020 ಜನವರಿ ಸಂಚಿಕೆಯಿಂದ ಸಪ್ತಗಿರಿ ಮಾಲಸಪತ್ರಿಕೆಯಲ್ಲಿ ಹಲವಾರು ಮಾರ್ಪಾಡುಗಳನ್ನು ಮಾಡಿದೆ. ಇಂದು ಚಿತ್ತಿದ ಮೊಳಕೆಗಳೇ ನಾಳಿನ ಬೆಳೆಯಾಗುತ್ತವೆ. ದೇಶದ ಭವಿಷ್ಯವನ್ನು ಪ್ರಕಾಶ ಮಾನವಾಗಿ ಬೆಳಗಿಸಬೇಕಾದರೆ ಇಂದಿನ ಮಕ್ಕಳು ಮಾನಕ್ಷೇಯ ಆದರ್ಶಗಳೊಂದಿಗೆ

ಬೆಳೆಯುವುದು ಬಹಳ ಅವಶ್ಯಕ. ತಿ.ತಿ.ದೇ. ಈ ನಿಟ್ಟಿನಲ್ಲಿ ಹೆಜ್ಜೆಹಾಕಿದೆ.ಮಕ್ಕಳಿಗಾಗಿಯೇ ಪ್ರತ್ಯೇಕವಾಗಿ 'ಬಾಲಸಪ್ತಗಿರಿ ಎಂಬ ಇಪ್ಪತ್ತು ಪುಟಗಳ ಸಂಚಿಕೆಯೊಂದನ್ನು ಪ್ರತಿ ತಿಂಗಳು ಹೊರತರಬೇಕೆಂದು ತಿ.ತಿ.ದೇ. ನಿರ್ಧರಿಸಿದೆ. ದಾಸ ಸಾಹಿತ್ಯ ಆಳ್ವಾರ ಸಾಹಿತ್ಯ,ಹಿಂದೂ ದೇವತೆಗಳು ಬಾಲನೀತಿ, ಚಿತ್ರಕಥೆ,ಕ್ವಿಜ್,ಚಿತ್ರಲೇಖನಗಳು ಮೊದ ಲಾದವುಗಳನ್ನು ಬಾಲ ಭಾಷೆಯಲ್ಲಿ 'ಬಾಲ ಸಪ್ತಗಿರಿ' ಹೊರ ತಂದಿದೆ. ಬಾಲರಲ್ಲಿ ನಮ್ಮ ಸಂಸ್ಕೃತಿ, ಧರ್ಮ ಪುರಾಣಗಳು, ಭಗವಂತನ ಕಥೆಗಳು, ಆಧ್ಯಾತ್ಮಿಕ ವಿಚಾರಗಳಲ್ಲಿ ಅಭಿರುಚಿಯನ್ನು ಉಂಟುಮಾಡಲು ಈ 'ಬಾಲಸಪ್ತಗಿರಿ'ಯನ್ನು ಪ್ರಾರಂಭಿಸಲಾಗಿದೆ.

ಎಷ್ಟೋ ಕವಿಗಳು, ರಚನೆಗಾರರು ಸೃಜನಾತ್ಮಕ ರಚನೆಗಳ ಮೂಲಕ ಆಧ್ಯಾತ್ಮಿಕರಂಗವನ್ನು ಸಂಪನ್ನಗೊಳಿಸುವಲ್ಲಿ ಆಯಾಕವಿಗಳ-ರಚನೆಗಾರರ ಪಾತ್ರದೊಂದಿಗೆ ಅವರ ರಚನೆಗಳನ್ನು ಸಹಾ ಪ್ರಕಟಿಸುತ್ತಿರುವಲ್ಲಿ ಪತ್ರಿಕಾ ಮಾಧ್ಯಮಗಳ ಪಾತ್ರವು ಬಹಳವೇ ಇದೆ. ರಚನೆಗಾರರ ಭಾವಗಳನ್ನು ಲಕ್ಷಾದಿ ಜನರಿಗೆ ತಿಳಿಸುತ್ತಾ ಈವರೆಗೆ ನಮ್ಮ ಸಮಾಜದಲ್ಲಿ ಧರ್ಮನ್ಯಾಯದಂತಹ ಆದರ್ಶಗಳನ್ನು ನಿಲ್ಲಿಸುವಲ್ಲಿ ಪತ್ರಿಕೆಗಳು ಸಹಾ ತಮ್ಮ ಕರ್ತವ್ಯವನ್ನು ನೂರಕ್ಕೆ ನೂರಷ್ಟು ಪಾಲು ತಪ್ಪದೇ ನಿರ್ವಹಿಸುತ್ತಿರುವವೆಂದೂ ನಿಸ್ಸಂದೇಹವಾಗಿ ಹೇಳಬಹುದು.ಆಧುನಿಕತೆಯೇ ಎಲ್ಲಡೆಯೂ ಪ್ರಬಲವಾಗಿ ಹರಡುತ್ತಿರುವಾಗ ಆಧ್ಯಾತ್ಮಿಕ ಪತ್ರಿಕೆಗಳು ಆದರಣೀಯ ರೀತಿಯಲ್ಲಿ ಬೆಳೆಯುತ್ತಿರುವುದು ಒಂದು ವಿಸ್ಮಯವೇ ಸರಿ. ನಮ್ಮ ಆಧ್ಯಾತ್ಮಿಕ ಸಾಧನೆಯ ಪ್ರತೀಕವೂ ಹೌದು.ಹತ್ತಿರ ಸಂಖ್ಯೆಯಲ್ಲಿ ಆರಂಭಗೊಂಡು ಇಡೀ ಆಂಧ್ರ ಪ್ರದೇಶವನ್ನು ಆಧ್ಯಾತ್ಮಿಕ ಕೇಂದ್ರವನ್ನಾಗಿ ಪರಿವರ್ತಿಸು ತ್ತಿರುವ ವಿಚಾರವು ತಿಳಿದಿದ್ದೇ. ಇದೆಲ್ಲಕ್ಕೂ ಓಂಕಾರ ಹಾಡಿದ ಗೌರವ ನಿಸ್ಸಂದೇಹವಾಗಿ ಸಪ್ತಗಿರಿಗೇ ಸಲ್ಲುತ್ತದೆ.

"ಓಂ ನಮೋ ವೇಂಕಟೇಶಾಯ"



# ಸಪ್ತಗಿರಿ ಸ್ವರ್ಣೋತ್ಸವದ ಸಂಚಿಕೆ

**– ಎಸ್. ಲಲಿತ**

"ಸಪ್ತಗಿರಿ" ಮೆದುಳಿಗೆ ಮಾಸಕ್ಕಾಗುವಷ್ಟು ಗ್ರಾಸವನ್ನು ಒದಗಿಸುವ ವಿಶೇಷ ಪತ್ರಿಕೆಯಾಗಿ ಬರುತ್ತಿದೆ. ಮುಖಪುಟ ಮಾತ್ರವಲ್ಲದೆ ಹಿಂಬದಿಯ ಪುಟವೂ ವರ್ಣರಂಜಿತವಾಗಿದ್ದು, ಆ ಜಗನ್ನಿಯಾಮಕನ ಸುಂದರ ರೂಪವನ್ನು ದರ್ಶಿಸುತ್ತ ಬರುತ್ತಿರುವುದು ಪತ್ರಿಕೆಯ ಮತ್ತೊಂದು ವಿಶೇಷ. ಮುಖಪುಟವನ್ನು ತೆರೆದರೆ, ಕೃಷ್ಣನ ಮನಮೋಹಕ ರೂಪದೊಂದಿಗೆ, ಅವನಿಂದಲೇ ನುಡಿಯಲ್ಪಟ್ಟ ಗೀತೆಯ ಎರಡು ಸಾಲುಗಳು ಮನಸ್ಸಿನ ಚಕ್ಷುಗಳನ್ನು ತೆರೆಸುತ್ತವೆ. ನಂತರ ಗೋಚರಿಸುವ ದಾಸರ ಕೀರ್ತನೆ ಅವನ ರೂಪವನ್ನು ಅವನ ಕೆಲಸಗಳನ್ನು ನೆನಪಿಸುತ್ತಲೇ ನಮ್ಮನ್ನು ಭಕ್ತಿ ಮಾರ್ಗದತ್ತ ಕರೆಯುತ್ತದೆ. ಭಗವಂತನತ್ತ ಸಾಗಲು ಹವಣಿಸುವ ಮನಸ್ಸು, ದಯಾಶತಕವೆಂಬ ಪುಷ್ಕರಣಿಯಲ್ಲಿ ಮಿಂದು ಶುದ್ಧವಾಗುತ್ತದೆ. ಆರ್ದ್ರಗೊಂಡ ಓದುಗರ ಮನಸ್ಸು ''ಸಪ್ತಗಿರಿ''ಯನ್ನು ಎರಲು ತೊಡಗಿದಾಗ ಮುಂದಿನ ಮೆಟ್ಟಿಲುಗಳ ಸಿಂಹಾವಲೋಕನ ವಿಷಯಸೂಚಿಕೆಯಿಂದ ತಿಳಿಯುತ್ತದೆ. ಸಂಪಾದಕೀಯದಲ್ಲಿನ ಲೇಖನಗಳು ಸಮಯೋಚಿತ ಮತ್ತು ಅರ್ಥಪೂರ್ಣವಾಗಿದ್ದು ಓದುಗರ ಮನಸ್ಸಿಗೆ ನೇರವಾಗಿ ತಲುಪುತ್ತವೆ. ನಂತರದ ಪುಟಗಳು ಸಾಲುಸಾಲು ಮೆಟ್ಟಿಲುಗಳಾಗಿ ಸಪ್ತಗಿರಿಯ ಒಡೆಯನ ಮಹಿಮೆ ಮಾತ್ರವಲ್ಲದೆ, ನಮ್ಮ ಭಾರತೀಯ ಸಂಸ್ಕೃತಿಯಲ್ಲಿನ ಆಚಾರ, ವಿಚಾರ, ಹಬ್ಬ ಹರಿದಿನಗಳು,ಮತ್ತು ನಮ್ಮ ಭವ್ಯ ಪರಂಪರೆಗಳ ದಿವ್ಯದರ್ಶನವನ್ನು ಮಾಡಿಸುವಂತಿವೆ. ನುರಿತ ಲೇಖಕ ಲೇಖಕಿಯರಿಂದ ಮೂಡಿಬರುವ ಲೇಖನಗಳು ಹಬ್ಬಗಳ ಆಚರಣೆ, ಉದ್ದೇಶ ಮತ್ತು ಅರ್ಥಗಳನ್ನು ವಿವರಿಸುತ್ತ ನಮ್ಮ ಭಾವಕೋಶಕ್ಕೆ ಲಗ್ಗೆ ಹಾಕುತ್ತವೆ. ವೇದ ಮತ್ತು ಉಪನಿಷತ್ತುಗಳನ್ನು ಕುರಿತಾದ ಮಾಹಿತಿಗಳು ಓದುಗರ ಜ್ಞಾನದಾಹವನ್ನು ತಣಿಸುವಂತಿವೆ. ಆಯುರ್ವೇದವನ್ನು ಕುರಿತಾದ ಲೇಖನಗಳು ಆರೋಗ್ಯ ನಿರ್ವಹಣೆಯತ್ತ ಗಮನಹರಿಸಲು ನೆರವಾಗಿವೆ. ತಿರುಮಲೆಗೆ ಸಂಬಂಧಿಸಿದ ಮಾಹಿತಿಗಳು ಮತ್ತು ದೂರವಾಣಿ ಸಂಖ್ಯೆಗಳು ಯಾತ್ರಿಕರಿಗೆ ನೆರವಾಗುವಂತಿವೆ. ಸಪ್ತಗಿರಿಯ ಎಲ್ಲಪುಟಗಳು ಉಪಯುಕ್ತವಾದ ಮಾಹಿತಿಗಳನ್ನು ಹೊತ್ತು ಬರುತ್ತಿರುವುದಲ್ಲದೆ ಮನಸೆಳೆಯುವಂತಹ ವರ್ಣಚಿತ್ರಗಳಿಂದ ಕೂಡಿರುವುದು ಈ ಪತ್ರಿಕೆಯ ವಿಶೇಷವಾಗಿದೆ. ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳು ಬೆಳಗುವ ದೀಪಗಳಂತಿದ್ದು ಓದುಗರ ಜ್ಞಾನದ ವಲಯವನ್ನು ಪ್ರಕಾಶಿಸುವಂತಿವೆ. ಲೇಖಕರನ್ನು ಮತ್ತು ಓದುಗರನ್ನು ಭಕ್ತಿಯ ದಿವ್ಯ ಪಥದಲ್ಲಿ ಸಾಗುವಂತೆ ಮಾಡುತ್ತಿರುವ ಸಪ್ತಗಿರಿ ಬಳಗದ ಎಲ್ಲರೂ ಅಭಿನಂದನಾರ್ಹರು. ಸಂಪಾದಕರು, ಛಾಯಾಗ್ರಾಹಕರು ಮತ್ತು 'ಸಪ್ತಗಿರಿ' ಪತ್ರಿಕಾಬಳಗದ ಎಲ್ಲರಿಗೂ ಧನ್ಯವಾದಗಳು.

# ಸಿಂಹ ರೂಪನಾದ ಶ್ರೀ ಹರಿ




– ಎಸ್. ವೆಂಕಟ ರಾಘವನ್
9845793917

ಎಲ್ಲೆಲ್ಲಿ ನೀನೆಲ್ಲಿ ಹರಿಚರಣವೆಲ್ಲೆಲ್ಲಿ ನಾನಿರುವೆ ಇಲ್ಲೊಂದೇ ನಾರಾಯಣ।
ಅಲ್ಪಬುದ್ಧಿಯಿಂದ  ಅರಿಯದೆ ನಾ ಕಾಣೆ ನಿನ್ನಯ ಮಹಿಮೆಯ ನಾರಾಯಣ॥
ಪುಂಡರೀಕಾಕ್ಷ ಪುರುಷೋತ್ತಮನ ಪಾದ ಅಲ್ಲೇನು ಇಲ್ಲೇನು ಸರ್ವತ್ರ ನಾರಾಯಣ।
ಮೂರಡಿಯ ನೆಲಕೇಳಿ ಸೊಗಸಾದ ವಟುವಾಗಿ ಭುವಿ ಆಕಾಶ ಆಕ್ರಮಿಸಿದ ನಾರಾಯಣ॥
ಅಸುರರ ಮನೆಯಲ್ಲಿ ಅರಳುವ ಜ್ಞಾನದೀಪ ಬೆಳಗಿತಯ್ಯ ಶ್ರೀ ಪ್ರಹ್ಲಾದರಾಯರಿಂದ।
ಜಪಿಸುತ ಹರಿನಾಮ ಜಗನ್ನಾಥ ಪಥವನ್ನು ಆಡಿಪಾಡಿದರಯ್ಯ ಶ್ರೀ ಹರಿಯ ಮಹಿಮೆ॥
ಧೃಡಭಕುತಿ ಬಿಡದೆ ದುಷ್ಟ ಹಿರಣ್ಯನ ಹಿಂಸೆ ಒಂದೊಂದು ಸಾಲದು ಅನುಭವಿಸಲಿಪ್ಪ।
ಆದಿ ಕೇಶವನ ನಾಮ ಆಕ್ಷಣದಿ ರಕ್ಷಣೆ ಎಂದೆಂದೂ ಆಭಯ ಅಚ್ಯುತನ ಕೃಪೆ ಇರಲು॥
ಮೋಹಾಂಧಕಾರ ಬೆಸೆದು ಕಂಭದಲ್ಲಿರುವನಾ  ಎಂದು ಗದೆಯನ್ನು ಬಾರಿಸಿದ ಅಸುರ ರಾಜ ।
ವಿದ್ಯುಲ್ಲತಾ ಘೋಷದಿ ವೀರ ಘರ್ಜನೆ ಮಾಡಿ ಪ್ರಕಟವಾದರಯ್ಯ ನಾರಾಯಣ॥
ದುಷ್ಟನ ಸಂಹರಿಸಿ ಧರ್ಮವ ಉಳಿಸಿ ಭಾಗವತೋತ್ತಮನ ಕಾಯ್ದ ಶ್ರೀ ನಾರಸಿಂಹ ।
ಎಲ್ಲಿರಲಿ ಹೇಗಿರಲಿ ಭುವಿಯಲ್ಲಿ ಎಲ್ಲರಿಗೂ ಅಭಯಪ್ರದಾತ ಶ್ರೀ ವೆಂಕಟನಾರಸಿಂಹ ॥

ಪರಮಾತ್ಮ ಸರ್ವಾಂತರ್ಯಾಮಿ ಶ್ರೀ ಮಹಾವಿಷ್ಣು ತ್ರಿಮೂರ್ತಿಗಳಲ್ಲಿ ಸ್ಥಿತಿಕಾರಕ, ಧರ್ಮರಕ್ಷಕ. ವೇದೋದ್ಧಾರ, ಸಜ್ಜನರ ಸಂರಕ್ಷಣೆ, ಧರ್ಮರಕ್ಷಣೆಗಾಗಿ ಬಗೆ ಬಗೆಯ ರೂಪದಲ್ಲಿ ಅವತಾರ ತಾಳಿದರು. ಮೂಲರೂಪದಲ್ಲಿ ಶ್ರೀ ಮಹಾವಿಷ್ಣು ಶ್ರೀಮನ್ನಾರಾಯಣ ಎಂಬುವ ನಾಮಗಳು "ವಿಷ್" ಎಂಬುವ ಧಾತುವಿನಿಂದ ವಿಷ್ಣು ಎನ್ನುವ ನಾಮಕ್ಕೆ ಅರ್ಥ ಬರುವುದು. ವಿಷ್ ಎಂದರೆ ಎಲ್ಲಡೆ ವ್ಯಾಪಿಸಿರುವ ಅರ್ಥ. ಎಲ್ಲಡೆ ವ್ಯಾಪಿಸಿರುವ ವಿಷ್ಣು ಶ್ರೀ ಹರಿ ಧರ್ಮ ಪರಿರಕ್ಷಕ "ಯದ್ ವಿಷಿತೋ ಭವತಿ ತದ್ ವಿಷ್ಣುರ್ಭವತಿ!"ಎಲ್ಲೆಡೆ ಪ್ರವೇಶಿಸಿ ಇರುವ ದೇವರು ಶ್ರೀ ಮಹಾವಿಷ್ಣು. ಶ್ರೀ ಹರಿ, ಶ್ರೀಮನ್ನಾರಾಯಣ! ವಿಷ್ಣು ಸಹಸ್ರ ನಾಮದಲಿ ವರ್ಣಿಸಿದಂತೆ: "ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯ ಭವತ್ಪ್ರಭುಃ। ಭೂತಕೃದ್ಭೂತ ಭೃದ್ಭಾವೋ ಭೂತಭಾವನಃ"॥ ನಡೆದ ಕಾಲಕೆ ನಡೆಯುತ್ತಿರುವ ಕಾಲದಲ್ಲಿ, ಮುಂಬರುವ ಕಾಲಕೆ ಪ್ರಭು ಶ್ರೀ ಹರಿ! ಶ್ರೀ ಹರಿ ಎಲ್ಲ ಭೂತಗಳ ಸೃಷ್ಟಿಸಿ ಪೋಷಣೆ ಮಾಡುತ, ಭಾರವ ಹೊತ್ತು ಜೀವಿಗಳಲ್ಲಿ ಇರುವರು. ವಾದಿರಾಜ ಗುರುಗಳು ವಿರಚಿತ ದಶಾವತಾರ ಸ್ತೋತ್ರದಲ್ಲಿ ಹತ್ತು ಅವತಾರಗಳನ್ನು ಮಹಿಮಾನ್ವಿತವಾಗಿ ವರ್ಣಿಸಿದ್ದಾರೆ.

ನಮೋಽಸ್ತು ನಾರಾಯಣಮನ್ದಿರಾಯ ನಮೋಽಸ್ತು ಹಾರಾಯಣಕನ್ದರಾಯ ।
ನಮೋಽಸ್ತು ಮತ್ಸ್ಯಾಯ ಲಯಾಬ್ಧಿಗಾಯ ನಮೋಽಸ್ತು ಕೂರ್ಮಾಯ ಪಯೋಬ್ಧಿಗಾಯ
ನಮೋ ವರಾಹಾಯ ಧರಾಧರಾಯ ನಮೋ ನೃಸಿಂಹಾಯ ಪರಾತ್ಪರಾಯ
ನಮೋಽಸ್ತು ಶಕ್ರಾಶ್ರಯ ವಾಮನಾಯ ನಮೋಽಸ್ತು ವಿಪ್ರೋತ್ಸವ ಭಾರ್ಗವಾಯ
ನಮೋಽಸ್ತು ಸೀತಾಹಿಕ ರಾಘವಾಯ ನಮೋಽಸ್ತು ಪಾರ್ಥಸ್ತುತ ಯಾದವಾಯ
ನಮೋಽಸ್ತು ಬುದ್ಧಾಯ ವಿಮೋಹಕಾಯ ನಮೂಽಸ್ತು ತೇ ಕಲ್ಕಿ ಪಯೋದಿತಾಯ
ನಮೋಽಸ್ತು ಪೂರ್ಣಾಮಿತಸಣಾಯ ಸಮಸ್ತ ನಾಥಾಯ ಹಯಾನನಾಯ

ಈ ಬ್ರಹ್ಮಾಂಡದಲ್ಲಿ ಏಳು ಊರ್ಧ್ವ ಲೋಕಗಳು, ಏಳು ಅಧೋಲೋಕಗಳು ಇರುವವು. ಭೂ ಭುವಃ, ಸುವಃ, ಮಹಃ, ತಪಃ, ಜನಃ, ಸತ್ಯ ಲೋಕಗಳು ಊರ್ಧ್ವ ಲೋಕಗಳು. ಏಳು ಅಧೋಲೋಕಗಳು ಅತಲ,ವಿತಲ,ಸುತಲ, ರಸಾತಲ, ಮಹಾತಲ, ತಲಾತಲ, ಪಾತಾಳ, ಪುರಾಣದಲ್ಲಿ ಚತುರ್ದಶ ಭುವನಗಳ (ಲೋಕಗಳ) ಪ್ರಸ್ತಾಪನೆ ಇದೆ. ವಿರಾಟ್ ಪುರುಷನ ಸೊಂಟದಿಂದ ಮೇಲೆ ಏಳು ಲೋಕಗಳು, ಕೆಳಗೆ ಏಳು ಲೋಕಗಳು, ಎಂದು ವರ್ಣಿಸಲಾಗಿದೆ. ವಿಶ್ವರೂಪನಾದ ಪರಮಾತ್ಮನು ಹದಿನಾಲ್ಕು ಲೋಕಗಳಲ್ಲಿ ಹಮ್ಮಿಕೊಂಡಿದ್ದಾರೆ. ಪುರುಷ ಸೂಕ್ತ ಅಥವಾ ಪೌರುಷ ಋಗ್ವೇದದಲ್ಲಿ ಪರಮಾತ್ಮನನ್ನು ಪುರುಷ ರೂಪದಲ್ಲಿ ವರ್ಣಿಸಿ, ವಿಶ್ವವನ್ನು ಹಮ್ಮಿ ರಕ್ಷಿಸುವ ವರ್ಣನೆ ಇದೆ.

ಸತ್ಯಲೋಕವನ್ನು ಬ್ರಹ್ಮಲೋಕವೆಂದು ಕರೆಯುವರು. ಸತ್ಯಲೋಕದ ಮೇಲೆ ವೈಕುಂಠವಿದೆ. ಇದೇ ಪರಂಧಾಮನಾದ ಶ್ರೀ ಹರಿ ಮತ್ತು ಶ್ರೀ ಮಹಾಲಕ್ಷ್ಮಿ ಇರುವ ಲೋಕ. ಕುಂಠವೆಂದರೆ ಅಂತರಾಯ ನಿರಂತರವಾಗಿ ಸರ್ವತ್ರ ಪ್ರವರ್ತಮಾನವಾಗಿರುವ ಶ್ರೀ ಹರಿಯ ನಿವಾಸ ವೈಕುಂಠ. ನಾರಾಯಣ ಭಟ್ಟಾತಿರಿ ರಚಿಸಿದ ಶ್ರೀ ಮನ್ನಾರಾಯಣೀಯಂ ವ್ಯಾಸ ಭಾಗವತ ಪುರಾಣ ಸಂಸ್ಕೃತ ಭಾಷೆಯಲ್ಲಿ ರೂಪತಾಳಿದ ರಚನೆ. ಶ್ರೀ ಹರಿಯ

ಮಹಿಮೆ ಮತ್ತು ಭಾಗವತದ ಎಲ್ಲ ಅಂಶಗಳನ್ನು ಕ್ಲುಪ್ತವಾಗಿ ವರ್ಣಿಸಲಾಗಿದೆ. ಲೋಕಗಳ ಒಡೆಯ ಶ್ರೀ ಹರಿಯ ವೈಕುಂಠ ವರ್ಣನೆ ಕೂಡ ಇದೆ.

ಯಸ್ಮಿನ್ ನಾಮ ಚತುರ್ಭುಜಾ ಹರಿಮಣಿ
ಶ್ಯಾಮಾ ವದಾತಾತ್ವಿಷೋ ನಾನಾ ಭೂಷಣರತ್ನ
ದೀಪೀತಾದಿಶೋ ರಾಜಾಡವಿಮಾನಾಲಯಃ।
ಭಕ್ತಿ ಪ್ರಾಪ್ತತಥಾ ವಿಧೋನ್ನ ತಾಪದಾ
ದೀವ್ಯಂತಿ ದಿವ್ಯಾ ಜನಾಃ ತತ್ ತೇ ಧಾಮ
ನಿರಸ್ತಸರ್ವಶಮಲಂ ವೈಕುಂಠರೂಪಂ ಜಯೇತ್॥

ಶ್ರೀ ಹರಿ ನಾಲ್ಕು ಭುಜಗಳಿಂದ ನೀಲಮಣಿವರ್ಣ ದೇಹ ಕಾಂತಿಯಿಂದ ರತ್ನಾಭರಣಭೂಷಿತರಾಗಿ ದಿಕ್ಕುಗಳನ್ನು ಪ್ರಕಾಶಿಸುತ, ರಾಜಭವನವಾಸಿ,ವಿಮಾನದಲ್ಲಿ ವಿಹರಿಸುವ ಶ್ರೀಹರಿಯ ನಿಲಯವಾದ ವೈಕುಂಠ ಸರ್ವಪಾಪಗಳನ್ನು ನಾಶ ಮಾಡಿ ಜಯ ಪ್ರಾಪ್ತಿ ಆಗುವುದು. ವೈಕುಂಠದಲ್ಲಿ ವಜ್ರ ವೈಡೂರ್ಯಗಳಿಂದ ಅಲಂಕರಿಸಿದ ಅನೇಕ ಅರಮನೆಗಳಿವೆ. ವೈಕುಂಠದ ಮಧ್ಯಭಾಗವನ್ನು 'ಅಯೋಧ್ಯ' ಎಂದು ಕರೆಯುತ್ತಾರೆ. ಇದು ಮುಕ್ತ ಸ್ಥಾನ.ಇದರಲ್ಲಿ ಅಮುಕ್ತರು ಯಾರೂ ಪ್ರವೇಶಿಸುವಂತಿಲ್ಲ. ವೈಕುಂಠಕ್ಕೆ ಸಪ್ತ ದ್ವಾರಗಳು ಏಳನೇ ದ್ವಾರಕೆ ಪಾಲಕರು ಜಯವಿಜಯರು. ಜಯ ವಿಜಯರಿಗೆ ಕೈ ಮುಗಿದು ಪ್ರವೇಶ ಮಾಡಬೇಕು. ಏಳನೆಯ ಬಾಗಿಲನು ದಾಟಿ ಹೋದಾಗ ಶ್ರೀ ಲಕ್ಷ್ಮೀನಾರಾಯಣರ ದರ್ಶನ ಪ್ರಾಪ್ತಿ ಆಗುವುದು ವೈಕುಂಠದಲ್ಲಿ ಪರಮ ಪವಿತ್ರವಾದ ವಿರಜಾ ನದಿ ಹರಿವುದು.

### ಬ್ರಹ್ಮಮಾನಸ ಪುತ್ರರು

ಬ್ರಹ್ಮ ದೇವರು ಸೃಷ್ಟಿಕರ್ತ.ಮೂಲ ಚೇತನ ಪರಬ್ರಹ್ಮ, ಕಾರ್ಯ ಬ್ರಹ್ಮ ಜಗತ್ತಿನ ಆತ್ಮ ಹಿರಣ್ಯಗರ್ಭ. ಬ್ರಹ್ಮನ ಮನಸ್ಸಿನಿಂದ ಸೃಷ್ಟಿಯಾದವರು ಸನಕ, ಸನಂದನ, ಸನಾತನ ಮತ್ತು ಸನತ್ಕುಮಾರರು. ಬ್ರಹ್ಮಪುತ್ರರು ಸಾಕ್ಷಾತ್ ಬ್ರಹ್ಮ ದೇವರಿಂದ ಬ್ರಹ್ಮಜ್ಞಾನ ಪಡೆದವರು.ಬ್ರಹ್ಮಜ್ಞಾನದಿಂದ ಮಹದಾನಂದ ಸ್ಥಿತಿಯನ್ನು ಪಡೆದರು. ಬ್ರಹ್ಮ ದೇವರು ಸೃಷ್ಟಿಕಾರ್ಯದಲ್ಲಿ ಸಹಾಯ ಮಾಡುವಂತೆ ಕೇಳಿದಾಗ ನಿರಾಕರಿಸಿ ತಪಸ್ಸು ಮಾಡಲು ತೆರಳಿದರು. ನಾಲ್ಕು ಪುತ್ರರು ಬಾಲ ಪ್ರಾಯದಲ್ಲೇ ಇರುವರು. ಸತ್ವ ಗುಣದಿಂದ ವೈರಾಗ್ಯದಲ್ಲಿದ್ದು ಲೋಕ ಸಂಚಾರ ಮಾಡುತ ದೇವರ ಗುಣಗಾನ ಮಾಡುವರು.ಬಾಲ್ಯದಲ್ಲೇ ವೇದ ಕಲಿತವರು.ಲೋಕ ಸಂಚಾರ ಮಾಡುತ್ತ ಜ್ಞಾನವನ್ನು ಬೋಧನೆ ಮಾಡುತಲಿರುವರು. ಬ್ರಹ್ಮಚರ್ಯವ ಪಾಲಿಸಿ ನಿರಂತರ ಕುಮಾರ ದಶೆಯಲ್ಲಿ ಇರುವ ಮಹಿಮಾನ್ವಿತ ಋಷಿಗಳು.ಅಜ್ಞಾನಕ್ಕೆ ಅಹಂಕಾರವೇ ಮೂಲ,ಆತ್ಮ ಒಂದೇ ಸತ್ಯ ಎಂಬುವ ಜ್ಞಾನವನ್ನು ಪೃಥು ಚಕ್ರವರ್ತಿಗೆ ಮತ್ತು ಧೃತರಾಷ್ಟ್ರರಿಗೆ ಬೋಧನೆ ಮಾಡಿದವರು. ನಾರದ ಮಹರ್ಷಿ ಮಾರ್ಕಂಡೇಯ ಮುನಿ ಜ್ಞಾನ ಬೋಧನೆ ಇವರಿಂದ ಪಡೆದವರೇ.ನಂತರ ಬ್ರಹ್ಮ ದೇವರಿಂದ ಪ್ರಜಾಪತಿಗಳಾಗಿ ಜನಿಸಿದರು ಮಾರೀಚಿ, ಅತ್ರಿ, ಅಗ್ನಿರಸ, ಪುಲಸ್ತ್ಯ, ಪುಲಹ, ಕೃತು, ವಶಿಷ್ಟ, ದಕ್ಷ, ಭೃಗು ಮತ್ತು ನಾರದರು.

### ಜಯವಿಜಯರಿಗೆ ಶಾಪ

ಸನಕ ಸನಂದಾದರು ಹರಿನಾಮ ಪಾಡುತ ವೈಕುಂಠಕ್ಕೆ ಬಂದರು. ಆರು ದ್ವಾರಕಗಳನ್ನು ದಾಟಿ ಏಳನೆಯ ದ್ವಾರದಲ್ಲಿ ಬಂದಾಗ ಜಯವಿಜಯರು ಅವರನ್ನು ತಡೆದರು. ಅಂತಃಪುರದಲ್ಲಿ ಪ್ರವೇಶ ನಿಷಿದ್ಧ ಎಂದು ಹೇಳಿ ದ್ವಾರದಲ್ಲಿಯೇ ನಿಲ್ಲಿಸಿದರು. ಬ್ರಹ್ಮ ಮಾನಸಪುತ್ರರು ತಮ್ಮ ಪರಿಚಯ ಕೊಟ್ಟು ಶ್ರೀ ಹರಿಯ ದರುಶನ ಮಾಡಲು ಅಡ್ಡಿ ತೊಲಗಲು ಹೆಚ್ಚರಿಸಿದರು. ಅಹಂಕಾರದಿಂದ ಬಂದ ಬಾಲಕರನ್ನು ಹೇಳನೆ ಮಾಡಿ ಅಲ್ಲೇ ತಡೆದರು. ಕೋಪಕ್ಕೆ ಒಳಗಾದ ಬಾಲ ಋಷಿಗಳು ಜಯವಿಜಯರನ್ನು ಭೂಲೋಕದಲ್ಲಿ ಜನ್ಮತಾಳುವಂತೆ ಶಾಪವ ಕೊಟ್ಟರು. ವಿಷಯವನ್ನು ತಿಳಿದ ಶ್ರೀ ಹರಿ ಅಂತಃ ಪುರದಿಂದ ಹೊರಬಂದು ಬಾಲ ಋಷಿಗಳಿಗೆ ದರುಶನ ಕೊಟ್ಟರು. ಸನಕ ಸನಂದಾದರು ಶ್ರೀ ಹರಿಯನ್ನು ನಮಸ್ಕರಿಸಿದರು. ಜಯವಿಜಯರು ಶಾಪ ವಿಮುಕ್ತಿಗಾಗಿ ಶ್ರೀ ಹರಿಯನ್ನು ಶರಣು ಬೇಡಿದರು. ಋಷಿಗಳ ಶಾಪಕೆ ವಿಮೋಚನೆ ಇಲ್ಲ. ವೈಕುಂಠ ಬಿಡುವ ಸಮಯ ಬಂದಿದೆ! ಆದರೆ ಒಂದು ಉಪಶಮನ, ಏಳು ಸಾತ್ವಿಕ ಮಾನವ ಜನ್ಮ ಅಥವಾ ಮೂರು ರಾಕ್ಷಸರ ಜನ್ಮತಾಳಲೇ ಬೇಕು ಎಂದೂ ಸೂಚಿಸಿದರು. ಶ್ರೀಹರಿಯ ಬಿಟ್ಟು ಇರಲಾರೆವು ಎಂದು ಸ್ವಾಮಿಯ ಪಾದಕ ಶರಣು ಹೋಗಿ ಮೂರು ಜನ್ಮವಾದರೆ ತ್ವರಿತ ವೈಕುಂಠ ಸೇರಬಹುದೆಂದು ರಾಕ್ಷಸ ಜನ್ಮ ತಾಳಿ ಶ್ರೀ ಹರಿಯಿಂದಲೇ ಹತರಾಗಿ ಮರಳಿ ವೈಕುಂಠಕ್ಕೆ ಬರಲು ಬೇಡಿಕೊಂಡರು. ಶ್ರೀ ಹರಿ ಜಯ ವಿಜಯರಿಗೆ ಹಾಗೆಯೇ ಆಗಲಿ ಎಂದು ಅಭಯವ ಕೊಟ್ಟರು. ಸನಕ ಸನಂದಾದರು ಜಯ ವಿಜಯರನ್ನು ಅಹಂಕಾರ ಬಿಟ್ಟು ಬದುಕಲು ಹೆಚ್ಚರಿಕೆ ನೀಡಿ ಶ್ರೀ ಹರಿಯನು ನಮಿಸಿ ವೈಕುಂಠದಿಂದ ತೆರಳಿದರು.ಭೂಮಿಯಲ್ಲಿ ಜಯವಿಜಯರು ಹಿರಣ್ಯಾಕ್ಷ-ಹಿರಣ್ಯಕಶಿಪು, ರಾವಣ- ಕುಂಭಕರ್ಣ ಹಾಗೂ ಮೂರನೆಯ ಜನ್ಮದಲ್ಲಿ ಶಿಶುಪಾಲ ಮತ್ತು ದಂತವಕ್ತ್ರರಾಗಿ ಶ್ರೀ ಹರಿಯ ವೈರಿಗಳಾಗಿ ಜನಿಸುತ್ತಾರೆ.

### ಹಿರಣ್ಯಾಕ್ಷ ಹಿರಣ್ಯಕಶಿಪು ವೃತ್ತಾಂತ

ಹಿರಣ್ಯಾಕ್ಷ ಬಲವಂತನಾಗಿ ಮರಣವಿಲ್ಲದೆ ಇರಲು ಬ್ರಹ್ಮ ದೇವರನ್ನು ಕುರಿತು ತಪಸ್ಸನ್ನು ಮಾಡಿದರು. ಘೋರತಪಸ್ಸಿಗೆ ಸಂತುಷ್ಟರಾದ ಬ್ರಹ್ಮದೇವರು ಪ್ರತ್ಯಕ್ಷವಾಗಿ ವರವನ್ನು ಕೇಳಲು ಮರಣ ಭಯ ಇರಬಾರದು.ಯಾವುದೇ ಪ್ರಾಣಿಗಳಿಂದ,

ಅಸ್ತ್ರಗಳಿಂದ ಮರಣವೇ ಇಲ್ಲದ ವರವ ಕೇಳಿದರು. ಬ್ರಹ್ಮದೇವರು ವರವನ್ನು ಕೊಟ್ಟು ಅಂತ ರ್ಧಾನ ವಾದರು. ಗರ್ವಿತನಾಗಿ ತನ್ನ ವರದ ಅಭಯವಿದೆ ಎಂದು ಧರ್ಮವ ಬಿಟ್ಟು ಸಹೋದರ ಹಿರಣ್ಯಾಕ್ಷನ ಜೊತೆ ಮುನಿಗಳಿಗೆ, ಸಜ್ಜನರಿಗೆ,ಪಶುಪ್ರಾಣಿಗಳಿಗೆ ಹಿಂಸೆ ಕೊಡಲಾರಂಭಿಸಿದರು. ಬಲಶಾಲಿ ಎಂದು ಗರ್ವ ದಿಂದ ಭೂಮಿಯನ್ನು ಸಾಗರದಲ್ಲಿ ಅಡಗಿಸಿ ಭೂ ಮಾತೆಗೆ ತೊಂದರೆ ಕೊಟ್ಟು ವಿಕಟ ಅಟ್ಟಹಾಸ ಮಾಡಿ ಮೆರೆಯುತ್ತಿದ್ದನು. ಭೂದೇವಿ ಹಸುವಿನ ಆಕಾರ ತಾಳಿ ಪರಮಾತ್ಮನ ಶರಣು ಬೇಡಿದರು. ಶ್ರೀ ಹರಿ ಭೂದೇವಿಯನ್ನು ರಕ್ಷಿಸಲು ವರಾಹ ರೂಪವ ತಾಳಿದರು. ಸಂಸ್ಕೃತದಲ್ಲಿ "ವರಾಹ" ಎಂದರೆ ಕಾಡು ಹಂದಿ. ಅವತಾರ ಪುರುಷ ಭೂಮಿಯನ್ನು ನೀರಿನಿಂದ ಮೇಲಕ್ಕೆ ಎತ್ತಲು ಕಾಡು ಹಂದಿಯ ರೂಪಧಾರಣೆ ಮಾಡಿದರು. ಎರಡು ಕೋರೆಗಳ ಮಧ್ಯ ಭೂಮಿಯನ್ನು ಸಿಲುಕಿಸಿ ಮೇಲಕ್ಕೆ ಎತ್ತಿದರು.

ಭೂಮಿಯನ್ನೇ ಎತ್ತಿ ಸಮುದ್ರದಿಂದ ಪಾರುಮಾಡಿ ಪುನಃ ಕಕ್ಷೆಯಲ್ಲಿ ಸ್ಥಾಪಿಸಲು ಪರಮಾತ್ಮ ಎಷ್ಟು ದೊಡ್ಡವರಾಗಿರ ಬಹುದು ಎನ್ನುವ ಆಲೋಚನೆ ಬರುವುದು. ಪುರುಷ ಸೂಕ್ತಮ್ ಋಗ್ವೇದದಲ್ಲಿ ಶ್ರೀ ಹರಿಯ ಮಹಿಮೆ ಮತ್ತು ಸರ್ವವನ್ನು ವ್ಯಾಪಿ ಸಿರುವ ವಿಷ್ಣು ದೇವರನ್ನು ವರ್ಣಿಸುತ್ತದೆ. ಸೂಕ್ತದಲ್ಲಿ ಪುರುಷ ಪದದ ಅರ್ಥ ಶ್ರೀಹರಿ ಪರಮಾತ್ಮನಾಗಿ ಎಲ್ಲಡೆಯಲ್ಲೂ ಹಮ್ಮಿರುವ ಯತಾರ್ಥವನ್ನು ಸೂಚಿಸುವುದು. ಪರಮಾತ್ಮ ಸಮಸ್ತ ಜೀವಿಗಳನ್ನು ಪಶುಪಕ್ಷಿ ಪ್ರಾಣಿಗಳನ್ನು ಸೃಷ್ಟಿ ಮಾಡಿ, ಆತ್ಮ ಸ್ವರೂಪದಲ್ಲಿ ನೆಲೆಸಿದ್ದಾರೆ. "ಓಂ ಸಹಸ್ರ ಶೀರ್ಷಾ ಪುರುಷಃ ಸಹಸ್ರಾಕ್ಷ ಸಹಸ್ರಪಾತ್। ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಮ್" ಸಾವಿರಾರು ತಲೆಯುಳ್ಳ ಸಾವಿರಾರು ಕಣ್ಣುಗಳಿದ್ದು, ಸಾವಿರಾರು ಕಾಲುಳ್ಳ ಪರಮಾತ್ಮ ಬ್ರಹ್ಮಾಂಡವನ್ನು ವ್ಯಾಪಿಸಿದ್ದಾರೆ ಮತ್ತು ಭುಮಿಯನ್ನು ಸೇರಿಸಿ ಬ್ರಹ್ಮಾಂಡದ ಗಾತ್ರಕ್ಕಿಂತ ೧೦ ಅಂಗುಲ ಹೆಚ್ಚು! ಪರಮಾತ್ಮ ಬ್ರಹ್ಮಾಂಡನಾಯಕ ಎನ್ನುವ ವಿಷಯ ವಾಮನ ಅವತಾರದಲ್ಲಿ ಭೂಮಿ ಆಕಾಶ ಶ್ರೀ ಹರಿಯ ಎರಡು ಅಡಿಯಲ್ಲಿ ಹಮ್ಮಿರುವ ಪುರಾಣ ಕಥೆ ಸ್ಮರಿಸಬಹುದು. ಭೂಮಿಯನ್ನು ಎತ್ತಿ ಹಿಡಿದು ಹಿರಣ್ಯಾಕ್ಷನ ಜೊತೆ ಘೋರ ಯುದ್ಧ ಮಾಡಿದರು. ಕೊನೆಗೆ ಹಿರಣ್ಯಾಕ್ಷನ ವಧೆ ಆಯಿತು. ಭೂಮಾತೆ ರಾಕ್ಷಸನ ಬಾರಿ ಯಿಂದ ಬಿಡುಗಡೆ ಆಗಿ ಯಥಾಸ್ಥಾನದ ಕಕ್ಷೆಯಲ್ಲಿ ಸ್ಥಾಪಿತ ರಾದರು. ಭೂಮಿಯ ಗಾತ್ರವನ್ನು ಎತ್ತಲು ಶ್ರೀಹರಿ ಆಕಾಶದಲ್ಲಿ ಮಹಾರೂಪ ತಾಳಿದರು. ವಿಶ್ವರೂಪ ಶ್ರೀ ಹರಿ ಸರ್ವಾಂತ ರ್ಯಾಮಿ ಬ್ರಹ್ಮಾಂಡನಾಯಕ. ತಿರುಮಲೆ ಕ್ಷೇತ್ರ ಆದಿವರಾಹ ಕ್ಷೇತ್ರ! ಶ್ರೀನಿವಾಸ ದೇವರು ಲಕ್ಷ್ಮೀವರಾಹ ಸ್ವಾಮಿಯ ಅಪ್ಪಣೆ ಪಡೆದು ತಿರುಮಲೆಯ ಸಪ್ತಗಿರಿಯ ಮೇಲೆ ನೆಲಸಿದರು. ಇಂದಿಗೂ ಶ್ರೀನಿವಾಸ ದೇವರ ದರುಶನ ಮುನ್ನ ಲಕ್ಷ್ಮೀ ಭೂವರಾಹ ಸ್ವಾಮಿಯನ್ನು ಪುಷ್ಕರಿಣಿ ಬಳಿ ದರುಶನ ಮಾಡಿ ಶ್ರೀನಿವಾಸ ದೇವರ ದರುಶನ ಮಾಡುವುದು ಆಚಾರ.

ಸೋದರ ಸಾವಿನ ನೋವನು ಸಹಿಸದೆ ಹಿರಣ್ಯಕಶಿಪು ವಿಷ್ಣುವೈರಿಯಾದ. ದೈತ್ಯ ಗುರುವಿನ ಉಪದೇಶದಂತೆ ಘೋರ ತಪಸ್ಸು ಆಚರಿಸಿ ಬ್ರಹ್ಮದೇವ ರನ್ನು ಪ್ರತ್ಯಕ್ಷ ಮಾಡಿಸಿಕೊಂಡರು. ಪ್ರಸನ್ನರಾದ ಬ್ರಹ್ಮದೇವರು ವರ ಕೇಳಲು, ಹಿರಣ್ಯಕಶಿಪು ತನ್ನ ಸಹೋದರನಂತೆಯೇ ಮರಣವಿಲ್ಲದ ವರಬೇಕು! ಯಾವುದೇ ಪಕ್ಷಿ, ಪ್ರಾಣಿ, ಶಸ್ತ್ರ, ಅಸ್ತ್ರ, ದೈತ್ಯ, ದೇವ,ಗಂಧರ್ವ,ಋಷಿಯಿಂದಾಗಲಿ,ಹಗಲಾಗಲಿ,ರಾತ್ರಿ ಯಾಗಲಿ,ಆಕಾಶದಲ್ಲಾಗಲಿ, ಭೂಮಿಯ ಮೇಲಾಗಲಿ ಮರಣ ವೆನ್ನುವುದೇ ಇರಬಾರದೆಂದು ವರವ ಪಡೆದರು.

### ಶ್ರೀ ಪ್ರಹ್ಲಾದರ ಜನನ

ಹಿರಣ್ಯಕಶಿಪು ತಪಸ್ಸಲ್ಲಿ ನಿಮಗ್ನರಾದಾಗ ಮಡದಿ ಕಯಾದು ಶ್ರೀ ನಾರದ ಮಹರ್ಷಿಗಳ ಆಶ್ರಮದಲ್ಲಿ ಇದ್ದರು. ಗರ್ಭಿಣಿ ಆದ ಕಯಾದು ನಾರದ ಮುನಿಗಳಿಂದ ಶ್ರೀ ನಾರಾಯಣ ಮಂತ್ರ ಮತ್ತು ಶ್ರೀ ಹರಿಯ ಮಹಿಮೆಯನ್ನು ಕೇಳುತಲ್ಲಿದ್ದರು. ಆಶ್ರಮದ ವಾತಾವರಣ ಶ್ರೀ ಹರಿಯ ಸ್ಮರಣೆ, ಭಜನೆ, ಪೂಜೆ ಇರುವುದ ರಿಂದ ಹರಿನಾಮ ಸ್ಮರಣೆ ನಿರಂತರವಾಯಿತು ಹೊಟ್ಟೆಯಲ್ಲಿ ಇದ್ದ ಬಾಲಕ ಪ್ರಹ್ಲಾದ ನಾರಾಯಣ ಮಂತ್ರ ಶ್ರೀ ಹರಿಯ ಗುಣಗಾನ ಗಳನ್ನು ಕೇಳಿ ವಿಷ್ಣು ಭಕ್ತರಾದರು. ತಾಯಿಯ ಉದರದಲ್ಲೇ ನಾರಾಯಣ ಮಂತ್ರ ಉಪದೇಶವಾಯಿತು.

### ಹಿರಣ್ಯ ಕಶಿಪುಯಿಂದ ಪ್ರಹ್ಲಾದರಿಗೆ ಹಿಂಸೆ

ಬಲಶಾಲಿಯಾದ ಅಸುರ ಮರಣವೇ ಇಲ್ಲೆಂದು ಮುಲ್ಲೋಕಗಳನ್ನು ಅಧೀನಕ್ಕೆ ತೆಗೆದುಕೊಂಡು ಸಜ್ಜನರರನ್ನು ಶಿಕ್ಷಿಸಿ, ದೇವ ಪೂಜೆ ನಿಷಿದ್ಧ ಎಂದು ದೇಗುಲಗಳು, ಯಜ್ಞ ಯಾಗ ಗಳನ್ನು ತಡೆದನು. ಪ್ರಹ್ಲಾದ ಅರಮನೆಯಲ್ಲಿ ಬೆಳೆಯುತ್ತಾ ವಿದ್ಯಾ ಭ್ಯಾಸ ಅಸುರ ಕುಲದಲ್ಲಿ ಆರಂಭವಾಯಿತು. ನಾರದ ಮಹರ್ಷಿ ಗಳ ಉಪದೇಶ ಮನತುಂಬಿ ನಾರಾಯಣ ಮಂತ್ರ ಜಪಿಸುತ್ತ ವಿದ್ಯೆಯನ್ನು ಕಲಿತರು. ಸಹಪಾಠಿಗಳಿಗೂ ಹರಿ ಭಕ್ತಿ, ಶ್ರೀಹರಿಯ ಮಹಿಮೆ ಹೇಳುತ್ತಾ ತನ್ನ ಸುತ್ತ ಇರುವವರನ್ನು ಸಾತ್ವಿಕರಾಗಿ ಬದಲಾವಣೆ ಮಾಡಿ ಹರಿನಾಮದ ಭಜನೆ ಮಾಡಿಸಿದರು. ಹರಿ ವೈರಿಯಾದ ಹಿರಣ್ಯಕಶಿಪು ತನ್ನ ಪುತ್ರ ವೈರಿಯನ್ನು ಭಜಿಸಲು ತಾಳದೆ. ಹರಿನಾಮ ಜಪ ಬಿಟ್ಟು ದೈತ್ಯ ಕುಲದ ಆಚಾರ ಕೈ ಹಿಡಿಯಲು ಆಜ್ಞೆ ಕೊಟ್ಟರು ಎಷ್ಟೇ ಹೇಳಿದರೂ ಶ್ರೀ ಪ್ರಹ್ಲಾದರು ಹರಿನಾಮಸ್ಮರಣೆ ಬಿಡಲಿಲ್ಲ. ಕಾಮ ಕ್ರೋಧ, ಅಹಂಕಾರ ಅಧರ್ಮಿಯಾದ ಹಿರಣ್ಯಕಶಿಪು ತನ್ನ ಪುತ್ರನನ್ನು ಕೊಲ್ಲಲು ವಿಷ ಪ್ರಯೋಗ, ಆನೆಯಿಂದ ತುಳಿಸುವ ಯತ್ನ, ಪರ್ವತದಿಂದ ಕೆಳಗೆ ಉರುಳಿಸುವ ಯತ್ನ, ಸಮುದ್ರದಲ್ಲಿ ಮುಳಗಿಸುವ ಯತ್ನ

ಮಾಡಿದರೂ ಶ್ರೀಪ್ರಹ್ಲಾದ ಶ್ರೀಹರಿಯ ಕೃಪೆಯಿಂದ ಅರಮನೆಗೆ ಹಿಂದಿರುಗಿದರು. ಕೋಪೋದ್ರೇಕ ಗಗನಕ್ಕೆ ಏರಲು ಗರ್ವದಿಂದ ಹಿರಣ್ಯಕಶಿಪು ಪ್ರಹ್ಲಾದರನ್ನು ಎಲ್ಲಿರುವನು ಶ್ರೀ ಹರಿ? ಎದುರಲ್ಲಿರುವ ಕಂಭದಲ್ಲಿರುವನೋ? ಎಂದು ಪ್ರಶ್ನೆ ಹಾಕಿದರು. ಶ್ರೀ ಹರಿ ಸರ್ವಾಂತರ್ಯಾಮಿ! ಎಲ್ಲ ಕಡೆ, ಎಲ್ಲ ದಿಕ್ಕಿನಲ್ಲೂ ಎಲ್ಲ ಲೋಕದಲ್ಲೂ ವ್ಯಾಪ್ತ ನಾರಾಯಣ ಎಂದು ತಂದೆಗೆ ಮುದ್ದಾಗಿ ಉತ್ತರ ಕೊಟ್ಟರು ಶ್ರೀ ಪ್ರಹ್ಲಾದರು. ನಾರಾಯಣೋಪನಿಷತ್ ಮಂತ್ರಗಳಲ್ಲಿ ಸರ್ವತ್ರ ನಾರಾಯಣ ನಿಷ್ಕಳಂಕ, ನಿರಂಜನ ಸರ್ವವ್ಯಾಪ್ತಿಯಾದ ಶ್ರೀಹರಿಯನ್ನು ಕೀರ್ತಿಸಲಾಗಿದೆ."ಅಥ ನಿತ್ಯೋ ನಾರಾಯಣಃ, ಬ್ರಹ್ಮೋ ನಾರಾಯಣಃ, ಶಕ್ರಶ್ಚ ನಾರಾಯಣಃ, ದ್ವಾವಾ ಪೃಥಿವ್ಯೌಚ ನಾರಾ ಯಣಃ ಕಾಲಶ್ಚ ನಾರಾಯಣಃ,ದಿಶಶ್ಚ ನಾರಾಯಣಃ,ಊರ್ಧ್ವಂಶ್ಚ ನಾರಾಯಣಃ, ಅಧಶ್ಚ ನಾರಾಯಣಃ, ಅಂತರ್ಬಹಿಶ್ಚ ನಾರಾಯಣಃ, ನಾರಾಯಣಃ ಏವೇದಗಮ್ ಸರ್ವಂಯದ್ಭೂತಂ ಯಚ್ಚಭವ್ಯಮ್"- ಶ್ರೀ ಹರಿಯನ್ನು ಸರ್ವಾಂತರ್ಯಾಮಿ ಶ್ರೀ ಹರಿಯೇ ಭೂತ, ಭವಿಷ್ಯತ್ ವರ್ತಮಾನ, ಸತ್ಯ, ನಿತ್ಯ, ನಾರಾಯಣನೇ ಬ್ರಹ್ಮ, ಶಿವ, ಇಂದ್ರ, ಭೂಮಿ, ಆಕಾಶ, ಎಲ್ಲ ದಿಶೆಯಲ್ಲಿ ನಾರಾಯಣನೇ ತುಂಬಿದ್ದಾರೆ ಎಂದು ಕೀರ್ತಿಸಲಾಗಿದೆ. ಉಗ್ರನಾಗಿ ಹಿರಣ್ಯಕಶಿಪು ಗದೆಯಿಂದ ಕಂಭವನ್ನು ಹೊಡೆದರು. ವಿದ್ಯುತ್ ಪ್ರಕಾಶ ಮಾನದಿಂದ, ವೀರ ಘರ್ಜನೆ ಮಾಡುತ ಶ್ರೀ ಹರಿ ಕಂಭದಿಂದ ಪ್ರಕಟವಾದರು. ಉಗ್ರರೂಪ ತಾಳಿ ಹಿರಣ್ಯಕಶಿಪು ಜೊತೆ ಯುದ್ಧ ಮಾಡಿ ದ್ವಾರದ ಬಳಿ ಸಂಧ್ಯಾಕಾಲದ ವೇಳೆ ತೊಡೆಯ ಮೇಲೆ ಮಲಗಿಸಿ ನಖದಿಂದ ಉದರವ ಸೀಳಿ ಕರಳ ಮಾಲೆ ಧರಿಸಿ ದಾನವನ ಅಂತ್ಯ ಮಾಡಿದರು. ದೇವತೆಗಳು, ಮುನಿಗಳು ಹೂವಿನ ಮಳೆ ಸುರಿಸಿ "ನಮೋ ನಾರಸಿಂಹ" ಎಂದು ಕೀರ್ತಿಸಿದರು. ಕೋಪ ಶಾಂತಿ ಆಗದಲ್ಲಿ ಪ್ರಹ್ಲಾದರನ್ನು ನರಸಿಂಹ ದೇವರನ್ನು ಪ್ರಸನ್ನಗೊಳಿಸಲು ಸೂಚಿಸಿದರು. ಶ್ರೀ ಪ್ರಹ್ಲಾದರ ಪ್ರಾರ್ಥನೆ ಕೇಳಿ ಶ್ರೀ ಹರಿ ಶಾಂತ ರೂಪದಿ ದರುಶನ ನೀಡಿ ಪ್ರಹ್ಲಾದ ರಾಯನನ್ನು ರಾಜ್ಯಕೆ ರಾಜನ ಮಾಡಿ ಕರುಣಿಸಿದರು. ಶ್ರೀ ಪ್ರಹ್ಲಾದರು ಭಾಗವತೋತ್ತಮರು. ಶ್ರೀ ಹರಿಯ ನಂಬಿ ಕೆಟ್ಟವರಿಲ್ಲ.ಧರ್ಮವ ಉಳಿಸಲು ಶ್ರೀ ಹರಿ ಸದಾ ಭಕ್ತರ ಪೋಷಣೆ ಮಾಡುವರು ಎಂಬುವುದಕ್ಕೆಶ್ರೀ ಪ್ರಹ್ಲಾದರ ಭಕ್ತಿ, ನಂಬಿಕೆಯೇ ನಿದರ್ಶನ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮ ನುಡಿದ ಶ್ಲೋಕ.

ಕಾಮಕ್ರೋಧವಿಯುಕ್ತಾನಾಂ ಯತೀನಾಂ ಯತಚೇತಸಾಮ್
ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಾಮ್

ಕಾಮಕ್ರೋಧ ರಹಿತರು, ಚಿತ್ತವನ್ನು ಗೆದ್ದವರು, ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಂಡಿರುವ ಜ್ಞಾನಿಗಳಿಗೆ ಎಲ್ಲ ಕಡೆಗಳಿಂದ ಪರಮಾತ್ಮನೇ ಪರಿಪೂರ್ಣನಾಗಿದ್ದಾನೆ.



### ನರಸಿಂಹ ಜಯಂತಿ

ಕೃತಯುಗದಲ್ಲಿ ಶ್ರೀ ಹರಿಯ ನಾಲ್ಕನೇ ಅವತಾರವೇ ನರಸಿಂಹ ಅವತಾರ. ನರಸಿಂಹ ಜಯಂತಿ ವೈಶಾಖ ಶುದ್ಧ ಚತುರ್ದಶಿಯಂದು ಆಚರಿಸಲಾಗುತ್ತದೆ.

ನರಸಿಂಹ ಜಯಂತಿ ವಿಷ್ಣು ಆಲಯಗಳಲ್ಲಿ ಭಕ್ತಿಯಿಂದ ಆಚರಿಸಲಾಗುವುದು. ವಿಷ್ಣು ಸಹಸ್ರನಾಮ ಪಾರಾಯಣ, ಅಭಿಷೇಕ, ತುಳಸಿ ಅರ್ಚನೆ ನರಸಿಂಹ ಸ್ತುತಿ, ಪುರುಷಸೂಕ್ತ ವೇದ ಮಂತ್ರಗಳ ಪಠಣದಿಂದ ಲಕ್ಷ್ಮಿ ನರಸಿಂಹ ದೇವರ ಸೇವೆ ಮಾಡುವರು. ಮನೆ ಮನೆಗಳಲ್ಲಿ ಪೂಜೆ ಮಾಡಿ ಕೋಸಂಬರಿ ಪಾನಕ ನೈವೇದ್ಯ ಪ್ರಸಾದವನು ಹಂಚುವ ಆಚಾರವಿದೆ.

ಉಗ್ರಂವೀರಂ ಮಹಾವಿಷ್ಣುಂ ಜ್ವಲಂತಂ ಸರ್ವತೋಮುಖಂ
ನೃಸಿಂಹಂ ಭೀಷಣಂ ಭದ್ರಂ ಮೃತ್ಯುರ್ ಮೃತ್ಯುಂ ನಮಾಮ್ಯಹಂ

ನರಸಿಂಹ ದೇವರ ಮೂಲ ಮಂತ್ರ ಜಪಿಸುವುದರಿಂದ ಸರ್ವ ಭಯ ರೋಗ ದೂರವಾಗಿ ಶತ್ರುವಿನಾಶವಾಗುವುದು. ಲಕ್ಷ್ಮಿನರಸಿಂಹ ದೇವರು ಎಲ್ಲರನ್ನು ಆಯುರ್ ಆರೋಗ್ಯವ ಕೊಟ್ಟು ಕಾಪಾಡಲಿ.

"ಓಂ ನರಸಿಂಹಾಯ ವಿದ್ಮಹೇ ವಜ್ರ ನಖಾಯ
ಧೀಮಹಿ ತನ್ನೋ ನರಸಿಂಹ ಪ್ರಚೋದಯಾತ್"।

**.....ಸರ್ವೇ ಜನಾಃ ಸುಖಿನೋ ಭವಂತು!...**



# ಶ್ರೀ ಪೆರುಂದೇವಿ ಸಮೇತ ಶ್ರೀ ಕರಿವರದರಾಜಸ್ವಾಮಿ ದೇವಸ್ಥಾನ - ಸತ್ರವಾಡ



- ತಮಿಳು ಮೂಲ : ವಿ.ಒ. ಸುರೇಶ್

- ಅನುವಾದ : ಭಾರತಿ ರಘುನಾಥ್

ಶ್ರೀಯಃ ಕಾಂತಾಯ ಕಲ್ಯಾಣನಿಧಯೇ ನಿಧಯೇಽರ್ಥಿನಾಮ್
ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಮ್॥

ತಿರುಪತಿ - ತಿರುತ್ತಣಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗುವಾಗ ದಕ್ಷಿಣಕ್ಕೆ ತಿರುಪತಿಯಿಂದ ಸುಮಾರು 50 ಕಿ.ಮೀ. ದೂರದಲ್ಲಿ 'ನಗರಿ' ಯೆಂಬ ಹೆಸರುಳ್ಳ ಒಂದು ಚಿಕ್ಕ ಹಳ್ಳಿಯಿದೆ. ಆ ನಗರಿಯಿಂದ ಸುಮಾರು 4 ಕಿ.ಮೀ. ದೂರದಲ್ಲಿ ಪಶ್ಚಿಮಕ್ಕೆ ಹೊರಟರೆ ನದಿಯ ಉತ್ತರಕ್ಕೆ ಮತ್ತೊಂದು ಗ್ರಾಮ 'ಸತ್ರವಾಡ' ಎಂಬುದಿದೆ. ಈ ಗ್ರಾಮದ ಮಧ್ಯದಲ್ಲಿ ಶ್ರೀ ಕರಿವರದರಾಜ ಸ್ವಾಮಿಯ ಮನೋಹರವಾದ ದೇವಾಲಯವೊಂದಿದೆ.

## ಸ್ಥಳ ಪುರಾಣ

ಸತ್ರವಾಡದ ದಕ್ಷಿಣಕ್ಕಿರುವ "ಮುನಿಪಲ್ಲೆ"ಯೆಂಬ ಗ್ರಾಮವಿದೆ. ಆ ಕಾಲದಲ್ಲಿ ಮುನಿಗಳು ಹಿಂದಿನಿಂದಲೂ ಯಜ್ಞ ಯಾಗಾದಿಗಳನ್ನು ಕೈಗೊಳ್ಳುತ್ತಿದ್ದರು. ಆಗ 'ಕಲಿ'ಎಂಬ ಅಸುರನೊಬ್ಬ ತುಂಬಾ ತೊಂದರೆಯುಂಟು ಮಾಡುತ್ತಿದ್ದನು. ಆದರೆ ತನ್ನ ಭಕ್ತರನ್ನು ತೊಂದರೆಗೀಡು ಮಾಡುವವರನ್ನು ದೇವರೆಂದೂ ಬಿಡುವುದಿಲ್ಲ. ಅದೇ ರೀತಿಯಲ್ಲಿ ಯಜ್ಞವನ್ನು ರಕ್ಷಿಸಲು ಸ್ವತಃ ಶ್ರೀ ಹರಿಯೇ ಭುವಿಗಿಳಿದು ಒಂದು ರಕ್ಕಸರನ್ನು ವಧಿಸಿದ. ಅವರ ಕಾವಲಾಗಿ ಅಲ್ಲಿಯೇ ವರದರಾಜಸ್ವಾಮಿಯಾಗಿ ನೆಲೆನಿಂತ. ಅಷ್ಟೇ ಅಲ್ಲದೇ, ಸಮೀಪದಲ್ಲಿರುವ ಕಲಿಂಬೇಡು, ನಗರಿ ಮತ್ತು ತೆರನಿಗಳೆಂಬ ಗ್ರಾಮಗಳಿಗೂ ಸಹಾ 'ಕಲಿಯ ಮಾಣಿಕ್ಯ ಪೆರುಮಾಳ್ ಆಗಿ ನಿಂತು ಎಲ್ಲರಿಗೂ ಅಭಯವನ್ನಿತ್ತು ಆಶೀರ್ವಾದಿಸಿದ.

ಶ್ರೀ ಪೆರುಂದೇವಿ ಸಮೇತ ಶ್ರೀ ಕರಿವರದರಾಜ ಸ್ವಾಮೀ ಸತ್ರವಾಡ ಗ್ರಾಮದಲ್ಲಿ ನೆಲೆನಿಂತಿದ್ದಾನೆ. ಸುಮಾರು 500 ವರ್ಷಗಳ ಹಿಂದೆ ವಿಜಯನಗರದ ವಂಶಜನಾದ ವೇಂಕಟ ಕುಮಾರರಾಜನೆಂಬ ಸಾಮಂತ ರಾಜನ ಆಳ್ವಿಕೆಗೆ ಈ ಕಾರ್ವೇಟಿಯೆಂಬ ಗ್ರಾಮವು ಒಳಪಟ್ಟಿತ್ತು. ಈ ಗ್ರಾಮವು ಅಂದಿನ ದಿನಗಳಲ್ಲಿ ಪ್ರಸಿದ್ಧ ಪಡೆದ ಗ್ರಾಮಗಳುಲ್ಲೊಂದಾಗಿತ್ತು. ದೇವಸ್ಥಾನದ ಶಾಸನಗಳು ಈ ಸ್ಥಳವು 'ಸತ್ರವಾಡ' ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತೆಂದು ಹೇಳುತ್ತವೆ.

ಸಾಕಷ್ಟು ಸಂಖ್ಯೆಯಲ್ಲಿ ಋಷಿ-ಮುನಿಗಳು ಬಹಳ ದಿನಗಳಿಂದ ಈ ಸ್ಥಳದಲ್ಲಿ ವಾಸವಾಗಿದ್ದರೂ ಕುಶಸ್ಥಲಿ ನದಿಯಲ್ಲಿ ಮಿಂದು ವರದರಾಜ ಸ್ವಾಮಿಯ ದೇವಾಲಯದಲ್ಲಿ ಪ್ರಾರ್ಥನೆಗಳನ್ನು ಮಾಡುತ್ತಿದ್ದರು. ಈ ಸ್ಥಳದಲ್ಲಿ ಸ್ವಾಮಿಯೇ ಸ್ವತಃ ತಮ್ಮನ್ನು ಅಸುರರಿಂದ ರಕ್ಷಿಸಿದ ಕಾರಣಕ್ಕಾಗಿ ಅವರುಗಳು ಈ ಸ್ಥಳದಲ್ಲಿ ತುಂಬಾ ಸುಖ - ಶಾಂತಿಗಳಿಂದವಾಸಿಸುತ್ತಿದ್ದರು.

## ಉತ್ಸವದ ವಿವರುಗಳು

ಈ ದೇವಾಲಯವು ವೈಖಾ ನಸಆಗಮ ಶಾಸ್ತ್ರವನ್ನು ಅನುಸರಿಸುತ್ತವೆ. ಚೈತ್ರಮಾಸದ ಹುಣ್ಣಿಮೆಯ ಆಚರಣೆಯು

ಈ ದೇವಸ್ಥಾನದ ಮುಖ್ಯ ಆಕರ್ಷಣೆ ಶ್ರೀದೇವಿ-ಭೂದೇವಿ ಸಮೇತ ಶ್ರೀ ವರದರಾಜಸ್ವಾಮಿ ಕುಶಸ್ಥಲಿ ನದಿಗೆ ಬಂದು ಭಕ್ತರೆಲ್ಲರನ್ನು ಹರೆಸುತ್ತಾರೆ. ಹಬ್ಬದ ಆಚರಣೆ 153 ವರ್ಷಗಳ ಕಾಲ ತುಂಬಾ ಪ್ರಚಲಿತದಲ್ಲಿತ್ತು. ಕಂಚಿಯ ಶ್ರೀ ವರದರಾಜ ಸ್ವಾಮಿಯ ದೇವಸ್ಥಾನದಲ್ಲಿ ನಡೆಯುವ ಬ್ರಹ್ಮೋತ್ಸವದ ಹಾಗೆ ಇಲ್ಲಿಯೂ ಅದೇ ಕಾಲದಲ್ಲಿ ವೈಖಾನಸ ಆಗಮ ಶಾಸ್ತ್ರದನುಸಾರ ಗರುಡಸೇವೆಯನ್ನು ನಡೆಸಲಾಗುತ್ತಿತ್ತು. ಆದ್ದರಿಂದ ಇಲ್ಲಿ ಶ್ರೀ ಪೆರುಂದೇವಿ, ಶ್ರೀ ವರದರಾಜ ಸ್ವಾಮಿ,ಶ್ರೀ ಆಂಡಾಳ್ ಶ್ರೀ ಆಂಜನೇಯಾಸ್ವಾಮಿ ಮತ್ತು ಶ್ರೀ ಚಕ್ರತ್ತಾಳ್ವಾರುಗಳ ಉತ್ಸವ ಮೂರ್ತಿಗಳಿವೆ.



## ವಿಶೇಷ ನಕ್ಷತ್ರ ಉತ್ಸವ

ಬ್ರಹ್ಮೋತ್ಸವವೊಂದೇ ಅಲ್ಲದೇ, ವಿಶೇಷ ಆಳ್ವಾರ್ ಮತ್ತು ಭಕ್ತರ ನಕ್ಷತ್ರಗಳಿರುವ ತಿಥಿಗಳಂದು ವಿಶೇಷ ಪೂಜೆಗಳನ್ನು ಮಾಡಲಾಗುವುದು. ವಾರದಲ್ಲಿ ಪ್ರತಿ ಭಾನುವಾರ ಆಂಜನೇಯನಿಗೆ ವಿಶೇಷ ಪೂಜೆ ಪ್ರತಿ ಶುಕ್ರವಾರ ವರದರಾಜಸ್ವಾಮಿಗೆ ವಿಶೇಷ ಪೂಜೆಗಳನ್ನು ಮಾಡಲಾಗುವುದು. ಇನ್ನು ವಿಶೇಷ ದಿನಗಳಾದ ಏಕಾದಶಿ, ರಥಸಪ್ತಮಿಗೆ ಪೆರಟಾಸಿ ತಿಂಗಳಲ್ಲಿ ವಿಶೇಷ ಪೂಜೆ ಮತ್ತು ಮಾರ್ಗಳಿ ವಿಶೇಷ ಪೂಜೆ, ವೀರಾಂಜನೇಯನ ಜಯಂತಿ, ಭೋಗಿ ದಿನಗಳಂದು ಮಾಡುವ ಪೂಜೆಗಳಲ್ಲಿ ವಿಶೇಷ ಅಭಿಷೇಕ ಹಾಗೂ ಅಲಂಕಾರಗಳನ್ನು ಮಾಡಲಾಗುತ್ತದೆ. ಅದಲ್ಲದೇ ಪ್ರತಿದಿನದ ಅರ್ಚನೆ ಮತ್ತು ಆರಾಧನೆಗಳು ಪ್ರಾಣದೇವತೆಯಾದ ವರದರಾಜಸ್ವಾಮಿಗೆ ನಡದೇ ಇರುತ್ತವೆ.

## ಇತರೆ ದೇವಾಲಯಗಳು

ಪ್ರಧಾನದೇವತೆಯಾದ ಶ್ರೀ ಕರಿವರದರಾಜಸ್ವಾಮಿ ಪಶ್ಚಿಮಾಭಿಮುಖವಾಗಿ ನಿಂತಿದ್ದಾರೆ. ಪೆರುಂದೇವಿ ಹಾಗೂ ಗೋದಾದೇವಿಗೆ, ಪ್ರತ್ಯೇಕವಾದ ಗುಡಿಗಳಿವೆ. ಗರುಡಾಳ್ವಾರ್ ದೇವರಿಗಭಿಮುಖವಾಗಿದ್ದಾನೆ. ಕರಿವರದರಾಜ ಸ್ವಾಮಿಯ ಮಂದಿರದ ಪಕ್ಕದಲ್ಲೇ ಆಳ್ವಾರುಗಳು ಮತ್ತು ಆಚಾರ್ಯರಿಗಾಗಿ ಪ್ರತ್ಯೇಕವಾದ ಮಂಟಪಗಳನ್ನು ನಿರ್ಮಿಸಲಾಗಿದೆ. ಈ ಮಂಟಪದಲ್ಲಿ ಶ್ರೀಸೇನೈಮುದಲಿಯಾರ್ (ವಿಶ್ವಕ್ಸೇನ), ನಮ್ಮಾಳ್ವಾರ್, ತಿರುಮಂಗೈ ಆಳ್ವಾರ್, ಶ್ರೀರಾಮಾನುಜರ, ಶ್ರೀ ಮಣವಾಳ ಮಾಮುನಿಗಳ್‌ರವರ ಮೂರ್ತಿಗಳೂ ಇವೆ.

## ಶ್ರೀ ವೀರಾಂಜನೇಯ ಸನ್ನಿಧಿ

ಮುಖ್ಯ ಆಲಯದ ಉತ್ತರಕ್ಕೆ ದಕ್ಷಿಣಾಭಿಮುಖವಾಗಿ ಸುಮಾರು ಎಂಟು ಅಡಿಯೆತ್ತರದ ವೀರಾಂಜನೇಯ ಸ್ವಾಮಿಯ ಮೂರ್ತಿಯಿದೆ. ಇದು ದೈವಿಕತೆಯಿಂದ ತುಂಬಿದೆ. ಈ ಗುಡಿಯಲ್ಲಿ ಮಕ್ಕಳಿಗೆ ಬಾಲಾರಿಷ್ಟ ದೋಷದ ಪರಿಹಾರವಾಗಿ ಪವಿತ್ರ ಜಲವನ್ನು ಮಕ್ಕಳ ಮುಖದ ಮೇಲೆ ಪ್ರೋಕ್ಷಿಸುತ್ತಾರೆ. ಅದಲ್ಲದೇ ಅಂಜನೇಯಸ್ವಾಮಿ ಚಿತ್ರವುಳ್ಳ ತಾಯಿತವನ್ನು ಮಕ್ಕಳ ಕೊರಳಿಗೆ ಕಟ್ಟುತ್ತಾರೆ.

ಸುಮಾರು 40 ವರ್ಷಗಳ ಹಿಂದೆ ಕಂಚಿ ಕಾಮಕೋಟಿ ಪೀಠದ ಶ್ರೀ ಪರಮಾಚಾರ್ಯರು ಕಾರ್ವೇಟಿಯ ಶ್ರೀ ವೇಣುಗೋಪಾಲಸ್ವಾಮಿ ದರ್ಶನಕ್ಕಾಗಿ ಇಲ್ಲಿಗೆ ಬಂದಿದ್ದುಂಟು. ಅಲ್ಲದೇ ಆರು ತಿಂಗಳುಗಳ ಕಾಲ ಅಲ್ಲಿ ಉಳಿದುಕೊಂಡಿದ್ದರು. ಆ ಸಮಯದಲ್ಲಿ ಅವರು ಕರಿವರದ ಸ್ವಾಮಿಯ ಗುಡಿಗೂ ಪಾದ ಬೆಳಸಿ ದರ್ಶನ ಪಡೆದದ್ದುಂಟು. ಜಗದ್ಗುರುಗಳಾದ ಅವರ ಸಂದರ್ಶನದಿಂದ ದೇವಸ್ಥಾನವು ಮತ್ತಷ್ಟು ಮಹತ್ವವನ್ನು ಪಡೆದುಕೊಂಡಿದೆ. 17.7.2000 ಶುಕ್ರವಾರ ತಿರುಮಲೆ ತಿರುಪತಿ ದೇವಸ್ಥಾನದ ಆಗಿನ ಜೀಯರ್ ಶ್ರೀ ಶ್ರೀ ಚಿನ್ನಜೀಯಾರ್ ಸ್ವಾಮಿಗಳು ಸಮಕ್ಷಮದಲ್ಲಿ ಕುಂಭಾಭಿಷೇಕವನ್ನು ಅದ್ಭುತವಾಗಿ ನಡೆಸಿದರು.

ಸುತ್ತಮುತ್ತಲಿನ ಗ್ರಾಮಗಳಿಂದ ದಿನ ಪ್ರತಿ ನೂರಾರು ಭಕ್ತರು ಶ್ರೀ ಕರಿವರದರಾಜ ಸ್ವಾಮಿಯ ಆಶೀರ್ವಾದಗಳನ್ನು ಪಡೆಯಲು ತಮ್ಮ ಕೋರಿಕೆಗಳನ್ನು ಹರಿಸಿಕೊಳ್ಳಲು ಬರುವುದುಂಟು.

**ಶ್ರೀ ಪೆರುಂದೇವಿ ಸಮೇತ ಶ್ರೀ ಕರಿವರದರಾಜ ಸ್ವಾಮಿ ಪರಬ್ರಹ್ಮನೇ ನಮಃ**

(ಭಾಗವತಾಕಥಾಸಾಗರ)

# ಪುಂಸವನ ವ್ರತ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್

ಪುಂಸವನವ್ರತ ವೃತ್ತಾಂತವು ಶ್ರೀ ಮದ್ಭಾಗವತದ ಆರನೇ ಸ್ಕಂದದಲ್ಲಿ ಬರುತ್ತದೆ. ಅಸುರಮಾತೆಯಾದ ದಿತಿಯು ಮಾಡಿದ ಈ ವ್ರತದ ವಿವರಗಳು ಈ ರೀತಿಯಾಗಿವೆ. ಕಶ್ಯಪ ಪ್ರಜಾಪತಿಗೆ ದಿತಿ-ಅದಿತಿಯರೆಂಬ ಇಬ್ಬರು ಪತ್ನಿಯರು. ಅದಿತಿಗೆ ದೇವತೆಗಳು ಜನ್ಮಸಿದ್ದಾರೆ. ಅದರಲ್ಲಿ ಹನ್ನೊಂದನೇಯ ಮಗನು ಸ್ವರ್ಗಾಧಿಪತಿಯಾದ ಇಂದ್ರನು. ಸ್ವತಃ ದೇವದೇವನೇ ಹನ್ನೆರಡ ನೇಯ ಪುತ್ರನಾಗಿ ಜನಿಸಿದ್ದಾನೆ. ಆತನೇ ವಾಮನನು. ಈ ವಾಮನನೇ ಬಲಿಮಹಾರಾಜನಿಂದ ಮೂರು ಹೆಜ್ಜೆ ಭೂಮಿ ಯನ್ನು ದಾನಕೇಳಿ ಊರ್ಧ್ವ - ಅಧೋಲೋಕಗಳನ್ನು ಆಕ್ರಮಿಸಿ ಅವುಗಳನ್ನೆಲ್ಲಾ ತನ್ನ ಸೋದರನಾದ ಇಂದ್ರನಿಗೆ ಹಿಂತಿರುಗಿ ಕೊಟ್ಟಿದ್ದಾನೆ.

ಇನ್ನು ಕಶ್ಯಪನ ಮತ್ತೊಬ್ಬ ಮಡದಿ ದಿತಿಗೆ ಜನಿಸಿದವರು ದೈತ್ಯರೆಂದು ಕರೆಯಲ್ಪಟ್ಟಿದ್ದಾರೆ. ಆದರೆ ಅಂತಹ ದಾನವ ವಂಶ ದಲ್ಲಿಯೇ ಭಕ್ತಪ್ರಹ್ಲಾದ, ಬಲಿಮಹಾರಾಜರಂತಹ ಮಹಾ ಭಗ ವಂತರು ಜನಿಸಿದ್ದಾರೆ. ದಿತಿಗೆ ಹಿರಣ್ಯಾಕ್ಷ - ಮತ್ತು ಹಿರಣ್ಯ ಕಶಿಪು ಲಿಬ್ಬರು ಪುತ್ರರು. ಹಿರಣ್ಯಾಕ್ಷ - ಹಿರಣ್ಯಕಶಿಪುರ ನಂತರ ದಿತಿಗೆ ನಲವತ್ತೊಂಬತ್ತು ಉಪದೇವತೆಗಳು ಜನಿಸಿದ್ದಾರೆ. ದಿತಿ ಗರ್ಭ ದಲ್ಲಿ ಹುಟ್ಟಿದ ಕಾರಣ ಇಂದ್ರನು ಅವರಿಗೆಲ್ಲಾ ದೈವತ್ವವನ್ನು ಪ್ರಸಾ ದಿಸಿದ್ದಾನೆ. ಇದಕ್ಕೇ ಸಂಬಂಧಿಸಿದ್ದೇ ಪುಂಸವನವ್ರತವು.

ಇಂದ್ರನಿಗೆ ಸಹಾಯ ಮಾಡುವ ಉದ್ದೇಶದಿಂದ ಹಿರಣ್ಯಾಕ್ಷ ಹಿರಣ್ಯಕಶಿಪುವನ್ನು ವಧಿಸಿದ್ದಾನೆ. ತನ್ನ ಪುತ್ರರ ಮರಣದಿಂದ ದಿತಿಯ ಹೃದಯ ತಲ್ಲಣಿಸಿದೆ. ಪುತ್ರ ವಿಯೋಗದಿಂದಾಗಿ ಆಕೆಯ ಹೃದಯದಲ್ಲಿ ಇಂದ್ರನ ಕುರಿತು ಇನ್ನಿಲ್ಲದ ವೈರಭಾಗ ಮೂಡಿದೆ. ಆದನ್ನು ಹೊರಗೆಡುಹಲು ಆತನ ಮೇಲೆ ಹಗೆ ತೀರಿಸಿಕೊಳ್ಳಲು ಇಂದ್ರನನ್ನು ಕೊಲ್ಲುವ ಪುತ್ರನನ್ನು ಪಡೆಯುವುದೇ ಸರಿಯಾದ ಉಪಾಯವೆಂದು ದಿತಿಯು ಎಣಿಸಿದ್ದಾಳೆ. ತನ್ನ ಬಯಕೆ ಈಡೇರಬೇಕಾದರೆ ತನ್ನ ಪತಿಯ ಅನುಗ್ರಹವಿರಬೇಕಾದ್ದರಿಂದ ದಿತಿ ಆತನನ್ನು ಬಗೆಬಗೆಯಾಗಿ ಸೇವಿಸಿದ್ದಾಳೆ. ಆಕೆಯ ಶ್ರದ್ಧೆಗೆ ಮೆಚ್ಚಿ ಕಶ್ಯಪರು ಬೇಕಾದ ವರವನ್ನು ಬೇಡಿಕೋ ಎಂದಿದ್ದಾರೆ.

ಮಹಾಶಕ್ತಿಶಾಲಿಯಾದ ತನ್ನ ಪತಿ ಈ ವಿಧವಾಗಿ ವರ ಕೊಡುತ್ತೇನೆಂದು ಹೇಳಲು ದಿತಿ ತನ್ನ ನಿಜರೂಪ ಹೊರಗಡೆ ಹಿಟ್ಟಿದ್ದಾಳೆ. "ಸ್ವಾಮಿ! ನಾನೀಗ ನನ್ನಿಬ್ಬರು ಮಕ್ಕಳನ್ನು ಕಳೆದು ಕೊಂಡಿದ್ದೇನೆ. ನೀವು ನನಗೆ ವರಕೊಡಬೇಕೆಂದುಕೊಂಡರೆ ಇಂದ್ರನನ್ನು ವಧಿಸಬಲ್ಲ ಪುತ್ರನನ್ನು ನನಗೆ ಪ್ರಸಾದಿಸಿರಿ. ವಿಷ್ಣು ವಿನ ಸಹಾಯದೊಂದಿಗೆ ಇಂದ್ರನು ನನ್ನ ಮಕ್ಕಳನ್ನು ಕೊಂದಿ ದ್ದಾನೆ. ಆದ್ದರಿಂದಲೇ ನಾನು ಈ ವರವನ್ನು ಬೇಡುತ್ತಿದ್ದೇನೆ." ಎಂದಿದ್ದಾಳೆ. ಆಕೆಯ ಮಾತನ್ನು ಕೇಳುತ್ತಲೇ ಕಶ್ಯಪ ಪ್ರಜಾ ಪತಿಯ ಬಾಯಿಂದ ಮಾತೇ ಹೊರಡದಾಯ್ತು. ಆತನು ಸಂಪೂರ್ಣ ವಿಷಣ್ಣನಾದನು. ತನಗೆ ಇಂದ್ರಹತ್ಯೆವೆಂಬ ಪಾಪವು ಸಂಪ್ರಾಪ್ತವಾಗಲಿದೆಯೆಂದು ಪರಿತಪಿಸಿದ್ದಾನೆ.

ಈ ರೀತಿಯಾಗಿ ಮನಸ್ಸಿನಲ್ಲಿಯೇ ಅಂದು ಕೊಳ್ಳುತ್ತಾ ಕಶ್ಯಪರು ತಮ್ಮ ಮಡದಿಯೊಂದಿಗೆ "ಕಲ್ಯಾಣಿ! ನಿನ್ನ ಕೋರಿಕೆ ಈಡೇರಬೇಕೆಂದರೆ ನೀನೊಂದು ವ್ರತವನ್ನು ಮಾಡಬೇಕು. ಅದರಲ್ಲಿ ನಾ ಹೇಳಿದ ರೀತಿಯಲ್ಲೇ ನೀನು ನಡೆದುಕೊಳ್ಳಬೇಕು. ಆಗಲೇ ಇಂದ್ರಹತ್ಯೆ ಮಾಡಬಲ್ಲಂತಹ ಪುತ್ರನು ನಿನಗೆ ಲಭಿಸುತ್ತಾನೆ. ಆದರೆ ಈ ವೈಷ್ಣವ ವ್ರತಪಾಲನೆಯಲ್ಲಿ ಭಂಗ ವುಂಟಾದಲ್ಲಿ ಇಂದ್ರನಿಗೆ ಅನುಕೂಲಕರನಾದ ಪುತ್ರನನ್ನು ಪಡೆ ಯುತ್ತೀಯೆ." ಎಂದು ಆಶೀರ್ವಾದಿಸಿದ್ದಾರೆ.

ದಿತಿ ದ್ವಾರ ವೈಷ್ಣವ ವ್ರತಪಾಲನೆ ಮಾಡಿಸುವುದರಲ್ಲಿ ಕಶ್ಯ ಪರ ಮುಖ್ಯಉದ್ದೇಶ ಆಕೆಯನ್ನು ವೈಷ್ಣವಳನ್ನಾಗಿ ಮಾಡುವುದೇ ಆಗಿತ್ತು. ಆಕೆಯ ಹೃದಯದಲ್ಲಿ ಇಂದ್ರಹತ್ಯೆಯ ವಾಂಛೆಯನ್ನು ತೊಲಗಿಸಿ ವ್ರತಪಾಲನೆಯ ಮೂಲಕ ಪಾವಿತ್ರತೆಯನ್ನು ಉಂಟು ಮಾಡಬೇಕೆಂದು ಕಶ್ಯಪರು ನಿರ್ಧರಿಸಿದ್ದಾರೆ. ಸ್ತ್ರೀ ಯಾದುದರಿಂದ ಸಹಜವಾಗಿಯೇ ಆಕೆ ಅವಿವೇಕಿಯಾಗಿ ತುಚ್ಛ ಪ್ರಯೋಜನಕ್ಕಾಗಿ ಪತಿಯನ್ನು ಸೇವೆಗೈದಿದ್ದಾಳೆ. ಆದರೂ ಆಕೆಗೆ ಸಂಪೂರ್ಣ ಫಲ ಸಿಗುವಂತೆ ಕಶ್ಯಪರು ಪ್ರಯತ್ನಿಸಿದ್ದಾರೆ. 'ಇಂದ್ರ ಹೋದೇವ ಬಾನ್ಧವಃ' ಎಂಬ ಪದಪ್ರಯೋಗವನ್ನು ಕಶ್ಯಪರು ಮಾಡಿದ್ದಾರೆ. 'ಇಂದ್ರಾಹೋ' ಎಂಬ ಪದವು ಇಂದ್ರನ ವಧೆಗೆ ತವಕಿಸುತ್ತಿರುವ ಅಸುರನನ್ನು ಸೂಚಿಸುತ್ತದೆ. ಆದರೆ " ಇಂದ್ರಹೋ" ಎಂಬ ಪದಕ್ಕೆ ಇಂದ್ರನನ್ನು ಅನುಸರಿಸುವವನು ಅಥವಾ ಆಜ್ಞಾ ಪಾಲಕನು ಎಂಬ ಅರ್ಥವೂ ಬರುತ್ತದೆ. 'ಇಂದ್ರಹೋ ದೇವ ಭಾನ್ಧವ-ಅಂದರೆ ನಿನ್ನ ಪುತ್ರನು ಇಂದ್ರನನ್ನು ವಧಿಸುತ್ತಾನೆ. ಆದರೆ ಆತನು ದೇವತೆಗಳಿಗೆ ಸನ್ನಿಹಿತವಾದ ಮಿತ್ರನಾಗುತ್ತಾನೆ"

ಎಂದರ್ಥ. ದೇವತೆಗಳಿಗೆ ಸನ್ನಿಹಿತನಾದವನು ಇಂದ್ರನನ್ನು ಹೇಗೆ ಸಂಹರಿಸಬಲ್ಲನು? ಈ ರೀತಿಯಾಗಿ ಅಸಂದಿಗ್ಧ ನುಡಿಗಳನ್ನು ಕಶ್ಯಪರು ದಿತಿಗೆ ಹೇಳಿದ್ದಾರೆ.

"ದೇವಿ! ಈ ವ್ರತ ಪರಿಪಾಲನೆಯ ಸಮಯದಲ್ಲಿ ಹಿಂಸೆ ಮಾಡಬಾರದು. ಯಾರಿಗೂ ಹಾನಿಗೈಯಬಾರದು. ಯಾರಿಗೂ ಶಪಿಸಬಾರದು. ಅಸತ್ಯವನ್ನು ನುಡಿಯಬಾರದು. ಉಗುರು-ಕೇಶಗಳನ್ನು ಕತ್ತರಿಸಬಾರದು ಬುರುಡೆ-ಎಲುಬುಗಳಂತಹ ಅಪವಿತ್ರ ವಸ್ತುಗಳನ್ನು ತಾಗಬಾರದು. ನೀರಿನಲ್ಲಿ ಮುಳುಗಿ ಸ್ನಾನ ಮಾಡಬಾರದು. ಕ್ರೋಧವನ್ನು ಪ್ರದರ್ಶಿಸಬಾರದು. ದುರ್ಜನರ ಸಂಗ ಎಳ್ಳಷ್ಟೂ ಮಾಡಬಾರದು. ಅವರೊಂದಿಗೆ ಸಂಭಾಷಣೆಯೂ ಸಹಾಸಲ್ಲದು ಮಲಿನವಾದ ಬಟ್ಟೆಗಳನ್ನು ಧರಿಸಬಾರದು. ಒಂದು ಬಾರಿ ಧರಿಸಿದ ಹೂಮಾಲೆಯನ್ನು ಮತ್ತೆ ಧರಿಸಬಾರದು. ಎಂಜಲನ್ನು ಭುಜಿಸಬಾರದು. ಕಾಳಿಕಾ ದೇವಿಯ ಪ್ರಸಾದವನ್ನು ಭುಜಿಸಬಾರದು. ಮತ್ಸ್ಯ ಮಾಂಸಗಳಿಂದ ಕೂಡಿದ ಅನ್ನವನ್ನು ತಿನ್ನಬಾರದು. ಶೂದ್ರನು ತಂದ ಅಥವಾ ಮುಟ್ಟಿದುದನ್ನು ಭುಜಿಸಬಾರದು. ಋತುಮತಿಯಾದ ಸ್ತ್ರೀ ನೋಡಿದ ಅಥವಾ ತಾಗಿದ ಆಹಾರವನ್ನು ಸೇವಿಸಬಾರದು, ಬೊಗಸೆಯಿಂದ ನೀರನ್ನು ಕುಡಿಯಬಾರದು.

"ಪ್ರಿಯೆ! ಭೋಜನದ ಬಳಿಕ ಬಾಯಿ ಕಾಲು, ಕೈಗಳನ್ನು ತೊಳೆಯದೇ ಹೊರಗೆ ಹೋಗಬಾರದು. ಸಂಧ್ಯಾ ಸಮಯದಲ್ಲಿ ಕೂದಲನ್ನು ಹರಡಿಕೊಂಡು ಇಲ್ಲವೇ ಆಭರಣಗಳಿಂದ ಅಲಂಕರಿಸಿಕೊಳ್ಳದೇ ಬೀದಿಗಳಲ್ಲಿ ತಿರುಗಬಾರದು. ಮಾತುಗಳನ್ನು ನಿಗ್ರಹಿಸಿಕೊಳ್ಳದೇ ಶರೀರವನ್ನು ಅಗತ್ಯವಿರುವಷ್ಟು ಮುಚ್ಚಿಕೊಳ್ಳದೇ ಹೊರಗೆ ಬರಬಾರದು. ಕಾಲನ್ನು ತೊಳೆಯದೇ, ಶುಚಿಯಾಗದೇ ಒದ್ದೆ ಕಾಲಲ್ಲಿ ಮಲಗಬಾರದು ತಲೆಯನ್ನು ಪಶ್ಚಿಮಕ್ಕಾಗಲೀ, ಉತ್ತರಕ್ಕಾಗಲೀ ಇಟ್ಟು ಮಲಗಬಾರದು. ನಗ್ನನಾಗಿ ಶಯನಿಸಬಾರದು. ಸೂರ್ಯೋದಯ-ಸೂರ್ಯಾಸ್ತ ಸಮಯದಲ್ಲಿ ಮಲಗಬಾರದು"

"ಒಗೆದ ಬಟ್ಟೆಗಳನ್ನು ಹಾಕಿಕೊಂಡು ಸದಾ ಕಾಲ ಶುಚಿಯಾಗಿದ್ದು ಅರಿಶಿನ ಗಂಧಾಧಿ ಮಂಗಳ ದ್ರವ್ಯಗಳಿಂದ ಅಲಂಕರಿಸಿ ಕೊಂಡು ಹೊತ್ತು ಊಟಕ್ಕೂ ಮುಂಚೆ ಗೋಬ್ರಾಹ್ಮಣರನ್ನು, ಲಕ್ಷ್ಮೀ ದೇವಿಯನ್ನು, ಅಚ್ಯುತನನ್ನು ಅರ್ಚಿಸಬೇಕು. ವ್ರತ ಸಮಯದಲ್ಲಿ ಪುತ್ರಾವತಿ ಮುತ್ತೈದೆಯರಿಗೆ ಹೂವು, ಚಂದನ, ಆಭರಣಗಳು ಮುಂತಾದವುಗಳನ್ನು ಕಾಣಿಕೆಯಾಗಿ ನೀಡಬೇಕು. ಗರ್ಭವತಿಯಾಗಿದ್ದಲ್ಲಿ ತನ್ನ ಗರ್ಭದಲ್ಲಿ ತನ್ನ ಪತಿಯೇ ಇರುವನೆಂದು ತಿಳಿದು ಆತನನ್ನು ಧ್ಯಾನಿಸಬೇಕು. ಪ್ರಿಯೆ! ಈ ವಿಧವಾಗಿ ನೀನು ಒಂದು ವರ್ಷ ಶ್ರದ್ಧೆಯಿಂದ ವ್ರತಪಾಲನೆ ಮಾಡಿದಲ್ಲಿ ಇಂದ್ರನನ್ನು ಸಂಹರಿಸಬಲ್ಲ ಪುತ್ರನು ನಿನಗೆ ಜನಿಸುವನು. ಆದರೆ ವ್ರತಪಾಲನೆಯಲ್ಲಿ ಏನಾದರೂ ದೋಷವುಂಟಾದರೆ ನಿನ್ನ ಸುತನು ಇಂದ್ರ ಮಿತ್ರನಾಗುತ್ತಾನೆ".

ಪತಿಯು ಈ ವ್ರತದ ಪರಿಪಾಲನೆಯ ನಿಯಮಗಳನ್ನು ಹೇಳುತ್ತಲೇ ದಿತಿಯು ಅವುಗಳನ್ನು ಪಾಲಿಸಲು ಸಮ್ಮತಿಸಿದ್ದಾಳೆ. ದಿತಿ ಕೈಗೊಂಡ ವ್ರತದ ಕುರಿತು ತಿಳಿಯುತ್ತಲೇ ಇಂದ್ರನು ದೃತಿ ಗೆಟ್ಟಿದ್ದಾನೆ. ಚಿಕ್ಕಮ್ಮ ತನ್ನನ್ನು ಸಂಹರಿಸಲು ಕೈಗೊಂಡಿರುವ ವ್ರತವನ್ನು ಭಂಗಗೊಳಿಸಲು ಆತನು ಕಪಟತನದಿಂದ ಆಕೆಯ ಆಶ್ರಮಕ್ಕೆ ಒಂದು ಜಾಗ್ರತೆಯಿಂದ ಆಕೆಯ ಸೇವೆ ಮಾಡಿದ್ದಾನೆ. ಒಂದು ದಿನ ದಿತಿಗೆ ವ್ರತಭಂಗ ಉಂಟಾಗಿದೆ. ಇಂದ್ರನು ಅಷ್ಟಸಿದ್ಧಿ ತಿಳಿದುಕೊಂಡವನು. ವ್ರತಭಂಗವಾಗಿದೆಯೆಂದು ತಿಳಿಯುತ್ತಲೇ ಇಂದ್ರನು ಸೂಕ್ಷ್ಮ ರೂಪದಿಂದ ಆಕೆಯ ಗರ್ಭವನ್ನು ಪ್ರವೇಶಿಸಿ, ಬಂಗಾರದಂತೆ ಪ್ರಕಾಶಮಾನವಾದ ಪಿಂಡವನ್ನು ತನ್ನ ವಜ್ರಾಯುಧದಿಂದ ಏಳು ತುಂಡುಗಳನ್ನಾಗಿ ಬೇಧಿಸಿದ್ದಾನೆ. ಆದರೆ ಆ ಪಿಂಡಗಳು ಸಹಾ ಅಳಲು ಪ್ರಾರಂಭಿಸಿವೆ.

"ಅಳಬೇಡಿ ಅಳಬೇಡಿ" ಎನ್ನುತ್ತಾ ಇಂದ್ರನು ಒಂದೊಂದು ಖಂಡವನ್ನು ಮತ್ತೆ ಏಳು ತುಂಡುಗಳನ್ನಾಗಿ ಕತ್ತರಿಸಿದ್ದಾನೆ. ಆ ನಲವತ್ತೊಂಭತ್ತು ತುಂಡುಗಳು ಗುರು ಬಲದಿಂದ ಜೋಡಣೆಗೊಂಡು "ಇಂದ್ರ! ನಾವು ನಿಮ್ಮ ಸೋದರರು. ನಮ್ಮನ್ನೇಕೆ ಸಾಯಿಸ ಹೊರಟಿದ್ದೀಯೆ?" ಎಂದಿದ್ದಾರೆ. ಅವರೆಲ್ಲರೂ ವಾಸ್ತವದಲ್ಲಿ ತನ್ನ ದಾಯಾದಿಗಳೇ ಆದ್ದರಿಂದ ತನ್ನ ತಮ್ಮಂದಿರಿಂದ ತನಗಾವುದೇ ಭಯವಿಲ್ಲವೆಂದು ನಂಬಿ ತನ್ನ ವಧಾಕಾರ್ಯವನ್ನು ನಿಲ್ಲಿಸಿದ್ದಾನೆ.

ಇಂದ್ರನ ವಜ್ರಾಯುಧದಿಂದ ಖಂಡಿಸಲ್ಪಟ್ಟಿದರೂ ಸಹಾ ದಿತಿಗರ್ಭವು ಮರಣಿಸಲಿಲ್ಲ. ಮೇಲಾಗಿ ಭಗವತ್ಕರುಣೆಯಿಂದಾಗಿ ಆ ಪಿಂಡವು ನಲವತ್ತೊಂಭತ್ತು ಮಹಂತರಾಗಿ ಪರಿವರ್ತನೆಗೊಂಡಿದೆ. ವರ್ಷವಿಡಿ ವಿಷ್ಣು ವ್ರತದಿಂದ ಉಂಟಾದ ಆಧ್ಯಾತ್ಮಿಕ ಬಲದಿಂದಾಗಿ ದಿತಿಗರ್ಭ ಸಂಜಾತರು ದೇವತೆಗಳಾಗಿದ್ದಾರೆ. ಈ ವರ್ಷ ಸಂಪೂರ್ತಿಯ ವ್ರತಫಲದಿಂದ ದಿತಿ ಹೃದಯದಲ್ಲಿ ಮಾರ್ಪಾಡು ಉಂಟಾಗಿದೆ. ಆಕೆಯು ಸಂಪೂರ್ಣವಾಗಿ ಪವಿತ್ರಳಾಗಿದ್ದಾಳೆ. ಆಗ ಆಕೆಯ ಎದುರಿಗೆ ಇಂದ್ರನೊಂದಿಗೆ ನಲವತ್ತೊಂಭತ್ತು ಗುರುಪುತ್ರರು ಸಹಾ ಗೋಚರಿಸಿದ್ದಾರೆ. ಅವರೆಲ್ಲಾ ಅಗ್ನಿ ಪ್ರಭಾವದಿಂದ ತೇಜೋಮಯರಾಗಿದ್ದಾರೆ. ಈ ಮಕ್ಕಳೆಲ್ಲರೂ

ಇಂದ್ರನೊಂದಿಗೆ ಮೈತ್ರಿಯಿಂದ ಇದ್ದದ್ದು ಕಂಡು ದಿತಿ ಎಷ್ಟೋ ಸಂತೋಷಿಸಿದ್ದಾಳೆ. ಆಗ ಇಂದ್ರನು ದಿತಿಯನ್ನು ನಮಸ್ಕರಿಸಿ ತನ್ನ ಸೋದರರಾದ ದಾಯಾದಿಗಳೊಂದಿಗೆ ಸ್ವರ್ಗಕ್ಕೆ ಕ್ರಯಿಸಿದ್ದಾನೆ.

ದಿತಿ ಸುತರಿಗೆ ಅಮರತ್ವವನ್ನು ಪ್ರಸಾದಿಸಿದ ಪುಂಸವನ ವ್ರತದ ವಿಧಾನ ಹೀಗಿದೆ. ಮಾರ್ಗಶಿರ ಮಾಸದಲ್ಲಿ ಪತಿಯ ಆಣತಿಯೊಂದಿಗೆ ಪತ್ನಿಯು ಸರ್ವಾಭಿಷ್ಟ ಪ್ರದವಾದ ಈ ವ್ರತವನ್ನು ಪ್ರಾರಂಭಿಸಬೇಕು. ವಿಷ್ಣು ಆರಾಧನೆಯ ಮುಂಚೆ ಆಕೆ ಮನುಗಳ ಜನ್ಮ ವೃತ್ತಾಂತವನ್ನು ಕೇಳಬೇಕು. ಯೋಗ್ಯರಾದ ಬ್ರಾಹ್ಮಣರ ಆದೇಶಾನುಸಾರ ಪ್ರಾತಃ ಕಾಲದಲ್ಲೇ ತನ್ನ ದೈನಂದಿನ ಕಾರ್ಯಗಳನ್ನು ತೀರಿಸಿಕೊಂಡು ಶುಚಿಯಾಗಿ ಲಕ್ಷ್ಮಿ ನಾರಾಯಣರ ಅರ್ಚನೆಯನ್ನು ಆರಂಭಿಸ ಬೇಕು. ಲಕ್ಷ್ಮೀನಾರಾಯಣರನ್ನು ಯಥಾ ವಿಧಿಯಾಗಿ ಸ್ತುತಿಸಿದ ಕೂಡಲೇ ಆಕೆ ಮಂತ್ರೋಚ್ಚಾರಣೆಯಿಂದ ಹನ್ನೆರಡು ಆಹುತಿ ಗಳನ್ನು ಸಮರ್ಪಿಸಬೇಕು. ಧೂಪ-ದೀಪ ನೈವೇದ್ಯಾದಿಗಳಿಂದ ಅರ್ಚಿಸಿದ ಬಳಿಕ ಭಗವತ್ಪ್ರಸಾದವನ್ನು ಭಕ್ತರಿಗೆ ಸಮರ್ಪಿಸಬೇಕು. ವಿಧಿಯುಕ್ತವಾಗಿ ಈ ವ್ರತವನ್ನು ಆಚರಿಸುವ ಪುರುಷನು ಈ ಜನ್ಮದಲ್ಲಿಯೇ ಭಗವಂತನಿಂದ ಸಮಸ್ತ ಕೋರಿಕೆಗಳನ್ನು ಹೊಂದುತ್ತಾನೆ. ಮಡದಿಯು ಸೌಭಾಗ್ಯವನ್ನು ಐಶ್ವರ್ಯವನ್ನು, ಪುತ್ರರನ್ನು, ದೀರ್ಘಾಯುವನ್ನು ಪಡೆದು ಪತಿ- ಯಶ ಮತ್ತು ಉತ್ತಮವಾದ ಮನೆಯನ್ನು ಪಡೆಯುತ್ತಾಳೆ. ಅವಿವಾಹಿತ ಕನ್ಯೆ ಈ ವ್ರತವನ್ನು ಆಚರಿಸಿದಲ್ಲಿ ಉತ್ತಮವಾದ ಪತಿಯನ್ನು ಪಡೆಯುತ್ತಾಳೆ. ಪತಿ-ಪುತ್ರರಿಲ್ಲದ ಸ್ತ್ರೀ ಈ ವ್ರತವನ್ನಾಚರಿಸಿದರೆ ಆಧ್ಯಾತ್ಮಿಕ ಜಗತ್ತನ್ನು ಸೇರುತ್ತಾರೆ. ಹುಟ್ಟುತ್ತಲೇ ಮರಣಿಸುವ ಸಂತಾನವನ್ನು ಪಡೆಯುವವರಿಗೆ ಈ ವ್ರತದಿಂದ ದೀರ್ಘಾಯುವನ್ನು ಪಡೆದ ಸಂತಾನದ ಪ್ರಾಪ್ತಿಯಾಗುತ್ತದೆ. ಅಷ್ಟೇ ಅಲ್ಲದೇ ಆಕೆ ಐಶ್ವರ್ಯವಂತಳಾಗುತ್ತಾಳೆ. ಕುರೂಪಿಯಾದ ಸ್ತ್ರೀ ಈ ವ್ರತದಿಂದ ಸೌಂದರ್ಯವತಿಯಾಗುತ್ತಾಳೆ. ಈ ವ್ರತ ಪ್ರಭಾವದಿಂದ ರೋಗಿ ಆರೋಗ್ಯವಂತನಾಗುತ್ತಾನೆ. ಶ್ರಾದ್ಧ ಕರ್ಮಗಳಲ್ಲಿ ಈ ವ್ರತದ ಕಾರಣದಿಂದಾಗಿ ದೇವತೆಗಳು. ಪಿತೃದೇವತೆಗಳು ಸಂತೋಷಗೊಂಡು ಸರ್ವಕಾಮನೆಗಳನ್ನು ತೀರಿಸುತ್ತಾರೆ. ಈ ವ್ರತಪಾಲನೆ ಮಾಡುವವರಲ್ಲಿ ಶ್ರೀ ಲಕ್ಷ್ಮೀನಾರಾಯಣನು ಪ್ರಸನ್ನನಾಗುತ್ತಾನೆ. ಈ ರೀತಿಯಾಗಿ ಪುಂಸವನ ವ್ರತವಿಧಾನವನ್ನು ಶುಕದೇವನು ಪರೀಕ್ಷಿತ ಮಹಾರಾಜನಿಗೆ ಪೂರ್ತಿಯಾಗಿ ವಿವರಿಸಿದ್ದಾರೆ. ಕಲಿಯುಗದಲ್ಲಿ ಜನರೆಲ್ಲರೂ ಶೂದ್ರಪ್ರಾಯರೇ ಆದ್ದರಿಂದ ಅವರಿಗೆಲ್ಲಾ ಹರಿನಾಮ ಸಂಕೀರ್ತನವೇ ಸಕಲಾಭೀಷ್ಟ ಸಾಧನವೆಂದು ಹೇಳಲ್ಪಟ್ಟಿದೆ. ನಾಮರೂಪಿ ಭಗವಂತನನ್ನು ಆಶ್ರಯಿಸಿದ ಮಾನವನು ಕೃಷ್ಣಾನುರಾಗವೇ ಸರ್ವ ಫಲಸಾರವೆಂದು ತಿಳಿದುಕೊಂಡು ಅದರಿಂದಾಗಿಯೇ ಸುಖದ ಪಾಲುದಾರನಾಗುತ್ತಾನೆ. ಹರೇಕೃಷ್ಣ!

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.

ತಿರುಮಲೆ ತಿರುಪತಿ ದೇವಸ್ಥಾನಗಳು
ಟೋಲ್ ಫ್ರಿ ನಂಬರ್
18004254141

ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!

ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.

# ಹರಿದಾಸ ಸಾರಸ್ವತ ಸಂಗ್ರಹ

- ಸುಸ್ವರಂ ನಾಗರಾಜಾಚಾರ್ಯ

9441538258





ಪವಿತ್ರಭಾರತದೇಶ ಪುಣ್ಯಕ್ಷೇತ್ರಗಳಿಗೂ ನದಿಗಳಿಗೂ ಜನ್ಮಭೂಮಿಯಾಗಿದೆ. ಅದರಲ್ಲಿ ಉತ್ತರ ದಕ್ಷಿಣ ಭಾರತ ದೇಶದಲ್ಲಿ ಅಸಂಖ್ಯಾತ ಪುಣ್ಯನದಿಗಳು ಪುಣ್ಯಕ್ಷೇತ್ರಗಳು ಅಸಂಖ್ಯಾತ. ಅದರಲ್ಲಿ ಭಕ್ತ ಪ್ರಹ್ಲಾದನನುಗ್ರಹ ಮಾಡುವುದ ಕೋಸ್ಕರ ಭವನಾಶಿನೀ ತೀರ್ಥ ತೀರದಲ್ಲಿ ನವನಾರಸಿಂಗನಾಗಿ ಶ್ರೀ ಮನ್ನಾರಾಯಣನು ಸ್ವಯಂವ್ಯಕ್ತನಾಗಿ ಮಹಿಮಾನ್ವಿತನಾಗಿ ಆಶ್ರಿತಭಕ್ತಜನರಿಗೆ ಅಭೀಷ್ಟಪ್ರದಾತನು, ಅರಿಷ್ಟ ನಿವಾರಕನು ಆಗಿದ್ದಾನೆ. ಅಹೋಬಿಲ ಅಹೋಬಿಲ ಎಂದು ಕರೆಯಲ್ಪಡುತ್ತಿರುವ ಈ ಬೆಟ್ಟ ಶೇಷದೇವರ ಶರೀರ ಮಧ್ಯ ಪ್ರದೇಶವಾಗಿದೆ. "ಮಧ್ಯೆನೃಸಿಂಹಾದ್ರಿ"ಎಂದು ಭವಿಷ್ಯೋತ್ತರ ಪುರಾಣ ವಚನ. ಈ ಅಹೋಬಿಲಕ್ಷೇತ್ರಕ್ಕೇ ಗರುಡಾದ್ರಿ ಎಂದು ಮತ್ತೊಂದು ಹೆಸರು. ಪುರಾಣೇತಿಹಾಸಗಳಲ್ಲಿ ಹರಿದಾಸ ಸಾಹಿತ್ಯದಲ್ಲಿ ಎಷ್ಟೋ ಮಹಿಮಾನ್ವಿತವಾಗಿದ್ದೇಂದು ವರ್ಣಿಸಲ್ಪಟ್ಟ ಈ ಕ್ಷೇತ್ರ ಮಹಿಮೆಯನ್ನು ಕುರಿತು ಯತಿ ಶ್ರೇಷ್ಟರಾದ ಸೋದೇ ಶ್ರೀ ವಾದಿರಾಜ ಸ್ವಾಮಿಗಳವರು ತಮ್ಮ ತೀರ್ಥ-ಪ್ರಬಂಧದಲ್ಲಿ ವಿಸ್ತಾರವಾಗಿರುವ ವಿಷಯವನ್ನು ಸಂಗ್ರಹವಾಗಿ ತಿಳಿಸಿದ್ದಾರೆ.

"ಅಹೋಬಿಲನೃಸಿಂಹಸ್ಯ ಮಹಾಬಲಮುಪಾಶ್ರಿತಾಃ।
ಅಸತ್ತಮಿಸ್ರಸಂಮಿಶ್ರಾಂ ಗಣಯಾಮೋನ ಸಂಸ್ಕೃತಿಮ್॥

ಈ ಅಹೋಬಿಲನರಸಿಂಹದೇವರ ಅನುಗ್ರಹಬಲವನ್ನು ಸಂಪಾದಿಸಿಕೊಂಡರೇ ದುಷ್ಕರವಾದ ದುಷ್ಟರಿಂದ ದಣಿಯಲ್ಪಡುತ್ತಿರುವ ಈ ಸಂಸಾರದಲ್ಲಿನ ಕಷ್ಟನಷ್ಟಗಳೆಂಬ ಯಥಾ ಸಾಗರವನ್ನು ಸುನಾಯಾಸವಾಗಿ ದಾಟಿ, ಜ್ಞಾನವೆಂಬ ಪ್ರಕಾಶದಲ್ಲಿ ಅತ್ಯಾನಂದವನ್ನು ಹೊಂದಬಹುದು.

"ಯಸ್ತಂಭೇಪ್ರಕಟೇಭಾವ ಸಮಯಿಸ್ತಂಭಾಯಿತೇಪಿಸ್ಫುಟಿ ।
ಭಯಾದ್ಯೋಭವನಾಶಿನೀ ತಟಿಗತಶ್ಚಿಂದ್ಯಾತ್ ಸಮೇಮುಂಭವಮ್॥
ಯೋಪಾದ್ಬಾಲಕಮಪ್ಯಸೌ ನರಹರಿರ್ಮಾಂ ಬಾಲಿಶಂಪಾತುಯೋ ।
ರಕ್ಷ್ಯೋ ಶಿಕ್ಷದಸೌ ಪ್ರಭುಃಖಿಲಕುಲಂ ಶಿಕ್ಷೇದರೂಕ್ಷಪ್ರಿಯಃ॥

ಸ್ತಂಬಾರ್ಬಕನಾದ ಸ್ತಂಭೋದ್ಭವನಾದ ನರಸಿಂಹ ಸ್ತಂಭದಂತೇ ಅಜ್ಞಾನಿಯಾದ ನನ್ನಲ್ಲಿ ಪ್ರಕಟನಾಗಲಿ ಭವನಾ ಶಿನೀತೀರಸ್ತನಾದ ಈ ನರಸಿಂಹ ಭವನಾಶಕನಾದುದರಿಂದ ನನ್ನ ಭವವನ್ನು ಕಳೆಯಲಿ. ಬಾಲಕನಾದ ಪ್ರಹ್ಲಾದನನ್ನು ರಕ್ಷಿಸಿದಂತೇ ಬಾಲಕನಾದ ನನ್ನನು ರಕ್ಷಿಸಲಿ. ದುಷ್ಟ ಹಿರಣ್ಯಕನನ್ನು ಸಂಹರಿಸಿ ಶಿಷ್ಟರನ್ನು ರಕ್ಷಿಸಿದ ಈ ನರಸಿಂಹನು ದುಷ್ಟ ಸಮೂಹವನ್ನು ನಾಶಪಡಿಸಿ ಶಿಷ್ಟಸಮೂಹವನ್ನು ವೃದ್ಧಿ ಮಾಡಲಿ.

"ವಿರುದ್ಧಧರ್ಮಧರ್ಮಿತ್ವಂ ಸರ್ವಾಂತರ್ಯಾಮಿ ತಾಂ ತಥಾ ।
ನರಸಿಂಹೋಽದ್ಭುತಸ್ತಂಭೂತಃಸ್ಪಷ್ಟಯತ್ಯಯಂ॥

ನರಮೃಗರೂಪ ನರಸಿಂಹರೂಪ ಇದರಿಂದ ತಾನು ಸ್ವೇಚ್ಛಾರೂಪಿ ಸ್ವತಂತ್ರಾನಂತ ಸ್ಪಷ್ಟವಾಯಿತು.ಅವನು ಸರ್ವಾಂತರ್ಯಾಮಿ ಭಕ್ತವತ್ಸಲಾಂತ ಈ ಸ್ತಂಭದಲ್ಲಿ ಬಂದು ಪ್ರಹ್ಲಾದನನ್ನು ಅನುಗ್ರಹಿಸಿದುದರಿಂದ ಸ್ಪಷ್ಟವಾಯಿತು. ಭಯಂಕರನಾದ ಹಿರಣ್ಯಾಕ್ಷನನ್ನು ಭಯಂಕರ ನರಸಿಂಹ ರೂಪದಿಂದ ಬಂದು ತನ್ನ ತೀಕ್ಷ್ಣ ನಖಗಳಿಂದ ಅವನ ಉದರವನ್ನು ತೆಗೆದು.ಕರುಳಿನ ಮಾಲೇಧರಿಸಿ, ಸಿಡಿಲಂತೇ ಗರ್ಜನೆಮಾಡಿ ಮುಲ್ಲೋಕಗಳನ್ನು ಭಯಪಡಿಸಿದ ಸ್ವಾಮಿ ಅಷ್ಟೇ ದಯಾ ಸಮುದ್ರನು ನಂಬಿದ ಭಕ್ತಬಾಲಪ್ರಹ್ಲಾದನಿಗೆ ಕರುಣಾಮೂರ್ತಿಯಾಗಿ ಅನುಗ್ರಹಿಸಿರುವನು. ದುಷ್ಟರಿಗೆ ಭಯಂಕರನಾದರೆ, ನಂಬಿದ ಭಕ್ತರಿಗೆ ಆಶ್ರಿತಭಕ್ತ ಚಿಂತಾಮಣಿ ಈ ನರಸಿಂಹ, ಎಂದು ವಿದಾರತರಿ ಪೋದರ ಪ್ರಕಟ ತಾಂತ್ರ ಮಾಲಾಧರಂ.... ಶ್ರೀವಾದಿರಾಜರೆನ್ನುತ್ತಾರೆ ಅಷ್ಟೇ ಅಲ್ಲದೇ ಭಕ್ತರಿಗೆ ಮಾನವನಂತೇ ಶತ್ರುಗಳಿಗೇ ಸಿಂಹದಂತೇ ಇರುವನು ನರಸಿಂಹ ಎಂದೆನ್ನುತ್ತಾರೇ. ಈ ನರಸಿಂಹ ತೀರ್ಥಾದ್ರಿ ಎಂದು ಪ್ರಸಿದ್ಧವಾದ ಈ ಬೆಟ್ಟದಲ್ಲಿದ್ದ ಸುಪ್ರಸಿದ್ಧ ಭವನಾಶಿನೀತೀರ್ಥ ತೀರದಲ್ಲಿದ್ದಾನೇ. ಈ ತೀರ್ಥದಮಹಿಮೆಯನ್ನು ಕುರಿತು ಹೇಳುತ್ತಾ.

"ನೃಸಿಂಹ ವಿಲಸತ್ಪಾದ ಕುಶೇಶಯ ಕೃತೋತ್ಸತೇ ।
ಭವನಾಶಿನಿ ಮಚ್ಛೀರ್ಣ ಪಾಪಾನಾಂ ಭವನಾಶಿನೀ ॥"

ಸಕಲ ಪಾಪಗಳನ್ನು ನಾಶಪಡಿಸುವ ಶಕ್ತಿ ಹೊಂದಿರುವುದರಿಂದ ಈ ತೀರ್ಥಭವನಾಶಿನೀ ಎಂದು ಪ್ರಸಿದ್ಧ. ಈ ಭವನಾಶಿನೀತೀರಸ್ಥ ಅಹೋಬಿಲ ನರಸಿಂಹ ದೇವರ ಸನ್ನಿಧಾನಯುಕ್ತವಾದ ಈ ಕ್ಷೇತ್ರಮಹಿಮೆಯನ್ನು ಶ್ರೀ ವಿಜಯದಾಸರು ಸುಳಾದಿ ರೂಪದಲ್ಲಿ ವಿಸ್ತಾರವಿಷಯವನ್ನು ಸಂಗ್ರಹವಾಗಿ ತಿಳಿಸಿದ್ದಾರೆ.

"ಅನಂತಶಯನ ಅಂಬುಜದಳ ನಯನ.. ಎಂದು ಪ್ರಾರಂಭಿಸಿ ಶ್ರೀನಿವಾಸನ ಆಜ್ಞೇಯ ಮೇರೆಗೇ ಮಾರ್ಕಂಡೇಯರು ಈ ಕ್ಷೇತ್ರದಲ್ಲಿ ಅಸಂಖ್ಯಾತ ವರ್ಷಗಳು ತಪಸ್ಸು ಮಾಡಿದ ರೆಂದು ಈ ಕ್ಷೇತ್ರ ಮುಲ್ಲೋಕಗಳೊಳಗೇ ಅತಿ ಶ್ರೇಷ್ಟವಾದದೆಂದು ಹೇಳಿದರು ಅಷ್ಟೇ ಅಲ್ಲದೇ ಈ ಭೂಮಿಯಲ್ಲಿದ್ದ ರಾಮೇಶ್ವರ ಮೊದಲು ಕುರು ಚ್ಛಾಂಗಲಿ ವಿಶಾಲಿ. ಮಕರ್ಣಿಕಾ, ಕಾಶೀ, ಶ್ರೀರಂಗಾದಿ ಕ್ಷೇತ್ರ ಸಂದರ್ಶನಫಲ ಅಷ್ಟೇ ಅಲ್ಲದೇ ಗಂಗಾ ತೀರದಲ್ಲಿ ನೂರುವರ್ಷಗಳ ವಾಸ ಮಾಡಿದ ಫಲಕ್ಕಿಂತಲೂ ಅಧಿಕ ಫಲ ಈ ಕ್ಷೇತ್ರ ಸಂ ದರ್ಶನ ಫಲವೆಂದು ಜೀವನದಲ್ಲಿ ಒಂದು ಸಾರಿ ಈ ಅಹೋಬಿಲಕ್ಷೇತ್ರ ಯಾತ್ರೆ ಮಾಡಿದವನು ಶ್ರೀಮಂತನಾಗುವನಲ್ಲದೇ ಇಹಪರ ಸೌಖ್ಯವನ್ನು ಹೊಂದುವನು ಎಂದು ಹೇಳುತ್ತಾ

"ಪರಮಾಯುಸಿದ್ಧಿವದು ಮಾರ್ಕಂಡ್ಯಕ್ಷೇತ್ರಾ,ನರಸಿಂಹನಂತ ವಿಜಯವಿಠಲವಾಸಾ ಎಂದು ಸುಳಾದಿಯನ್ನು ಮುಗಿಸುತ್ತಾರೆ. ಇನ್ನು ಇದೇ ಅಹೋಬಿಲ ಕ್ಷೇತ್ರಮಹಿಮೆಯನ್ನು ಶ್ರೀ ಗೋಪಾಲದಾಸರು ಕೂಡ "ಅನಂತನನ್ನು ನೋಡಿ ಅಗಣಿತ ಗುಣಗಣನ" ಅನ್ನುವ ಸುಳಾದಿಯಲ್ಲಿ ಸಂಗ್ರಹವಾಗಿ ಈ ರೀತಿ ತಿಳಿಸಿಕೊಟ್ಟಿದ್ದಾರೆ.

"ಭವನಾಶನಮಾಳ್ಪಾ ಭಾಗೀರಥೀಯಜನಕ
ಭವನಾಶಿನೀ ತೀರ್ಥದಲ್ಲಿ ತಾನೇ ನಿಂದು
ಅವನಿಯೊಳಗೊಬ್ಬ ಚಂಡಶಾಸನನು ಯಂಬವನು
ತಾನು ಬಲು ಕಲಿಗಳ ದೂಷಿಸುತ"
ಭವದಿಪೀಡಿತನಾಗಿ ಬಹುಲಿಪ್ರಾರ ದ್ರೋಹವನು ತಾಕಿ ಶವನು ಆಗಿ ಬೀಳೇ
ಜವನದೂತರುಬಂದು ಜಬರಿಸಿ ವೈಯ್ಯುವರೆಗೂ ಯುಕ್ಕವನ ಅಂಗುಟ ಬೆರಳು ಭವನಾಶಿಲಿ ಬೀಳೇ
ಭವತರಿದು ಅನುಭವಕೇ ತಂದುಯಿಟ್ಟು ಭುವನದೊಳಗೆ ದಶರಥನೇ ಆದ
ಭವರೋಗದವೈದ್ಯ ಗೋಪಾಲವಿಠಲನು ಪವನ ನಂತರ ನಿಂತು ಪಂಡಿತರನು ಪೊರೆವ!

ಈ ಭವನಾಶಿನೀ ಹುಟ್ಟಿಲ್ಲದೇ ಮಾಡುವ ಸಾಮರ್ಥ್ಯವನ್ನು ಹೊಂದಿರುವುದು.ಇಲ್ಲಿ ಪೂರ್ವದಲ್ಲಿ ಚಂಡಶಾಸನನೆಂಬವನು ಜ್ಞಾನಿಗಳನು ಹಿಂಸಿಸುತ್ತಾ ಕಾಲ ಕಳೆಯುತ್ತಿರಲು ಮುಂದೇ ಅವನಿಗೆ ಮರಣವಾಸನ್ನವಾದಾಗ ಈ ಭವನಾಶಿನೀ ತೀರ್ಥದಲ್ಲಿ ಅವನು ಸತ್ತಾಗ ಅವನ ಶವವನ್ನು ಯಮದೂತರು ಒಯ್ಯುವಾಗ ಅವನ ಬೆರಳು ಜಾರಿ ಈ ಭವನಾಶಿನೀಯಲ್ಲಿ ಬಿದ್ದಲ್ಲಿದಕೇ ಅವನ ಈ ತೀರ್ಥ ಪ್ರಭಾವದಿಂದ ಮುಂದೇ ದಶರಥ ಮಹಾರಾಜನೆಂದು ಪುರಾಣಪ್ರಸಿದ್ಧ ವೃತ್ತಾಂತವನ್ನು ತಿಳಿಸಿದ್ದಾರೆ. ಈ ಕ್ಷೇತ್ರದಲ್ಲಿ ಸಿರಿದೇವಿ ಹೆಸರಿನ ತೀರ್ಥ ಉಂಟು ಎಂದು ಹೇಳುತ್ತಾ ಗರುಡ. ಉರಗ, ವಾಯು, ತೀರ್ಥಗಳಿವೇ ಎಂದು ಹೇಳುತ್ತಾರೆ, ಅಷ್ಟೇ ಅಲ್ಲದೇ.

ಇಲ್ಲಿ ಅನಂತಾನಂತವಾಗಿ ಮೆಲ್ಲನೇ ತಾ ತೋರುತಿಪ್ಪ ಇಲ್ಲೇ ಅನಂತಾಯುಧಗಳು ಬಲ್ಲವರಿಗೆ ತೋರು ತಿಪ್ಪ ಇಲ್ಲಿ ಒಂದು ಕರ್ಮವು ಮಾಡಿ ಅನಂತ ಮಡಿ ಅವರಿಗೀವ ಎಲ್ಲಿ ನೋಡ ತೀರ್ಥಗಳು ಎಲ್ಲಿ ನೋಡ ದೇವತೆಗಳು ಎಲ್ಲಿ ನೋಡ ಮುನಿಗಳು ಎಲ್ಲಿ ನೋಡ ತಾಪಸಿಗಳು ನಿಳ್ವಸಿಪ್ಪರೊಂದು ಒಂದು ಬಳ್ಳಿ ವೃಕ್ಷಾ ರೋಪದಿಂದ ಪಲ್ಲವಿಸುತ್ತಾ ನಾನಾಪಕ್ಷಿ

ಜಾತಿ ರೂಪದಿಂದ ಹುಲ್ಲು ಕಾಷ್ಠಗಳನ್ನು ಇಲ್ಲಿ ಛೇದಿಸುವುದಕ್ಕೆ ಮೆಲ್ಲನೇ ತಿಳಿದು ಹರಿಗಳ್ಳಿ ಇನ್ನರ್ಪಿಸಬೇಕು.ಎಲ್ಲಿ ಪುಷ್ಪಫಲವು ಶ್ರೀ ವಲ್ಲ ಭನ್ನ ಸೇವಿಸುತ್ತ ಇಲ್ಲಿ ಇರುತಿಪ್ಪುವಾವು ಬಲ್ಲವರು ತಿಳಿದು ನೋಡ ಎಲ್ಲರಂತರ್ಯಾಮಿ ಯಾದ ಬಲ್ಲದ ಗೋಪಾಲವಿಠಲ ಅಲ್ಲಿ ಪ್ರಹಾದ ಗೊಲಿದು ಇಲ್ಲಿ ಬಂದ ದೈವ ನೋಡಿ ಸಕಲ ದೇವತಾ ಸಾನ್ನಿಧ್ಯ ಉಳ್ಳಮಹಾಕ್ಷೇತ್ರ ಈ ಅಹೋ ಬಿಲಕ್ಷೇತ್ರ.

ಪ್ರಹ್ಲಾದವರದನಾದ ಈ ಅಹೋಬಿಲನರಸಿಂಹ ಅಂದು ಹಿರಣ್ಯಾಕ್ಷನನ್ನು ಸಂಹರಿಸಲಿಕ್ಕೇ ಕಂಭದಿಂದ ಬಂದ ಕಾಲಕ್ಕೇ "ಅದೃಷ್ಟಶ್ವತಪೂರ್ವಸ್ಥಂ" ಇಂಥಾ ಭಯಂಕರ ರೂಪವನ್ನು ನಾನು ಪೂರ್ವದಲ್ಲಿ ನೋಡೇ ಇಲ್ಲ ಎಂದೆಂದ ಮಹಾಲಕ್ಷ್ಮೀ ಮಾತನ್ನು ಅನುಸರಿಸಿ, ಅಸ್ತಂಭೋದ್ಭವನಾದ ನೃಕೇಸರಿ ಯಾವ ರೀತಿಯಾಗಿದ್ದ ಯಾವ ರೀತಿಯಾಗಿ ಆ ದುಷ್ಟನನ್ನು ಸಂಹರಿಸಿದ ಶ್ರೀಪುರಂದರ ದಾಸರು ಒಂದು ಹಾಡಿನಲ್ಲಿ ಮನೋನೇತ್ರಗಳಿಗೇ ಗೋಚರಿಸುವಂತೇ ತಿಳಿಸಿದ್ದಾರೇ

"ಮಹದಾದಿದೇವ ನಮೋ ಪ್ರಹ್ಲಾದ
ವರದ ಅಹೋಬಲ ನರಸಿಂಹ
ಧರಣಿ ಗುಳ್ಳುಸವಾಗೆ ತಾರಾಪಥವು ನಡುಗೇ
ಸುರರು ಕಂಗೆಟ್ಟೋಡೆ ನಭವಬಿಟ್ಟು
ತರುಗಿರಿಗಳಲ್ಲಾಡೆ ಶರಧಿಗಳು ಕುದಿದುದಕೇ
ಉರಿಯನುಗುಳುತ ಉದ್ಭವಿಸಿದ ನರಸಿಂಹ
ಸಿಡಿಲಂತೇ ಗರ್ಜಿಸುತ ಕುಡಿಯನಾಲಿಗೇ
ಚಾಚಿ ಅಡಿಗಡಿಗೆ ಲಂಘಿಸುತ ಕಡುಕೋಪ ದಿಂದ
ಮುಡಿವಿಡಿದು ರಕ್ಕಸನ ಕೆಡಹಿ ನಖದಿಂದೊತ್ತಿ ಕಡು
ಉದರಬಗೆದ ಕಡುಗಲಿ ನರಸಿಂಹ
ಸರಸಿಜೋದ್ಭವಹರಪುರಂದರಾದಿ ಸಮಸ್ತ
ಸುರರು ಅಂಬರದಿ ಪೂಮಳಯೆಗರೆಯೇ
ಸಿರಿಸಹಿತ ಗರುಡಾದ್ರಿಯಲಿ ನಿಂತು ಭಕ್ತರನು
ಕರುಣಿಸಿದೇ ಪುರಂದರವಿಠ್ಠಲನರಸಿಂಹ"

"ಇತಿ ಪುಂಸಾರ್ಪಿತೋವಿಷ್ಣೋಃ ಭಕ್ತೇ ಶ್ಚೇನ್ನವಲಕ್ಷಣಾ" ಎಂದು ನವವಿಧಭಕ್ತಿಯನ್ನು ತಂದೆಗೇ ಉಪದೇಶ ಮಾಡಿದ ಪ್ರಹ್ಲಾದನ ಭಕ್ತಿಗೆ ಮೆಚ್ಚಿ ಈ ಬೆಟ್ಟದಲ್ಲಿ ನವನಾರ ಸಿಂಹನಾಗಿದಲ್ಲಿ ಭಕ್ತರನ್ನು ಅನುಗ್ರಹಿ ಸುತ್ತ ಇದ್ದಾನೆಂದರು ಪುರಂದರದಾಸರು.


ಶರಣು ಶರಣು ಸುರೇಂದ್ರೇವಂದಿತ ಶಂಖಚಕ್ರಗದಾಧರ।
ಶರಣು ಸರ್ವೇಶ್ವರನೇ ಅಹೋಬಲಗಿರಿಯ ನರಸಿಂಹ ಮೂರ್ತಿಗೆ ॥

ಎಂದು ಹೇಳುತ್ತಾ ಐದು ನುಡಿಗಳ (ಚರಣಗಳ) ಕೀರ್ತನೆಯಲ್ಲಿ ಉಗ್ರನರಸಿಂಹನ ರೌದ್ರಾಕಾರವನ್ನು ಪ್ರಹ್ಲಾದನಿಗೆ ಶಾಂತಸ್ವರೂಪವನ್ನು ದೈತ್ಯನ ಸಂಹಾರಾನಂತರ ದೇವತೆಗಳನ್ನು ಅನುಗ್ರಹಿಸಿದ ಶಾಂತನರಸಿಂಹ ಮೂರ್ತಿಯನ್ನು ಕಣ್ಣು ಮುಂದೆ ನಿಲ್ಲಿಸುತ್ತಾ, ಹಾಡಿನಲ್ಲಿ ವೀರ, ಜ್ವಾಲ, ಉಗ್ರ, ಕರಾಳ, ಶಾಂತನರಸಿಂಹ ನಿಗೇ ಶರಣು ಎಂದಿದ್ದಾರೆ. ಇಂಥಾ ಮಹಿಮಾನ್ವಿತನಾದ ಅಹೋಬಿಲ ನರಸಿಂಹನು ನಮ್ಮೆಲ್ಲರ ಅರಿಷ್ಟಗಳನ್ನು ದೂರ ಮಾಡಿ ಅನುಗ್ರಹಿಸಲಿ.

"ನರಸಿಂಹಮಂತ್ರ ಒಂದಿರಲು ಸಾಕು ದುರಿತಕೋಟಿ
ಯತರಿದು ಭಾಗ್ಯವನು ಕೊಡುವ" (ಶ್ರೀ ಪುರಂದರದಾಸರು)
ಕಾಯೋ ಶ್ರೀ ನಾರಸಿಂಹ । ಕಾಯೋ ಜಯನಾರಸಿಂಹ
ಕಾಯೋ ಶ್ರೀ ನಾರಸಿಂಹ। ತ್ರಯಂಕಾದ್ಯ ಮಕೇಶ
ಭಯಾಂಧತಿಮಿರ ಮಾರ್ತಾಂಡ ಶ್ರೀ ನಾರಸಿಂಹ
ಧಿಷಣನೇ ಸುಭದ್ರ ಘೋರಮೃತ್ಯಾಗೇ ಮೃತ್ಯಾ
ಸುಕ್ಷುಮ್ಣಾನಾಡೀ ಸ್ಥಿತ ವಿಭೂತಿ ಶ್ರೀ ನಾರಸಿಂಹ"
(ಗೋಪಾಲದಾಸರು)

## ಸಪ್ತಗಿರಿವಾಸ ಶ್ರೀನಿವಾಸ

**ಏಳು ಬೆಟ್ಟದೊಡೆಯನೇ ಶ್ರೀನಿವಾಸ. ಶ್ರೀನಿವಾಸನ ದಿವ್ಯ ಕ್ಷೇತ್ರದಲ್ಲಿ ಶೇಷಾದ್ರಿ, ವೃಷಭಾದ್ರಿ, ಅಂಜನಾದ್ರಿ, ನೀಲಾದ್ರಿ, ಗರುಡಾದ್ರಿ, ವೇಂಕಟಾದ್ರಿ, ನಾರಾಯಣಾದ್ರಿ ಏಳು ಬೆಟ್ಟಗಳಲ್ಲಿ ನಿಂತಿರುವ ಸಪ್ತಗಿರೀಶನ ದರ್ಶನವನ್ನು ಪಡೆದು ಶ್ರೀನಿವಾಸನ ಆಶೀರ್ವಾದವಾಗಿ ಈ ಸಪ್ತಗಿರಿಯ ಪತ್ರಿಕೆಯು ಭಕ್ತರಿಗೆ ಪ್ರಸಾದವಾಗಿ ಸಪ್ತಗಿರಿ ಮಾಸ ಪತ್ರಿಕೆಯಾಗಿ ಕನ್ನಡ, ಇಂಗ್ಲೀಷ್, ತೆಲುಗು, ತಮಿಳು, ಮತ್ತು ಹಿಂದಿ ಭಾಷೆಗಳಲ್ಲಿ ಮುದ್ರಿತಗೊಳ್ಳುತ್ತಿದೆ. ಹಾಗೆಯೇ ಸಪ್ತಗಿರಿಗೆ ಅನುಬಂಧವಾಗಿ ಬಾಲಸಪ್ತಗಿರಿಯನ್ನು ಮಕ್ಕಳಿಗಾಗಿ ಕಳೆದ 2 ತಿಂಗಳಿಂದ ಮುದ್ರಿಸಲಾಗುತ್ತಿದೆ. ಇಂದಿಗೆ ಸಪ್ತಗಿರಿ ಮಾಸ ಪತ್ರಿಕೆಗೆ 50 ವಸಂತಗಳು ಸಂಪೂರ್ಣವಾದ ಶುಭ ಸಂದರ್ಭದಲ್ಲಿ ಸ್ವರ್ಣೋತ್ಸವವನ್ನು ಆಚರಿಸಿಕೊಳ್ಳುತ್ತಿದೆ.ಹಾಗೆಯೇ ಸ್ವಾಮಿಯ ಆಶೀರ್ವಾದದೊಂದಿಗೆ ರಜತೋತ್ಸವವನ್ನು ಆಚರಿಸಿಕೊಳ್ಳಬೇಕೆಂದು ಶ್ರೀನಿವಾಸನಲ್ಲಿ ಪ್ರಾರ್ಥಿಸುತ್ತಾ ಪಾಠಕರಿಗೆ ಚಂದಾದಾರರಿಗೂ ಸ್ವರ್ಣೋತ್ಸವದ ಶುಭಾಶಯಗಳನ್ನು ತಿಳಿಸುತ್ತಿದೆ.**



**- ನಿಮ್ಮ ಸಪ್ತಗಿರಿ**

# ಮಂಗಳ ಪ್ರದ – ಆರೋಗ್ಯ ಪ್ರದ ಖರ್ಜೂರ



ಮೂಲ: ಡಾ॥ ಸಿ. ಮಧುಸೂದನಶರ್ಮ
9000761390
ಅನುವಾದ: ಶ್ರೀಮತಿ



ಖರ್ಜೂರದಲ್ಲಿ ಒಣಖರ್ಜೂರ, ಹಸಿ ಖರ್ಜೂರವೆಂದು ಎರಡು ಬಗೆಯಲ್ಲಿ ನಮಗೆ ಲಭ್ಯವಿದೆ. ಪ್ರಸ್ತುತ ಒಣ ಖರ್ಜೂರದ ಬಗ್ಗೆ ತಿಳಿಯೋಣ.

ಪೂಜೆಗಳಲ್ಲಿ, ವ್ರತಗಳಲ್ಲಿ, ಪುಣ್ಯ ಕಾರ್ಯಗಳಲ್ಲಿ, ಮದುವೆಗಳಲ್ಲಿ, ನಾಮಕರಣಗಳಲ್ಲಿ ಮುಂತಾದ ಕಾರ್ಯಕ್ರಮಗಳಲ್ಲಿ ಮಂಗಳಪ್ರದವಾಗಿ ಭಾವಿಸಿ ಅವನ್ನು ಪ್ರಾಚೀನ ಕಾಲದಿಂದಲೂ ಬಳಸುವ ಸನಾತನ ಸದಾಚಾರ ನಮ್ಮ ಭಾರತೀಯ ಸಂಸ್ಕೃತಿ ಸಂಪ್ರದಾಯದಲ್ಲಿದೆ.

ಆಂಗ್ಲ ಭಾಷೆಯಲ್ಲಿ ಡೇಟ್ಸ್ ಎಂದೂ, ಹಿಂದಿಯಲ್ಲಿ ಖರ್ಜೂರ್ ಎಂದೂ, ಶಾಸ್ತ್ರೀಯವಾಗಿ "ಫಿಯೋನಿಕ್ಸ್ ಡೆಕ್ಟಲಿಫೆರಾ" ಎಂದು ವ್ಯವಹರಿಸಲ್ಪಡುವ ಖರ್ಜೂರ 'ಅರಕೇಸಿ' ಎಂಬ ವೃಕ್ಷ ಕುಟುಂಬಕ್ಕೆ ಸೇರಿದ್ದು.

ಪೋಷಕಾಂಶಗಳು ಪುಷ್ಕಳವಾಗಿರುವ ಖರ್ಜೂರದಲ್ಲಿ ಅಪಾರವಾದ ಔಷಧೀಯ ಗುಣಗಳು ಸಹಾ ನಿಬಿಢವಾಗಿ ಕೇಂದ್ರೀಕೃತಗೊಂಡಿವೆ.

ಅತಿ ಕಡಿಮೆ ಸಮಯದಲ್ಲಿ ರಕ್ತದಲ್ಲಿ ಬೆರೆತು ಶೀಘ್ರವಾಗಿ ಶಕ್ತಿಯನ್ನು ಪ್ರಸಾದಿಸುವ ಆಹಾರ ಪದಾರ್ಥಗಳಲ್ಲಿ ಖರ್ಜೂರ ಅಗ್ರಸ್ಥಾನ ಪಡೆದಿದೆ.

ನಮ್ಮ ದೈನಂದಿನ ಜೀವನದಲ್ಲಿ ಎದುರಾಗುವ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಖರ್ಜೂರ ಹೇಗೆ ಪರಿಷ್ಕಾರವನ್ನು ತೋರುತ್ತದೆಂಬುದನ್ನು ಇಲ್ಲಿ ತಿಳಿದುಕೊಳ್ಳೋಣ.

### ಮಲಬದ್ಧತೆಗೆ

ದಿನವೂ ರಾತ್ರಿ ಮಲಗುವಾಗ 2-3 ಒಣ ಖರ್ಜೂರಗಳನ್ನು ನೆನೆಸಿಟ್ಟು ಬೀಜಗಳನ್ನು ಹಿಸುಕಿ ಹೊರತೆಗೆದು ಆ ತಿರುಳಿನೊಂದಿಗೆ 10 ಒಣದ್ರಾಕ್ಷಿಗಳನ್ನು 100 ಮಿ.ಲೀ. ನೀರು ಹಾಕಿ ಸ್ವಲ್ಪ ಹೊತ್ತು ಕುದಿಸಿ ತಿನ್ನುತ್ತಿರಬೇಕು.

### ಉಪವಾಸಾನಂತರ ಮರಳಿ ತಕ್ಷಣ ಶಕ್ತಿ ಪಡೆಯಲು

100 ಮಿ.ಲೀ. ನೀರಿನಲ್ಲಿ ಎರಡು ಖರ್ಜೂರ ನೆನೆಸಿದ ತಿರುಳು, 1-2 ಗ್ರಾಂನಷ್ಟು ಪಿಸ್ತ ಬೀಜ, ಗೋಡಂಬಿ ಬೀಜಗಳನ್ನು ಸ್ವಲ್ಪ ಹೊತ್ತು ನೆನೆಸಿ ಮೆತ್ತಗೆ ಹಿಸುಕಿ, ನಾದಿ 100 ಮಿ.ಲೀ ಹಾಲಿನಲ್ಲಿ ಕಲಸಿ, ಕುದಿಸಿ ತಕ್ಕಷ್ಟು ಕಲ್ಲುಸಕ್ಕರೆ ಬೆರೆಸಿ ಸೇವಿಸಬೇಕು.

### ಮುಟ್ಟು ಕ್ರಮವಾಗಿ ಬರಲು

ಖರ್ಜೂರದ ತಿರುಳನ್ನು ಚೆನ್ನಾಗಿ ಒಣಗಿಸಿ ಮಾಡಿದ ಚೂರ್ಣ 50 ಗ್ರಾಂ, ಶುಂಠಿ ಪುಡಿ 50 ಗ್ರಾಂ. ಕಲಸಿಟ್ಟು ಕೊಂಡು ಮುಟ್ಟಿನ ದಿನದ 10 ದಿನಗಳ ಮುಂಚೆಯಿಂದ ದಿನವೂ ಹಸಿಹೊಟ್ಟೆಯಲ್ಲಿ 200 ಮಿ.ಲೀ. ಬಿಸಿಹಾಲು ಅಥವಾ ಉಗುರು ಬೆಚ್ಚಗಿನ ನೀರಿನಲ್ಲಿ ಅರ್ಧ ಸ್ಪೂನ್‌ನಿಂದ ಒಂದು ಸ್ಪೂನ್‌ನಷ್ಟು ಈ ಪುಡಿಯನ್ನು ಕಲಸಿ ಸೇವಿಸುತ್ತಿದ್ದು ಮುಟ್ಟು ಬಂದ ನಂತರ ನಿಲ್ಲಿಸಿಬಿಡಬೇಕು.

ಈ ವಿಧವಾಗಿ 3-4 ಮುಟ್ಟುಗಳಿಗೆ ಮಾಡಿದರೆ ಋತು ಚಕ್ರ ಕ್ರಮಬದ್ಧವಾಗುತ್ತದೆ.

### ರಕ್ತವೃದ್ಧಿಗೆ

ರಾತ್ರಿ ಮಲಗುವ ಮುನ್ನ 100 ಮಿ.ಲೀ. ನೀರಿನಲ್ಲಿ ಎರಡು ಒಣ ಖರ್ಜೂರ ನೆನೆಸಿ ತೆಗೆದ ತಿರುಳು, ಸಿಪ್ಪೆ ತೆಗೆದ 3-4 ಬಾದಾಮಿ ಬೀಜಗಳು, 15- 20 ರ ವರೆಗೆ ಒಣದ್ರಾಕ್ಷಿಗಳನ್ನು ಹಾಕಿ ಬೆಳಗ್ಗೆ ಅವುಗಳನ್ನೆಲ್ಲಾ ಅಗೆದು ನುಂಗಿ ಉಳಿದ ನೀರನ್ನು ಕುಡಿಯಬೇಕು.





**ಸೂಚನೆ:**

ಬಾದಾಮಿ ಬೀಜಗಳನ್ನು ಒಂದು ಗಂಟೆ ಬಿಸಿನೀರಿನಲ್ಲಿ ನೆನೆಸಿ ನಂತರ ಸಿಪ್ಪೆಗಳನ್ನು ತೆಗೆಯಬೇಕು.

**ಸ್ತ್ರೀಯರಲ್ಲಿ ಅಧಿಕ ಸ್ರಾವ ತಗ್ಗಲು**

ಒಣ ಖರ್ಜೂರದ ತಿರುಳಿನ ಪುಡಿ, ಹುರಿದ ಜೀರಿಗೆಯ ಪುಡಿ, ಸ್ಪಟಿಕ ಬೆಲ್ಲದ ಪುಡಿ ಒಣದ್ರಾಕ್ಷಿಗಳು ಒಂದೊಂದನ್ನು 25 ಗ್ರಾಂನಂತೆ ಕಲಸಿ ಮೆತ್ತಗೆ ನಾದಿ ಸಂಗ್ರಹಿಸಿಟ್ಟುಕೊಂಡು ಬೆಳಗ್ಗೆ-ಸಾಯಂಕಾಲ ಬಾರಿಯೊಂದಕ್ಕೆ 2-3 ಗ್ರಾಂ ಔಷಧಿಯನ್ನು 50 ಮಿ.ಲೀ. ನೀರಿನಲ್ಲಿ ಕಲಸಿ ಸೇವಿಸುತ್ತಿರಬೇಕು.

**ಮೂತ್ರ ವಿಸರ್ಜನೆ ನಿರಾತಂಕವಾಗಿ ಆಗಲು**

ದಿನವೂ ಒಂದು ಅಥವಾ ಎರಡು ಬಾರಿ 200 ಮಿ.ಲೀ. ನೀರಿನಲ್ಲಿ 2-3 ಖರ್ಜೂರ ನೆನೆಸಿದ ತಿರುಳನ್ನು ಹಾಕಿ 2-3 ಗ್ರಾಂ ಧನಿಯಾ ಚೂರ್ಣವನ್ನು ಹಾಕಿ ಕಲಸಿ 100 ಮಿ.ಲೀ. ನೀರು ಉಳಿಯುವಂತೆ ನೀರನ್ನು ಮರಳಿಸಿ ಕೆಳಗಿಳಿಸಿ ಬಿಸಿಯಾರಿದ, ಶೋಧಿಸಿ, ಆ ನೀರನ್ನು ಸೇವಿಸುತ್ತಿರಬೇಕು. ಈ ರೀತಿ ಬಳಸುವುದರಿಂದ ಮೂತ್ರದಲ್ಲಿ ರಕ್ತ ಬರುವುದನ್ನು ಸಹಾ ತೆಡೆಯಬಹುದು.



**ಸಂತಾನವುಂಟಾಗಲು**


ಪುರುಷರು ಪ್ರತಿನಿತ್ಯ ಹಸಿಹೊಟ್ಟೆಯಲ್ಲಿ ಖರ್ಜೂರ, ಪಿಸ್ತ, ಅಕ್ರೂಟ್, ಅಂಜೂರ, ಸಿಪ್ಪೆ ತೆಗೆದ ಬಾದಾಮಿ ಬೀಜಗಳನ್ನು ದಿನಕ್ಕೆರಡು ಬಾರಿ ತಿಂದು ಒಂದು ಗ್ಲಾಸು ಬಿಸಿಹಾಲು ಕುಡಿಯುತ್ತಿದ್ದರೆ ವೀರ್ಯವೃದ್ಧಿ, ವೀರ್ಯಕಣಗಳ ಉತ್ಪತ್ತಿ ಉತ್ತಮವಾಗಿ ಉಂಟಾಗಿ ಆರೋಗ್ಯವಂತ ವೀರ್ಯ ತಯಾರಾಗಿ ಸಂತಾನಾವಕಾಶಗಳು ಹೆಚ್ಚುತ್ತವೆ.

**ಸೊಂಟನೋವಿಗೆ ರಾಮಬಾಣ**

ಒಂದು ಖರ್ಜೂರದ ಕಾಯನ್ನು ಎರಡು ತುಂಡುಗಳಾಗಿ ಒಡೆದು, ಬೀಜಗಳನ್ನು ತೆಗೆದುಬಿಟ್ಟು, ಅದರಲ್ಲಿ ಶೂಲಿ ಹೂವಿನ ಪುಡಿಯನ್ನು ಇರಿಸಿ. ಅದರ ಮೇಲೆ ನೀರು ಬೆರೆಸಿದ ಗೋಧಿ ಹಿಟ್ಟನ್ನು ಮೆತ್ತಿ ಕೆಂಡದ ಮೇಲಿಟ್ಟು ಅವು ಕೆಂಪಾಗುವವರೆಗೆ ಇರಿಸಿ, ತೆಗೆದು, ಬಿಸಿಯಾರಿದ ನಂತರ ಹಿಟ್ಟನ್ನು ತೆಗೆದು ಉಳಿದ ಔಷಧವನ್ನು ಈ ಕಾಯೊಂದಿಗೆ ನುಣ್ಣಗೆ ರುಬ್ಬಿ ಬಟಾಣಿಯಷ್ಟು ಗಾತ್ರದ ಮಾತ್ರೆಗಳನ್ನು ಮಾಡಿ ಆರಿಸಿ ಮುಂಜಾನೆ - ಸಂಜೆ 1-2 ಮಾತ್ರೆಗಳನ್ನು ನುಂಗಿ ಒಂದು ಲೋಟ ಬಿಸಿಹಾಲನ್ನು ಕುಡಿಯುತ್ತಿರಬೇಕು.

**ಗರ್ಭಿಣಿಯರಿಗೆ ಪೋಷಕಾಹಾರದ ಕೊರತೆಯುಂಟಾಗದಿರಲು**

ಖರ್ಜೂರ ತಿರುಳಿನ ಪುಡಿ, ಬಾದಾಮಿ ಬೀಜವನ್ನು ತುಪ್ಪದಲ್ಲಿ ಹುರಿದು ಮಾಡಿದ ಪುಡಿ, ಒಣದ್ರಾಕ್ಷಿ ಒಂದೊಂದನ್ನು 100 ಗ್ರಾಂನಂತೆ ಏಲಕ್ಕಿ ಪುಡಿ 20 ಗ್ರಾಂ ತೆಗೆದುಕೊಂಡು ಮಿಕ್ಸಿಗೆ ಹಾಕಿ, ಚೆನ್ನಾಗಿ ಕಲಸಿಟ್ಟುಕೊಂಡು ದಿನಕ್ಕೆರಡು ಬಾರಿ ಬಾರಿಯೊಂದಕ್ಕೆ ಒಂದು ಟೀ ಸ್ಪೂನ್ ಪುಡಿಯನ್ನು ಮತ್ತು ತಕ್ಕಷ್ಟು ಸ್ಪಟಿಕ ಬೆಲ್ಲದ ಪುಡಿ 100 ಮಿ.ಲೀ. ನಷ್ಟ ಉಗುರು ಬೆಚ್ಚಗಿನ ಹಾಲಲ್ಲಿ ಕಲಸಿ ಸೇವಿಸುತ್ತಿದ್ದರೆ ಗರ್ಭಿಣಿಯರು ಆರೋಗ್ಯವಂತರಾಗಿರುವುದೊಂದೇ ಅಲ್ಲದೇ ಆರೋಗ್ಯಶಾಲಿ ಮಗುವಿಗೆ ಜನ್ಮ ನೀಡುವಂತವರಾಗುತ್ತಾರೆ.



(ಮುಂದುವರೆದ ಭಾಗ)

# ಅನ್ನಮಯ್ಯ ಚರಿತ್ರೆಯ

– ಮೂಲ. ಎಂ. ಶಿವ ಪ್ರವೀಣ್


– ಅನುವಾದ ಬಿ. ಪದ್ಮಜ

ನರಸಯಾಚಾರ್ಯ ಅನ್ನಮಯ್ಯನ ಮೊದಲ ಹೆಂಡತಿಯ ಮಗ. ಎರಡನೆಯ ಹೆಂಡತಿಯಾದ ಅಕ್ಕಲಮ್ಮಳ ಮಗ ತಿರುಮಲಾಚಾರ್ಯ. ಈ ತಿರುಮಲಾಚಾರ್ಯ ಪೆದತಿರುಮಲಚಾರ್ಯನಾಗಿ ಪ್ರಸಿದ್ಧಿಯನ್ನು ಪಡೆದಿದ್ದಾನೆ.

ನರಸಯಾಚಾರ್ಯನಿಗೆ ನಾಂಚಾರಮ್ಮ,ಅನಂತಮ್ಮ ಎಂಬ ಇಬ್ಬರು ಪತ್ನಿಯರು ಇದ್ದರು. ಅವರ ಮಕ್ಕಳು ನಾರಾಯಣ. ಅಪ್ಪಲಾರ್ಯ ಅನ್ನಯಾರ್ಯ. ಪೆದ್ದತಿರುಮಲಾಚಾರ್ಯನ ಹೆಂಡತಿ ತಿರುಮಲಮ್ಮ ಇವರ ಸಂತಾನ ಚಿನತಿರುಮಲಯ್ಯ ಅನ್ನಯ. ಪೆದತಿರುವೇಂಗಳಾನಾಥ,ತಿರುವೇಂಗಳಾನಾಥ (ಚಿನ್ನನ್ನ) ಕೋನೇಟಿ ತಿರುವೇಂಗಳಾನಾಥ, ಅನ್ನಮಯ್ಯನಿಗೆ ಈ ಕುಮಾರರೊಂದಿಗೆ ಒಬ್ಬ ಮಗಳೂ ಇದ್ದಳು ಆಕೆಯ ಹೆಸರು ತಿರುಮಲಾಂಬ. ಈಕೆಯ ಪತಿ ತಿರುಮಲಕೊಂಡಯಾರ್ಯ. ಇವರ ಸಂತಾನ ರೇವಣೂರಿ ವೇಂಕಟಾರ್ಯ. ಈ ರೀತಿ ವೃದ್ಧಿಗೊಂಡ ಅನ್ನಮಯ್ಯ ವಂಶದವರೆಲ್ಲರೂ ತಮ್ಮ ತಮ್ಮ ರಚನೆಗಳಿಂದ ಹಾಡುಗಳಿಂದ ಈ ಕಲಿಯುಗ ಪ್ರತ್ಯಕ್ಷ ದೈವವಾದ ಶ್ರೀ ವೇಂಕಟೇಶ್ವರನ ಸೇವೆಯಲ್ಲಿ ತಮ್ಮ ಜನ್ಮವನ್ನು ಕೃತಾರ್ಥವನ್ನಾಗಿಸಿಕೊಂಡರು. ಈ ಪಂಡಿತ ಕುಟುಂಬದಲ್ಲಿ ಯಾರೂ ಕಡಿಮೆಯಿಲ್ಲ.

## ನಾರಾಯಣ

ಅನ್ನಮಾಚಾರ್ಯನ ಮುತ್ತಾತ ವಿಟ್ಠಲ. ಈತನ ಕುಮಾರನೇ ನಾರಾಯಣ. ವಿಟ್ಠಲ ತನ್ನ ಮಗನಾದ ನಾರಾಯಣನಿಗೆ ತಾನೇ ವಿದ್ಯಾಭ್ಯಾಸವನ್ನು ಆರಂಭಿಸಿದರು. ತಂದೆಯೇ ಮಗನಿಗೆ ಮೊದಲ ಗುರುವಾಗುವುದು ಈ ಕಾಲದಲ್ಲಿ ವಿಚಿತ್ರವೇನೋ ಆದರೆ ನೆನ್ನೆ ಮೊನ್ನೆಯ ತಲೆಮಾರಿನವರೆಗೂ ಅದು ಸಹಜವಾಗಿಯೇ ಇದ್ದ ಸಂಪ್ರದಾಯ. ವಿಠ್ಠಲನೂ ತನ್ನ ಕುಮಾರನಿಗೆ ಓದು ಹೇಳಿ ಕೊಡುವ ಪ್ರಯತ್ನವನ್ನು ಮಾಡಿದ ಆದರೇ ನಾರಾಯಣನು ಏಕೋ ತಂದೆಯ ಬಳಿ ಸರಿಯಾಗಿ ವಿದ್ಯಾಭ್ಯಾಸವನ್ನು ಮಾಡಲಿಲ್ಲ. ಇದನ್ನು ಗಮನಿಸಿದ ತಂದೆ ರಾಜಂಪೇಟೆಗೆ ಹತ್ತಿರದಲ್ಲಿ ಇರುವ ಉಟುಕೂರಿನಲ್ಲಿ ಇದ್ದ ತಮ್ಮ ಬಂಧುಗಳ ಬಳಿ ಬಿಟ್ಟು ಮತ್ತೊಬ್ಬ ಗುರುವಿನ ಬಳಿ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದನು. ಆ ಬಂಧುಗಳು ನಾರಾಯಣನನ್ನು ಕಣ್ಣಿಗೆ ರೆಪ್ಪೆಯಂತೆ ನೋಡಿಕೊಂಡರು ಉಟುಕೂರಿನಲ್ಲಿ ಗುರುಕುಲಕ್ಕೆ ಸೇರಿದ ನಂತರವೂ ನಾರಾಯಣ ಓದು ಮುಂದಕ್ಕೆ ಸಾಗಲಿಲ್ಲ. ಆ ಪಾಠ ಶಾಲೆಯಲ್ಲಿನ ಗುರುಗಳು ನಾರಾಯಣನಿಗೆ ಓದು ಹೇಳಿ ಕೊಡುವುದಕ್ಕೆ ಪ್ರಯತ್ನಿಸಿದರು.



ಗೋದುಕುಚು ಗುರುಂಡುನು ಗೋನ್ನಾಳ್ಳು ತೋಡಮ್

ಜದಿವೆದು ಪಡುಚುಲಚಂದಂಬು ಚೂಪಿ

ಸಾಮಂಬು ಚೇತನೆ ಚದಿವಿಂಚಿ ಚೂಚಿ

ಯಾಮೀಂದ ಗೋನ್ನಿನಾಳ್ಲದ ಅಂಚಿ ಚೂಚಿ

ಮರಿ ಕೊನ್ನಿ ದಿನಮುಳು ಮೈನೊತ್ತಿ ಚೆಪ್ಪಿ

ವೆರ ಪಾರಂ ದರಟುನ ವೇಯಿಂಚಿ ಚೂಚಿ

.........................................

ಮೊನಸಿನ ಕೋದಂಡಮುನ ವೈಲವೇಶಿ

ಕೋಲಗೆರಮೋಸಿ ಗುಂಜಿಳ್ಳು ಬೆಟ್ಟಿ

ಪೈಲಾವು ದೋರುಂಗಾಂಗ ಬಡಿಪೆಟ್ಟು ಪೆಟ್ಟಿ

(ಅನ್ನಮಯ್ಯ ಚರಿತ್ರೆ ದ್ವಿಪದ ಪುಟ, 78, 79)

ಹೊಸ ಶಾಲೆಯಲ್ಲಿ ಸೇರಿದ ಹುಡುಗನನ್ನು ಗುರುಗಳು ಅದನ್ನು ಒಪ್ಪಿಸು, ಇದನ್ನು ಒಪ್ಪಿಸು ಎಂದು ಹೆದರಿಸದೇ, ಆ ವಿದ್ಯಾರ್ಥಿಗೆ ಶಾಲೆಯು ಹೊಂದಿಕೊಳ್ಳುವವರೆಗೂ ಪಕ್ಕದಲ್ಲಿ ಕುಳಿತು ಕೊಳ್ಳುವ ವಿದ್ಯಾರ್ಥಿಗಳನ್ನು ನೋಡಿ ಕಲಿ ಎಂದು ಹೇಳುವುದು ಸಹಜ. ಉಟುಕೂರು ಶಾಲೆಯ ಗುರುಗಳು ನಾರಾಯಣನ ವಿಷಯದಲ್ಲೂ ಹಾಗೆಯೇ ಆಯಿತು. ನಾರಾಯಣನಿಗೆ ಓದಿನ ಬಗೆಗೆ ಆಸಕ್ತಿ ಮೂಡಿಸಲು ಆಟದೊಂದಿಗೆ ಓದುತ್ತಿರುವ ಮಕ್ಕಳನ್ನು ನೋಡಿ ಅವರಂತೆಯೇ ಓದುವುದಕ್ಕೆ ಹೇಳಿದರು.ಹೇಳಿಕೊಟ್ಟ ಪಾಠಗಳನ್ನು ಓದದೇ ಇದ್ದಾಗ ಹೆದರಿಸಿ ನೋಡಿದರು. ಭಯಪಡಿಸಿದರು. ಬೆತ್ತದಿಂದ ಹೊಡೆದರು. ಕೆನ್ನೆಗೆ ಹೊಡೆದರು. ಶರೀರವನ್ನು ಹಿಂಸಿಸಿದರು. ಎಷ್ಟು ರೀತಿಯಲ್ಲಿ ಪ್ರಯತ್ನಿಸಿದರೂ ಆತನಿಗೆ ಓದು ಸರಿಯಾಗಿ ತಲೆಗೆ ಹತ್ತಲಿಲ್ಲ. ಗುರುಗಳು ನೀಡುತ್ತಿದ್ದ ಶಿಕ್ಷೆಯನ್ನು ಎದುರಿಸಿ ಮಾತನಾಡಲಾಗದೇ ತನ್ನನ್ನು ಕಾಪಾಡುವವರಿಲ್ಲದೇ ಕಣ್ಣೀರು ಸುರಿಸುತ್ತಿದ್ದ. ಕೊನೆಗೆ ನಾರಾಯಣನು ತೀವ್ರ ನಿರಾಸೆಗೆ ಗುರಿಯಾಗಿ ಉಟುಕೂರು ಗ್ರಾಮ ದೇವತೆಯಾದ ಚಿಂತಲಮ್ಮ ಗುಡಿಯಲ್ಲಿ ಹುತ್ತವಿದೆಯೆಂದು ಅದರಲ್ಲಿ ನಾಗರಹಾವು ಇದೆ ಎಂದು ಅದರಲ್ಲಿ ಕೈಯನ್ನು ಇರಿಸಿ ಪ್ರಾಣ ತ್ಯಾಗ ಮಾಡುತ್ತೇನೆಂದು ಮನಸ್ಸಿನಲ್ಲೇ ನಿರ್ಧರಿಸಿಕೊಂಡ ಆವೇಶದಿಂದ ಅಂದುಕೊಂಡಿದ್ದೇ ತಡ ಚಿಂತಲಮ್ಮ ಗುಡಿಯನ್ನು ಪ್ರವೇಶಿಸಿ ಹುತ್ತದಲ್ಲಿ ಕೈಯನ್ನು ಇರಿಸಿದ ಎಲ್ಲವನ್ನೂ ಬಲ್ಲ ಆ ತಾಯಿಯು ಬಾಲಕನ ಅವಸ್ಥೆಯನ್ನು ನೋಡಿ. ಕರುಣೆ ಉಕ್ಕಿ ಬಂತು ಮಾನವ ರೂಪದಲ್ಲಿ ಪ್ರತ್ಯಕ್ಷಳಾಗಿ ಆತನನ್ನು ತಡೆದಳು. ಹಾವು ಕಚ್ಚಿದ್ದರೇ ತಾಳ್ಳಪಾಕ ವಂಶದವರು ಅಲ್ಲಿಗೆ ನಿಂತು ಹೋಗಿದ್ದರೇ ಇಂತಹಾ ಸಂಗೀತ ಯಜ್ಞ ನಡೆಯುತ್ತಿತ್ತೇ? ಸುಪ್ರಭಾತ ಸೇವೆಯಿಂದ ಏಕಾಂತಸೇವೆಯವರೆಗೂ ಹಾಡಿನ ಸೇವೆ ಶ್ರೀನಿವಾಸನಿಗೆ ದಕ್ಕುತ್ತಿತ್ತೇ ? 32 ಸಾವಿರ ಕೀರ್ತನೆಗಳು ನಮಗೆ ದೊರೆಯುತ್ತಿತ್ತೇ? ಸುಮಾರು ಐದು ತಲೆಮಾರಿನವರೆಗೂ ಸಾಹಿತ್ಯ ವಾರಸತೆ ನಿಲ್ಲುತ್ತಿತ್ತೆ? ಅದಕ್ಕೇ ಭೂತ ಭವಿಷ್ಯ, ವರ್ತಮಾನಗಳನ್ನು ತಿಳಿದ ತಾಯಿ ಚಿಂತಲಮ್ಮ ಆ ನಾರಾಯಣನನ್ನು ತಡೆದಳು. ಅವನ ಮನಸ್ಸಿನ ಆಂತರ್ಯವನ್ನು ತಿಳಿದ ತಾಯಿ ಮಗೂ! ಚಿಂತಿಸಬೇಡ.ಎಲ್ಲ ವಿದ್ಯೆಗಳಿಗೂ ಒಡೆಯಳಾದ ಸರಸ್ವತೀ ದೇವಿಯ ಮಾವನಾದ ಕೇಶವ ನಾಮವನ್ನು ಧರಿಸಿ ತಾಳಪಾಕದಲ್ಲಿ ನೆಲೆಸಿದ್ದಾನೆ. ತಾಮರ ಸಾಪ್ತನಯನನಾದ ಆ ಶ್ರೀ ಹರಿ ಆಲಯದ ಸುತ್ತಲೂ ಪ್ರದಕ್ಷಿಣೆ ಮಾಡಿ ಆತನನ್ನು ಭಕ್ತಿಯಿಂದ ಬೇಡಿಕೋ ನಿನ್ನ ಮನೋಭೀಷ್ಟಗಳು ಸಿದ್ಧಿಸುತ್ತವೆಂದು ಹೇಳಿದ್ದೇ ಅಲ್ಲದೇ.

ಆದಿಯನುಂಗಾಕ ಮೂಂಡವ ತರಂಬುನನು

ವದಲನಿ ಕೀರ್ತಿ ಮೀ ವಂಶಂಬು ನಂದು

ಪರಮ ಭಾಗವತುಂಡು ಪ್ರಭಾವಿಂಚು ಶೌರಿ

ವರಮುನ ಜಗದೇಕ ವಲ್ಲಭುಂಡಗುಚು

(ಅನ್ನಮಯ್ಯ ಚರಿತ್ರೆ ದ್ವಿಪದ ಪ್ರೋಟ 86,87)

ನಿನ್ನ ವಂಶದಲ್ಲಿ ನಿನ್ನ ಮೂರನೆಯ ತಲೆಮಾರಿನಲ್ಲಿ ಶಾಶ್ವತ ಯಶಸ್ವಿ ಮಹಾನ್ ಭಕ್ತ ಲೋಕಕ್ಕೆಲ್ಲಾ ಪ್ರೀತಿಪಾತ್ರನಾದವನು. ಆ ವೈಕುಂಠವಾಸನ ವಾರ ಪ್ರಭಾವದಿಂದ ಜನಿಸುತ್ತಾನೆಂದು ವರವನ್ನು ನೀಡಿ ಅಂತರ್ಧಾನಳಾದಳು.

ಆ ಕೂಡಲೇ ನಾರಾಯಣನು ತಾಳ್ಳಪಾಕ ಗ್ರಾಮಕ್ಕೆ ಹೋಗಿ ಕೋಟಿ ಸೂರ್ಯ ಕಾಂತಿಯ ತೇಜಸ್ಸಿನಿಂದ ಬೆಳಗುತ್ತಿದ್ದ ಆ ಕೇಶವ ಸ್ವಾಮಿಯನ್ನು ದರ್ಶನ ಮಾಡಿದ ಆ ಸ್ವಾಮಿಯ ಆಲಯದ ಪ್ರದಕ್ಷಿಣೆಯನ್ನು ಮಾಡಿ,ತನಗೆ ವಿದ್ಯೆಯನ್ನು ಪ್ರಸಾದಿಸಬೇಕೆಂದು, ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ ಎನ್ನುತ್ತಾ ಶರಣು ಬೇಡಿದ. ಭಕ್ತರು ಕೇಳಿಕೊಳ್ಳುವುದೇ ತಡ ಕೂಡಲೇ ಕೇಳಿದಷ್ಟೂ ವರಗಳನ್ನು ಕೊಡುವಂತಹಾ ಆ ಶ್ರೀ ಹರಿಯು ತನ ವರಪ್ರಭಾವದಿಂದ ಜನಿಸಿದ ಕಾರಣ ಜನ್ಮರನ್ನು ಧನ್ಯರನ್ನಾಗಿಸದೇ ಇರುತ್ತಾರೆಯೇ? ಕೂಡಲೇ ತಥಾಸ್ತು ಎಂದು ವರವನ್ನು ನೀಡಿದ ಇದರಿಂದಾಗಿ ಆ ವಿದ್ಯೆಗೆ ತಾಯಿಯಾದ ಹಾಠಕಾಗರ್ಭರಾಣೀ, ಕೈಟಭಾದೈತ್ಯ ಮರ್ಧನನ ಸೊಸೆಯಾದ ಸರಸ್ವತೀದೇವಿ ನಾರಾಯಣನ ಜಿಹ್ವೆಯ ಮೇಲೆ ನೆಲೆಸಿದಳು. ಕೇವಲ ನಾರಾಯಣನನ್ನೇ ಅಲ್ಲದೆ ತಾಳ್ಳಪಾಕ ವಂಶವನ್ನೇ ಕಟಾಕ್ಷಿಸಿದಳು. ಕೇಶವಸ್ವಾಮಿಯ ಕರುಣೆಯಿಂದ ಆ ಸರಸ್ವತೀ ದೇವಿಯ ಕೃಪೆಯಿಂದ ನಾರಾಯಣನಿಗೆ ವಿದ್ಯೆ ತಲೆಗೆ ಹತ್ತಿತು. ಅಂದಿನಿಂದ ತನಗೆ ಗುರುವು ಕಲಿಸುತ್ತಿದ್ದ ಪಾಠವನ್ನು ನಿಷ್ಠೆಯಿಂದ ಕಲಿಯುತ್ತಿದ್ದ. ಕ್ರಮ, ಶಿಖಾ,ಜಟ ಪಾಠಗಳನ್ನು ಎಂತಹಾ ಅಡೆತಡೆಯಿಲ್ಲದೇ ಕಲಿತು ಗುರುಗಳಿಗೆ ಒಪ್ಪಿಸುತ್ತಿದ್ದ. ತನ್ನ ಸಹಪಾಠಿಗಳು, ಗುರುಗಳು, ಶಾಸ್ತ್ರವನ್ನು ತಿಳಿಸಿದವರು ಎಲ್ಲರೂ ಆಶ್ಚರ್ಯಚಕಿತರಾದರು. ಆ ರೀತಿ ವಿದ್ಯಾರ್ಥಿ ಜೀವನವನ್ನು ಮುಗಿಸಿ ಎಲ್ಲರ ಮೆಚ್ಚುಗೆಗೆ ಪಾತ್ರನಾದನು.

# ಪದಬಂಧ - 6

**ಎಡದಿಂದ ಬಲಕ್ಕೆ**

01.ಶ್ರೀ ವೆಂಕಟೇಶ್ವರ ಸ್ತೋತ್ರ 9 ನೇ ಶ್ಲೋಕ 3 ನೇ ಸಾಲು ...(8)

02.ಶ್ರೀ ಪೆರಿಯಾಳ್ವಾರ್ ತಮ್ಮ ತಿರುಮೊಷಿಯಲ್ಲಿ 1-8 ರ ಪ್ರತಿ ಪಾಶುರದಲ್ಲಿ ಕೊನೆ ಪಂಕ್ತಿಯಲ್ಲಿ ದೇವರನ್ನು ಹೀಗೆ ಸ್ಮರಿಸುತ್ತಾರೆ. ...(4) 'ಅ' ಯಿಂದ ಆರಂಭ

03.ಪಾರ್ಥಸಾರಥಿ ನೆಲೆಸಿರುವ ಚೆನ್ನೈನ ದಿವ್ಯದೇಶ ...(6)

**ಬಲದಿಂದ ಎಡಕ್ಕೆ**

04.ದೇವರು ಇಷ್ಟಪಟ್ಟು ನೆಲೆಸಿರುವ ಕ್ಷೇತ್ರಗಳು ...(6)

05.ಪಿಳ್ಳೈ ಲೋಕಾಚಾರ್ಯರ 'ತತ್ವ' ದಿಂದಾರಂಭದ ಅಷ್ಟಾದಶ ರಹಸ್ಯಗಳಲ್ಲೊಂದು ಗ್ರಂಥ ...(6)

**ಮೇಲಿಂದ ಕೆಳಕ್ಕೆ**

6.ತಿರುಮಂಗೈ ಆಳ್ವಾರರ ಪೆರಿಯ ತಿರುಮೊಷಿ 2-5 ರ ಪ್ರತಿ ಪಾಶುರದಲ್ಲಿನ ಕೊನೆ ಪದ 'ಕಡಲ್ ನಿಂದಾರಂಭ ...(5)

7. ಉದಕ ಶಾಂತಿಮಂತ್ರ 'ಆ' ಯಿಂದಾರಂಭ ...(4)

8.ಪೆರಿಯ ತಿರುಮೊಷಿ 1-5 ರ ಅಂತ್ಯದ ಸಾಲಿನ ಮೊದಲ ಪದ (ಪ್ರತಿ ಪಾಶುರದಲ್ಲಿ ) ...(3)

9.ತಿರುಮಂಗೈ ಆಳ್ವಾರರು ತಮ್ಮ ಪೆರಿಯ ತಿರುಮೊಷಿ 1-7 ರಲ್ಲಿ ಆಂಧ್ರದ ಅಹೋಬಿಲದ ನರಸಿಂಹರನ್ನು ತಮಿಳ ನಲ್ಲಿ ಹೀಗೆ ಕರೆದಿದ್ದಾರೆ. 'ಶಿಂಗ' ದಿಂದಾರಂಭ ...(6)

| ಕ್ರ.ಸಂ | 1 | 2 | 3 | 4 5 | 6 | 7 | 8 | |
|---|---|---|---|---|---|---|---|---|
| 1 | | | 6 | | | | | |
| 2 | | | | 2 7 | | | | 9 |
| 3 | | | | | 8 | | | |
| 4 | | | | | | | | |
| 5 | | 11 | | | | 12 | | |
| 6 | 3 10 | | | | | | | |
| 7 | | | | | | 4 | 13 | |
| 8 | | | | | | | 5 | |

**- ಪಿ.ಜಿ. ಶ್ರೀನಿವಾಸನ್**

- 42 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.

**ಕೆಳಗಿನಿಂದ ಮೇಲಕ್ಕೆ**

10.ಶ್ರೀನಿವಾಸರು ನೆಲೆಸಿರುವ ಸ್ಥಳವನ್ನು ತಮಿಳಿನಲ್ಲಿ ಹೀಗೆ ಕರೆಯುತ್ತಾರೆ. 'ತಿರು' ದಿಂದಾರಂಭ ...(5)

11.ವಸಿಷ್ಠ ಮುನಿಗಳ ಪೌತ್ರ (ಮೊಮ್ಮೊಗ ) ರು 'ಪ' ದಿಂದಾರಂಭ ...(4)

12) ಹೋಮಕ್ಕೆ ತುಪ್ಪ 'ಹ' ದಿಂದಾರಂಭ ...(3)

13) ದೇಶಿಕಾಚಾರ್ಯರ 'ದ್ವಯ' ದಿಂದಾರಂಭದ ಪ್ರಬಂಧ ...(5)



# ಶ್ರೀ ಆಂಜನೇಯ ಅಷ್ಟೋತ್ತರ ಶತನಾಮಾವಳಿ

## ಶ್ರೀಆಂಜನೇಯ ಅಷ್ಟೋತ್ತರ ಶತನಾಮಾವಳಿ

ಓಂ ಆಂಜನೇಯಾಯ ನಮಃ
ಓಂ ಮಹಾವೀರಾಯ ನಮಃ
ಓಂ ಹನೂಮತೇ ನಮಃ
ಓಂ ಮಾರುತಾತ್ಮಜಾಯ ನಮಃ
ಓಂ ತತ್ತ್ವಜ್ಞಾನಪ್ರದಾಯ ನಮಃ
ಓಂ ಸೀತಾದೇವೀಮುದ್ರಾಪ್ರದಾಯಕಾಯ ನಮಃ
ಓಂ ಅಶೋಕವನಿಕಾಚ್ಛೇತ್ರೇ ನಮಃ
ಓಂ ಸರ್ವಮಾಯಾವಿಭಂಜನಾಯ ನಮಃ
ಓಂ ಸರ್ವಬನ್ಧವಿಮೋಕ್ತ್ರೇತ್ರೇ ನಮಃ
ಓಂ ರಕ್ಷೋವಿಧ್ವಂಸಕಾರಕಾಯ ನಮಃ **(10)**

ಓಂ ಪರವಿದ್ಯಾಪರಿಹರ್ತ್ರೇ ನಮಃ
ಓಂ ಪರಶೌರ್ಯವಿನಾಶನಾಯ ನಮಃ
ಓಂ ಪರಮನ್ತ್ರನಿರಾಕರ್ತ್ರೇ ನಮಃ
ಓಂ ಪರಯಂತ್ರಪ್ರಭೇದಕಾಯ ನಮಃ
ಓಂ ಸರ್ವಗ್ರಹವಿನಾಶಕಾಯ ನಮಃ
ಓಂ ಭೀಮಸೇನ ಸಹಾಯ್ಯಕೃತೆ ನಮಃ
ಓಂ ಸರ್ವದುಃಖಹರಾಯ ನಮಃ
ಓಂ ಸರ್ವಲೋಕಚಾರಿಣೇ ನಮಃ
ಓಂ ಮನೋಜವಾಯ ನಮಃ
ಓಂ ಪಾರಿಜಾತದ್ರುಮೂಲಸ್ಥಾಯ ನಮಃ **(20)**

ಓಂ ಸರ್ವಮಂತ್ರಸ್ವರೂಪವತೇ ನಮಃ
ಓಂ ಸರ್ವತಂತ್ರಸ್ವರೂಪಿಣೇ ನಮಃ
ಓಂ ಸರ್ವಯನ್ತ್ರಾತ್ಮಿಕಾಯ ನಮಃ
ಓಂ ಕಪೀಶ್ವರಾಯ ನಮಃ
ಓಂ ಮಹಾಕಾಯಾಯ ನಮಃ
ಓಂ ಸರ್ವರೋಗಹರಾಯ ನಮಃ
ಓಂ ಪ್ರಭವೇ ನಮಃ
ಓಂ ಬಲಸಿದ್ಧಿಕರಾಯ ನಮಃ
ಓಂ ಸರ್ವವಿದ್ಯಾಸಮ್ಪತ್ಪ್ರದಾಯಕಾಯ ನಮಃ
ಓಂ ಕಪಿಸೇನಾನಾಯಕಾಯ ನಮಃ **(30)**

ಓಂ ಭವಿಷ್ಯಚ್ಚತುರಾನನಾಯ ನಮಃ
ಓಂ ಕುಮಾರಬ್ರಹ್ಮಚಾರಿಣೇ ನಮಃ
ಓಂ ರತ್ನಕುಂಡಲದೀಪ್ತಿಮತೇ ನಮಃ
ಓಂ ಚಂಚಲದ್ವಾಲಸನ್ನದ್ಧಲಂಬಮಾನ ಶಿಖೋಜ್ಜ್ವಲಾಯ ನಮಃ
ಓಂ ಗನ್ಧರ್ವವಿದ್ಯಾತತ್ತ್ವಜ್ಞಾಯ ನಮಃ
ಓಂ ಮಹಾಬಲಪರಾಕ್ರಮಾಯ ನಮಃ
ಓಂ ಕಾರಾಗೃಹವಿಮೋಕ್ತ್ರೇ ನಮಃ
ಓಂ ಶೃಂಖಲಾಬನ್ಧಮೋಚಕಾಯ ನಮಃ
ಓಂ ಸಾಗರೋತ್ತಾರಕಾಯ ನಮಃ
ಓಂ ಪ್ರಾಜ್ಞಾಯ ನಮಃ **(40)**

ಓಂ ರಾಮದೂತಾಯ ನಮಃ
ಓಂ ಪ್ರತಾಪವತೇ ನಮಃ
ಓಂ ವಾನರಾಯ ನಮಃ
ಓಂ ಕೇಸರೀಸೂನವೇ ನಮಃ
ಓಂ ಸೀತಾಶೋಕನಿವಾರಣಾಯ ನಮಃ
ಓಂ ಅಂಜನಾಗರ್ಭಸಂಭೂತಾಯ ನಮಃ
ಓಂ ಬಾಲಾರ್ಕಸದೃಶಾನನಾಯ ನಮಃ
ಓಂ ವಿಭೀಷಣಪ್ರಿಯಕರಾಯ ನಮಃ
ಓಂ ದಶಗ್ರೀವಕುಲಾಂತಕಾಯ ನಮಃ
ಓಂ ಲಕ್ಷ್ಮಣ ಪ್ರಾಣದಾತ್ರೇ ನಮಃ **(50)**

ಓಂ ವಜ್ರಕಾಯಾಯ ನಮಃ
ಓಂ ಮಹಾದ್ಯುತಯೇ ನಮಃ
ಓಂ ಚಿರಂಜೀವಿನೇ ನಮಃ
ಓಂ ರಾಮಭಕ್ತಾಯ ನಮಃ
ಓಂ ದೈತ್ಯಕಾರ್ಯವಿಘಾತಕಾಯ ನಮಃ
ಓಂ ಅಕ್ಷಹನ್ತ್ರೇ ನಮಃ
ಓಂ ಕಾಂಚನಾಭಾಯ ನಮಃ
ಓಂ ಪಂಚವಕ್ತ್ರಾಯ ನಮಃ
ಓಂ ಮಹಾತಪಸೇ ನಮಃ
ಓಂ ಲಂಕಿಣೀಭಂಜನಾಯ ನಮಃ **(60)**

ಓಂ ಶ್ರೀಮತೇ ನಮಃ
ಓಂ ಸಿಂಹಿಕಾಪ್ರಾಣಭಂಜನಾಯ ನಮಃ
ಓಂ ಗನ್ಧಮಾದನಶೈಲಸ್ಥಾಯ ನಮಃ
ಓಂ ಲಂಕಾಪುರವಿದಾಹಕಾಯ ನಮಃ
ಓಂ ಸುಗ್ರೀವಸಚಿವಾಯ ನಮಃ
ಓಂ ಧೀರಾಯ ನಮಃ
ಓಂ ಶೂರಾಯ ನಮಃ
ಓಂ ದೈತ್ಯಕುಲಾನ್ತಕಾಯ ನಮಃ
ಓಂ ಸುರಾರ್ಚಿತಾಯ ನಮಃ
ಓಂ ಮಹಾತೇಜಸೇ ನಮಃ (70)

ಓಂ ರಾಮಚೂಡಾಮಣಿಪ್ರದಾಯ ನಮಃ
ಓಂ ಕಾಮರೂಪಿಣೇ ನಮಃ
ಓಂ ಪಿಂಗಲಾಕ್ಷಾಯ ನಮಃ
ಓಂ ವರ್ಧಿಮೈನಾಕಪೂಜಿತಾಯ ನಮಃ
ಓಂ ಕಬಳೀಕೃತಮಾರ್ತಾಂಡಮಂಡಲಾಯ ನಮಃ
ಓಂ ವಿಜಿತೇನ್ದ್ರಿಯಾಯ ನಮಃ
ಓಂ ರಾಮಸುಗ್ರೀವಸಂಧಾತ್ರೇ ನಮಃ
ಓಂ ಮಹಿರಾವಣಮರ್ದನಾಯ ನಮಃ
ಓಂ ಸ್ಫಟಿಕಾಭಾಯ ನಮಃ
ಓಂ ವಾಗಧೀಶಾಯ ನಮಃ (80)

ಓಂ ನವವ್ಯಾಕೃತಿಪಂಡಿತಾಯ ನಮಃ
ಓಂ ಚತುರ್ಬಾಹವೇ ನಮಃ
ಓಂ ದೀನಬನ್ಧವೇ ನಮಃ
ಓಂ ಮಹಾತ್ಮನೇ ನಮಃ
ಓಂ ಭಕ್ತವತ್ಸಲಾಯ ನಮಃ
ಓಂ ಸಂಜೀವನನಗಾಹರ್ತ್ರೇ ನಮಃ
ಓಂ ಶುಚಯೇ ನಮಃ
ಓಂ ವಾಗ್ಮಿನೇ ನಮಃ
ಓಂ ಧೃತವ್ರತಾಯ ನಮಃ
ಓಂ ಕಾಲನೇಮಿಪ್ರಮಥನಾಯ ನಮಃ (90)

ಓಂ ಹರಿಮರ್ಕಟ ಮರ್ಕಟಾಯ ನಮಃ
ಓಂ ದಾನ್ತಾಯ ನಮಃ
ಓಂ ಶಾನ್ತಾಯ ನಮಃ
ಓಂ ಪ್ರಸನ್ನಾತ್ಮನೇ ನಮಃ
ಓಂ ದಶಕಂಠಮದಾಪಹಾಯ ನಮಃ
ಓಂ ಯೋಗಿನೇ ನಮಃ
ಓಂ ರಾಮಕಥಾಲೋಲಾಯ ನಮಃ
ಓಂ ಸೀತಾನ್ವೇಷಣಪಂಡಿತಾಯ ನಮಃ
ಓಂ ವಜ್ರದಂಷ್ಟ್ರಾಯ ನಮಃ
ಓಂ ವಜ್ರನಖಾಯ ನಮಃ (100)

ಓಂ ರುದ್ರವೀರ್ಯಸಮುದ್ಭವಾಯ ನಮಃ
ಓಂ ಇನ್ದ್ರಜಿತ್ಪ್ರಹಿತಾಮೋಘ ಬ್ರಹ್ಮಾಸ್ತ್ರವಿನಿವರ್ತಕಾಯ ನಮಃ
ಓಂ ಪಾರ್ಥಧ್ವಜಾಗ್ರಸಂವಾಸಿನೇ ನಮಃ
ಓಂ ಶರಪಂಜರಭೇದಕಾಯ ನಮಃ
ಓಂ ದಶಬಾಹವೇ ನಮಃ
ಓಂ ಲೋಕಪೂಜ್ಯಾಯ ನಮಃ
ಓಂ ಜಾಂಬವತಿತ್ಪ್ರಿವರ್ಧನಾಯ ನಮಃ
ಓಂ ಸೀತಾಸಮೇತ ಶ್ರೀ ರಾಮಪಾದ
ಸೇವಾದುರಂಧರಾಯ ನಮಃ (108)





# ಕರೋನ ವ್ಯಾಧಿಯಿಂದ ಮನುಕುಲವನ್ನು ಸಂರಕ್ಷಿಸುವ ಮಹಾದಾಶೆಯಂತೆ ತಿ.ತಿ.ದೇ. ನಿರ್ವಹಿಸಿದ ಶ್ರೀ ಶ್ರೀನಿವಾಸಶಾಂತ್ಯೋತ್ಸವ ಸಹಿತ ಧನ್ವಂತರಿ ಮಹಾಯಾಗ, ಶ್ರೀನಿವಾಸ ವೇದಮಂತ್ರ ಆರೋಗ್ಯಜಪಯಜ್ಞ ದೃಶ್ಯಗಳು









# ನಮಾಮಿ ನರಸಿಂಹ

-ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
9739369621




ವೈಶಾಖ ಮಾಸದಲ್ಲಿ ಅಕ್ಷಯತೃತೀಯ ನಂತರ ಬರುವ ಒಂದು ಪ್ರಮುಖ ಪರ್ವ ನರಸಿಂಹ ಜಯಂತಿ. ಪುರಾಣ ಪ್ರಸಿದ್ಧವಾದ ದಶಾವತಾರಗಳಲ್ಲಿ ಶ್ರೀ ನರಸಿಂಹ ಅವತಾರವು ನಾಲ್ಕನೆಯದು. ವೈಶಾಖ ಶುದ್ಧ ಚತುರ್ದಶಿಯಂದು ಸಮಸ್ತ ದೇವತೆಗಳ ಕೋರಿಕೆಯಂತೆ ದುಷ್ಟ ಹಿರಣ್ಯಕಶಿಪುವಿನ ಸಂಹರಿಸಲು ಸರ್ವೋತ್ತಮನಾದ ಶ್ರೀ ಮಹಾವಿಷ್ಣುವು ತಾಳಿದ ಅವತಾರವಿದು.

ನೃಸಿಂಹಾವತಾರದಲ್ಲಿ ಉಳಿದ ಎಲ್ಲಾ ಅವತಾರಗಳಂತೆ ದುಷ್ಟ ಶಿಕ್ಷಣ ಶಿಷ್ಟ ಪರಿಪಾಲನೆಗಳ ಜೊತೆಗೆ ಭಗವಂತನು ಅಸಾಧಾರಣವಾದ ತನ್ನ ನೈಜ ವಿಭೂತಿಯನ್ನು ಭಗವತ್ ತತ್ತ್ವವನ್ನೂ ಸ್ಪಷ್ಟವಾಗಿ ಪ್ರಕಟಪಡಿಸಿದ್ದಾನೆ.

### ಹಿರಣ್ಯಕಶಿಪು ಸಾಮಾನ್ಯ ವ್ಯಕ್ತಿಯಲ್ಲ

ವೈಕುಂಠ ವಾಸಿಯೇ ಆಗಿದ್ದು ಶಾಪಗ್ರಸ್ತನಾಗಿ ಭೂಮಿಯಲ್ಲಿ ಹುಟ್ಟಿ ಕಠಿಣ ತಪಸ್ಸಿನಿಂದ ಬ್ರಹ್ಮನಿಂದ ವರ ಪಡೆದು, ಮೂರು ಲೋಕಗಳನ್ನು ಗೆದ್ದ ಜಗತ್ ವಿಜೇತ. ಜನರು ಹೇಳುವ ದೇವರು ಎಂಬುದು ಇರುವುದಾದರೇ ಅದು ನಾನೇ ಅಲ್ಲದೆ ಬೇರೆ ಯಾರು ಇಲ್ಲ ಎಂಬ ದುರಾಗ್ರಹಿ ಇಂಥ ಹವನಿಗೆ ಮಗ ಭಕ್ತಪ್ರಹ್ಲಾದ ಮಾತಿನಲ್ಲಿ ನಂಬಿಕೆ ಬರಲಿಲ್ಲ ಅವನಿಗೆ ಬೇಕು ಪ್ರತ್ಯಕ್ಷ ಪ್ರತೀತಿ. ನಿನ್ನ ವಿಷ್ಣುವು ಎಲ್ಲಾ ಕಡೆ ಇರುವುದಾದರೇ ಈ ಕಂಭದಲ್ಲಿದ್ದಾನೋ? ಆಗ ನಿರ್ಭಯನಾದ ಶ್ರದ್ಧಾವಂತನಾದ ಪ್ರಹ್ಲಾದನು ಕೊಟ್ಟ ಉತ್ತರವೂ ಅಷ್ಟೇ ಸ್ಪಷ್ಟ ಹಾಗೂ ನಿಸ್ಸಂದಿಗ್ಧವಾಗಿತ್ತು. ಎಲ್ಲೆಲ್ಲೂ ಇರುವವನು ಈ ಕಂಭದಲ್ಲಿ ಮಾತ್ರ ಏಕಿಲ್ಲ ಕಂಭದಲ್ಲಿ ಇಲ್ಲ ಎಂದರೆ ಭಗವಂತನ ಸರ್ವವ್ಯಾಪಕತ್ವಕ್ಕೆ ಅಡ್ಡಿ ಬರುವುದಿಲ್ಲವೇ? ಕಂಭದಲ್ಲೂ ಬಿಂಬದಲ್ಲೂ ಎಲ್ಲೆಡೆಯೂ ಇದ್ದಾನೆ, ಎಂದಾಗ ಹಿರಣ್ಯಕಶಿಪು ಕಂಭವನ್ನು ಝಡಿಸಿದಾಗ ಆ ಜಡ ಕಂಭದಲ್ಲಿ ಚಿನ್ಮಯನಾದ ನರಸಿಂಹ ರೂಪದಿಂದ ಭಗವಂತನು ಪ್ರಕಟಗೊಂಡು ದೈತ್ಯ ಹಿರಣ್ಯಕಶಿಪುವನ್ನು ಸಂಹಾರಗೈಯುತ್ತಾನೆ.

ನರಸಿಂಹನ ಮೂರ್ತಿಯಲ್ಲಿ ಮನುಷ್ಯದೇಹ ಮತ್ತು ಸಿಂಹದ ಮುಖವನ್ನು ನೋಡುತ್ತೇವೆ. ಜೀವವಿಕಾಸವಾದ ಅನುಗುಣವಾಗಿ ದಶಾವತಾರಗಳಿಗೆ ವ್ಯಾಖ್ಯಾನ ಮಾಡುತ್ತ, ಕೇವಲ ಜಲಚರ ಪ್ರಾಣಿಯಾಗಿ ಮೀನು ಮತ್ಸ್ಯಾವತಾರದಿಂದ ವಿಕಾಶದೆಶೆ ಪ್ರಾರಂಭ. ಜಲಸ್ಥಳಗಳೆರಡರಲ್ಲೂ ಸಂಚರಿಸುತ್ತ ಮುಂದಿನ ಘಟ್ಟ ಆಮೆ ಕೂರ್ಮಾವತಾರದ ಭಾವನೆಗೆ ಕಾರಣವಾಯ್ತು. ಅದಕ್ಕಿಂತಲೂ ಹೆಚ್ಚು ವಿಕಾಸವುಳ್ಳದಾಗಿರುವ ಘೋರ ಪರಾಕ್ರಮವುಳ್ಳ ಹಂದಿ ವರಾಹವತಾರವು ಅನಂತರ ಬರುವುದು. ಸಿಂಹಮುಖ ನರದೇಹದ ನರಸಿಂಹ ಅವತಾರದ ನಂತರ ಕೇವಲ ಮನುಷ್ಯ ರೂಪದ ವಾಮನಾವತಾರವು ಅದಕ್ಕಿಂತಲೂ ಹೆಚ್ಚಿನ ವಿಕಾಸವನ್ನು ತೋರಿಸುತ್ತದೆ ಹೀಗೆಯೇ ಉತ್ತರೋತ್ತರ ವಿಕಾಸವಾಗಿ ಪರಶುರಾಮ, ಶ್ರೀರಾಮ, ಶ್ರೀಕೃಷ್ಣ ಮತ್ತು ಕೊನೆಗೆ ವಿಕಾಸದ ಚರಮ ಸೀಮೆಯಾದ ಬುದ್ಧನ ಅವತಾರ.

ಇದರ ಹಿನ್ನೆಲೆಯಲ್ಲಿ ಚಿಕಿತ್ಸಕರಿಗೆ ಅನೇಕ ಪ್ರಶ್ನೆಗಳು ಉದ್ಭವಿಸುವುದು ಸಹಜ. ಆದರೆ ಚಿಕಿತ್ಸಕರ ಎಲ್ಲಾ ಪ್ರಶ್ನೆಗಳಿಗೂ



ಪುರಾಣಾಂತರಗಳಲ್ಲಿ ಉತ್ತರಗಳನ್ನು ಋಷಿಗಳು ಮೊದಲೇ ಕೊಟ್ಟಿರುತ್ತಾರೆ. ಇವೆಲ್ಲ ಪ್ರಶ್ನೆಗಳಿಗೂ ಉತ್ತರವು ಹಿರಿಣ್ಯಕಶಿಪು ಬ್ರಹ್ಮನ ಬಳಿ ಕೇಳಿದ ವರದಲ್ಲೆ ಅಡಕವಾಗಿದೆ. ಬ್ರಹ್ಮದೇವಾ! ನನಗೆ ಕೆಳಗಾಗಲಿ ಮೇಲಾಗಲಿ ಸಾವು ಬರಬಾರದು, ಹಗಲಾಗಲೀ ರಾತ್ರಿಯಾಗಲೀ ನಾನು ಸಾಯಬಾರದು ಮನುಷ್ಯ ರಿಂದಾಗಲೀ ಪಶುಗಳಿಂದಾಗಲಿ ಮೃತ್ಯು ಬರಬಾರದು, ಅಸ್ತ್ರ ದಿಂದಾಗಲೀ ಶಸ್ತ್ರದಿಂದಾಗಲಿ ನಾನು ಅಜೇಯನಾಗಿರಬೇಕು. ಒಳಗಾಗಲೀ - ಹೊರಗಾಗಲಿ ಸಾವು ಬರಕೂಡದು ಹೆಚ್ಚರಿಕೆ ಬ್ರಹ್ಮಾ ನೀನು ಸೃಷ್ಟಿಸಿದ ಯಾವುದರಿಂದಲೂ ನನಗೆ ಮರಣ ಬರಬಾರದು. ಅದರಂತೆ ಈ ವರದಿಂದಾಗಿ ಭಗವಂತನು ಮನುಷ್ಯನೂ ಅಲ್ಲ - ಪಶುವೂ ಅಲ್ಲದ ನರಸಿಂಹನಾದ ಕೆಳಗೂ ಅಲ್ಲಮೇಲೂ ಅಲ್ಲದೆ ತೊಡೆಯ ಮೇಲೆ ಒಳಗೂ ಅಲ್ಲ - ಹೊರಗೂ ಅಲ್ಲದ ಹೊಸ್ತಿಲಲ್ಲಿ,ರಾತ್ರಿಯೂ ಅಲ್ಲ - ಹಗಲೂ ಅಲ್ಲ ಸಂಧ್ಯಾ ಕಾಲದಲ್ಲಿ ಶಸ್ತ್ರವೂ ಅಲ್ಲ ಅಸ್ತ್ರವೂ ಅಲ್ಲದ ನಖ (ಉಗುರು)ಗಳಿಂದ ಬ್ರಹ್ಮನನ್ನೇ ಸೃಷ್ಟಿಸಿದ ಭಗವಂತನು ಸ್ವ ಇಚ್ಛೆಯಿಂದ ಸಂ ಹರಿಸುತ್ತಾನೆ.

ರಾಜಕಾರ್ಯದಲ್ಲಿ ವ್ಯಸ್ತನಾದ ಹಿರಣ್ಯಕಶಿಪುವಿಗೆ ಮಗನ ಭೇಟಿಗೆ ಸಮಯ ಸಿಕ್ಕಿದ್ದೇ ಸಂಧ್ಯಾಕಾಲದಲ್ಲಿಯೇ ಆ ರಾಜಸಭೆಯ ಇದಿರಿಗಿದ್ದುದ್ದು ಕಂಭಗಳೇ ಬೇರೇನೂ ಇರಲಿಲ್ಲ ಇದಿರಿಗಿರುವ ಮರದಿಂದಲೇ ಪ್ರಕಟಗೊಳ್ಳುತ್ತಿದ ಅವನಿಗೆ ಪ್ರಕಟವಾಗಲು ಕಂಭವೇ ಬೇಕೆಂಬುದಿಲ್ಲ ಅಣುರೇಣು ತೃಣಕಾಷ್ಟಗಳೆಲ್ಲದರಲ್ಲಿ ತುಂಬಿದ ಅವನಿಗೆ ಇಂಥದೇ ಮಾಧ್ಯಮ ಆಗ ಬೇಕು ಎಂದಿಲ್ಲವಲ್ಲ ಈ ಘಟನೆ ಸಂಧ್ಯಾಕಾಲದಲ್ಲೇ ನಡೆದುದೇ ಸಂಯುಕ್ತಿಕವಾಗಿದೆ ತಾರ್ಕಿಕವಾಗಿ ನೋಡಿದರು ಅಸುರ ಶಿಲ್ಪಿಮಯನಿಂದ ನಿರ್ಮಿ ಸಲ್ಪಟ್ಟ ಅಭವ್ಯ ರಾಜಸಭಾ ಭವನದಲ್ಲಿರುವ ಎಲ್ಲಾ ಸ್ತಂಭ ಗಳಲ್ಲೂ ಸಿಂಹಗಳನ್ನೇ ಕೆತ್ತಿದ್ದರು ದಕ್ಷಿಣ ಭಾರತದ ಶಿಲ್ಪಿಗಳಲ್ಲಿ ಇಂತಹ ಸ್ತಂಭಗಳನ್ನು ನಾವು ಈಗಲೂ ಕಾಣಬಹುದು ಆ ಸ್ತಂಭದಲ್ಲಿದ್ದ ಸಿಂಹವೇ ನರಸಿಂಹನಾಗಿ ಪ್ರಕಟಗೊಂಡಿ ರುವುದು ಸಮಂಜಸವೇ ಆಗಿದೆ.

ಇನ್ನು ಸಿಂಹವು ಸಾಕ್ಷಾತ್ ಪರಾಕ್ರಮ, ತೇಜದ ಸಾಕಾರ ರೂಪ-ಎಲ್ಲೆಲ್ಲಿ ಭವ್ಯತೆ ದಿವ್ಯತೆ - ಔನ್ನತ್ಯವಿದೆಯೋ ಅಲೆಲ್ಲಾ ತನ್ನ ಅಸ್ತಿತ್ವವಿದೆ ಎಂದು ಭಗವದ್ಗೀತೆಯ ವಿಭೂತಿ ಯೋಗದಲ್ಲಿ ಶ್ರೀ ಕೃಷ್ಣನೇ ಹೇಳಿಕೊಂಡಿದ್ದಾನೆ ಹಿರಣ್ಯಕಶಿಪು ಎಷ್ಟೇ ಬುದ್ಧಿವಂತಿಕೆಯಿಂದ ಮರಣಬಾರದ ತರಹ ವರ ಪಡೆ ದಿದ್ದರೂ ಅದೆಲ್ಲವನ್ನೂ ವ್ಯರ್ಥಮಾಡಲು ಪರಮಾತ್ಮನು ಗೈದ ತಂತ್ರ ಎಂಥಹ ಅದ್ಭುತವಾದುದು ದೇವರ ಬಳಿ ನಮ್ಮಗಳ ಯಾವ ಬುದ್ಧಿವಂತಿಕೆಯೂ ನಡೆಯಲಾರದು ಆ ಬುದ್ಧಿಯನ್ನು ಕೊಡು ವವನೇ ಭಗವಂತನು ಅದಕ್ಕಾಗಿಯೇ ಅವನಿಗೆ ಸರ್ವತಂತ್ರ ಸ್ವತಂತ್ರ ಎಂದು ಹೇಳುವುದು. ಅಂತರಂಗವನ್ನು ಅಸುರಿ ಶಕ್ತಿಗಳು ಆಕ್ರಮಣ ಮಾಡಿದಾಗ ಅದು ಹಿರಣ್ಯಕಶಿಪುವಿನ ಸಭಾಸ್ತಂಭವಾಗುತ್ತದೆ. ಪ್ರಹ್ಲಾದರೂಪಿಯಾದ ಪರಿಶುದ್ಧಾತ್ಮನ ಪರಾಭಕ್ತಿಯ ಪ್ರಭಾವದಿಂದ ಪರಮಾತ್ಮ ಶ್ರೀ ನರಸಿಂಹನು ಪ್ರಣವ ಗರ್ಜನೆಯನ್ನು ಮಾಡುತ್ತ ಆ ಸ್ತಂಭವನ್ನು ಭೇಧಿಸಿ ಕೊಂಡು ದೈತ್ಯಭೀಕರವಾದ ರೂಪದಿಂದ ಆವಿರ್ಭವಿಸುತ್ತಾನೆ ಅಂತರಂಗದ ಮನೆಯ ಒಳ ಹೊರಗಿನ ಮಧ್ಯಸ್ಥಾನವಾದ ಹೊಸ್ತಿಲಿನಲ್ಲಿ ಕುಳಿತು,ಲಯವಿಕ್ಷೇಪಗಳ ಸಂಧಿಕಾಲದ ಸಂಧ್ಯಾ ಸಮಯದಲ್ಲಿ ಅವಿದ್ಯಾರೂಪಿಯಾದ ಅಸುರರಾಜನ ಎದೆಯನ್ನು ಸೀಳಿ ಅವನ ಸಿಂಹಾಸನವನ್ನು ಏರಿ ಕುಳಿತು ಕೊಳ್ಳುತ್ತಾನೆ. ವಾಸ್ತವವಾಗಿ ಅದು ಭಗವದ್ಧ್ಯಾನ ಸಿಂಹಾ ಸನವೇ ಅಸುರ ಆಕ್ರಮಣದಿಂದ ಅದನ್ನು ಮುಕ್ತಗೊಳಿಸಲು ಅಂತರಂಗದ ಸ್ವಾಮಿಯು

ಪೂಜೆಗೆ ಪ್ರಶಸ್ತವಾದ ಕಾಲವು ಸಂಧ್ಯಾ ಕಾಲವೇ.

ಶ್ರೀ ನರಸಿಂಹ ಸ್ವಾಮಿಯ ಶಿರೋ ಕಂಠದ ಮೇಲಿರುವ ಭಾಗವು ರುದ್ರ ದೇವರ ಜಾಗ "ಆಶೀರ್ಷಂ ರುದ್ರಮೀಶಾನಂ" ರುದ್ರ ರೂಪಿಯಾದ ಆ ದೇವನಿಗೆ ಪ್ರದೋಷಕಾಲದಲ್ಲಿ ಪೂಜೆ ಮಾಡುವುದು ಸರ್ವಪಾಪನಿವಾರಕವು.

ಗೀತೆಯಲ್ಲಿ ಹೇಳದಂತೆ ಸಮದರ್ಶನವಿದ್ದುದರಿಂದ ಪ್ರಹ್ಲಾದನಿಗೆ ಭಗವದ್ದರ್ಶನ ಎಲ್ಲ ಕಡೆ ಆಗುತ್ತಿತ್ತು ಆದ್ದರಿಂದಲೇ ಪ್ರಹ್ಲಾದ ತೋರಿಸಿದಲ್ಲಿ ಕಂಬದಲ್ಲಿ ಭಗವಂತ ಪ್ರಕಟನಾದ ಮುಮುಕ್ಷಗಳಿಗೆ ಮೋಕ್ಷ ಹಾದಿ ಸೂಚಿಸಬಲ್ಲ ಉಪಾಸನೆಗಳಲ್ಲಿ ನೃಸಿಂಹೋಪಾಸನೆ ತುಂಬಿ ಮಹತ್ತ್ವದ್ದು. ನೃಸಿಂಹ ದೇವತೆ ಸಾತ್ವಿಕತೆ, ಪವಿತ್ರತೆಗಳ ಜಾಗೃತ ಪ್ರತೀಕ, ಸಹಸ್ರಸೂರ್ಯನಂತೆ ಪ್ರಳಯಕಾಲದ ಭೋರ್ಗರೆಯುವ ಸಮುದ್ರದಂತೆ ಕೋಪಾನಲದಿಂದ ಆವಿರ್ಭವಿಸಿ ದೈತವರ್ಗದ ಅಹಂಕಾರ ನಾಶ ಇವುಗಳನ್ನು ಮಾಡಿ ಮರುಕ್ಷಣವೇ ಕ್ರೋಧರಹಿತರಾಗಿ ಭಕ್ತ ಪ್ರಹ್ಲಾದನಿಗೆ ಪ್ರಸನ್ನನಾಗಿ ಅಭಯವಿತ್ತಂತೆ ಈ ಪ್ರಭಾವಿ ದೇವತೆಯ ಆರಾಧನೆಯಿಂದ ಶೀಘ್ರದಲ್ಲಿ ಅನುಗ್ರಹಿಸುವುದರಲ್ಲಿ ಸಂದೇಹ ವಿಲ್ಲ.

ಹದಿನಾಲ್ಕರ ಸಂಖ್ಯೆ ಮತ್ತು ನರಸಿಂಹ ಶ್ರೀ ನರಸಿಂಹಾವತಾರ ವೈಶಾಖ ಶುದ್ಧ ಚತುರ್ದಶಿಯಂದು ಚತುರ್ದಶಿ ಎಂದರೆ 14 ನೇ ತಿಥಿ ಇದಕ್ಕೂ ನರಸಿಂಹನಿಗೂ ಅವಿನಾಭಾವ ಸಂಬಂಧ.

1. ಆತಳ, ವಿತಳ, ಸುತಳ, ತಳಾತಳ, ರಸಾತಳ, ಮಹಾತಳ, ಪಾತಾಳ ಎಂಬ ಏಳು ಕೆಳಗಿನ ಲೋಕಗಳು ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ ಏಳು ಮೇಲಿನ ಲೋಕಗಳು ಹೀಗೆ ಚತುರ್ದಶಭುವನಗಳಲೆಲ್ಲ ಎಂಬ ಭಗವಂತ ವ್ಯಾಪಿಸಿದ್ದಾನೆ ಎಂಬುದನ್ನು ಶ್ರೀ ನರಸಿಂಹಾವತಾರ ತಿಳಿಸಿದೆ ಇದು ಬ್ರಹ್ಮಾಂಡದಲ್ಲಿ.

2. ಪಿಂಡಾಂಡವಾದ ನಿಮ್ಮ ದೇಹದಲ್ಲೂ ಚತುರ್ದಶಿ ಅಥವಾ 14 ರ ಕೊನೆಗೆ ನರಸಿಂಹ ಇದ್ದಾನೆ. ಇಲ್ಲಿನ ಹದಿನಾಲ್ಕು ನಮ್ಮ ಇಂದ್ರಿಯಗಳ ಸಮೂಹದಿಂದ ಆಗಿದೆ ವಾಕ್ (ನಾಲಗೆ) ಪಾಣಿ (ಕೈ) ಪಾದ (ಕಾಲು), ಪಾಯು (ಗುದ) ಹಾಗೂ ಉಪಸ್ಥ (ಅಂಗ) ಇವು ಪಂಚಕರ್ಮೇಂದ್ರಿಯಗಳು ಶ್ರೋತ್ರ (ಕಿವಿ), ತ್ವಕ್ (ಚರ್ಮ), ಚಕ್ಷುಸ್ಸು (ಕಣ್ಣು), ಜಿಹ್ವಾ (ನಾಲಗೆ ) ಮತ್ತು ಘ್ರಾಣ (ಮೂಗು) ಎಂಬ ಐದು ಜ್ಞಾನೇಂದ್ರಿಯಗಳು ಇವು ಹತ್ತು ಬಾಹ್ಯೇಂದ್ರಿಯಗಳಾದರೆ ಮನೋ, ಬುದ್ಧಿ ಅಹಂಕಾರ, ಚಿತ್ತ ಎಂಬ ಅಂತಃಕರಣ ಚತುಷ್ಟಯ ಸೇರಿ ಒಟ್ಟು ಹದಿನಾಲ್ಕು ನರತತ್ವ, ಮುಂದಿನದೇ ಚೇತನ ಅದು ನರಸಿಂಹ ತತ್ವ ನಮ್ಮ ಇಂದ್ರಿಯ ಸಮೂಹದಲ್ಲಿ ಚೇತನ ಸಂಚಾರವಾದಾಗ ನರಸಿಂಹನ ಆವಿರ್ಭಾವ.

3.ಜಡ ಎನ್ನಬಹುದಾದ ನಮ್ಮ ಈ ಸಾಮಾನ್ಯ ಇಂದ್ರಿಯಗಳ ಗುಂಪಿನಲ್ಲಿ ಚೈತನ್ಯ ಸಂಚಲಿಸಿದೊಡನೆ ನರಸಿಂಹಾವತಾರವಾಗುವುದು ಹೇಗೆ? ಅದು ಅತ್ಯುತ್ತಮ ವಿದ್ಯಾಭ್ಯಾಸದಿಂದ ಸಾಧ್ಯ ಇಂತಹ ವಿದ್ಯಾಸ್ಥಾನಗಳು ಒಟ್ಟು ಹದಿನಾಲ್ಕು. ಶಿಕ್ಷಾ, ವ್ಯಾಕರಣ, ಛಂದಸ್ಸು, ಕಲ್ಪ, ನಿರುಕ್ತ ಹಾಗೂ ಜ್ಯೋತಿಷ್ಯ ಎಂಬ ಆರು ವೇದಾಂಗಗಳಿಂದ ಕೂಡಿದ ಋಗ್ವೇದ ಯರ್ಜುವೇದ, ಸಾಮವೇದ ಹಾಗೂ ಅಥರ್ವವೇದ ಎಂಬ ನಾಲ್ಕು ವೇದಗಳು ಧರ್ಮಶಾಸ್ತ್ರ,ಪುರಾಣಸಮೂಹ,ಮೀಮಾಂಸೆ ಹಾಗೂ ತರ್ಕಶಾಸ್ತ್ರ ಹೀಗೆ ಒಟ್ಟು ಈ ಹದಿನಾಲ್ಕು ವಿದ್ಯಾಸ್ಥಾನಗಳನ್ನು ಚೆನ್ನಾಗಿ ಕಲಿತು ಸಾರಾಂಶವನ್ನು ಹೃದ್ಗತ ಮಾಡಿಕೊಂಡವ ನರಸಿಂಹ (ಮಾನವಶ್ರೇಷ್ಠ) ನಾಗಬಲ್ಲ.

4. ನರಸಿಂಹನ ಉಪಾಸನೆಯಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಈರ್ಷ್ಯ, ಅಸೂಯೆ, ಡಂಭ, ದರ್ಪ, ಅಹಂಕಾರ, ಇಚ್ಛೆ, ಶ್ರದ್ಧೆ ಹಾಗೂ ಭಕ್ತಿ ಎಂಬ ಚತುರ್ದಶ ಚಿತ್ತವೃತ್ತಿಗಳು ಬಳಕೆಯಾಗಿರುವುದನ್ನು ಕಾಣುತ್ತೇವೆ ಮೊದಲ ಹನ್ನೊಂದು ಹಿರಣ್ಯಕಶಿಪುವಿನದು ನರಸಿಂಹನ ಮುಂದೆ ಇವುಗಳನ್ನು ಪ್ರದರ್ಶಿಸಿ ಆತ ಅಳಿದ ಕೊನೆಯ ಮೂರು ಪ್ರಹ್ಲಾದನದು ಶುದ್ಧವಾದ ಇಚ್ಛೆ, ಶ್ರದ್ಧೆ ಹಾಗೂ ಭಕ್ತಿಯನ್ನು ಭಗವಂತನಿಗೆ ಅರ್ಪಿಸಿದ ಪ್ರಹ್ಲಾದನನ್ನು ಉದ್ಧರಿಸಿದ.

5. ನರಸಿಂಹಾವಲೋಕನ

ದುರಿತರಾಶಿಯ ದೂರ ಸರಿಸುವ ದುರಿತದೇವ!

ಭಕ್ತದೇವೇಂದ್ರನ ಬ್ರಹ್ಮಹತ್ಯೆಯ ದುರಿತವನ್ನು

ಸುಟ್ಟುಹಾಕಿದ ನೀನು ನನ್ನ ದುರಿತ ರಾಶಿಯನ್ನು ದೂರ ಮಾಡಯ್ಯ!

ಭಕ್ತಪ್ರಹ್ಲಾದನ ಸಾಧನೆಗೆ ಅಡ್ಡಿ ಪೊಡ್ಡಿದ

ಹಿರಣ್ಯಕಶಿಪುವನ್ನು ಸೀಳಿದ ನೀನು,

ನನ್ನ ಸಾಧನೆಗೆ ಭಾಧಿಸುವ ಅಸುರಿ
ಶಕ್ತಿಯನ್ನು ಸೀಳಿ ಹಾಕಯ್ಯ!

ಅದಕ್ಕಾಗಿ ಇದೋ ನಿನಗೆ ಪ್ರಣಾಮ!!

ಭಗವದ್ಗೀತೆಯಲ್ಲಿ ಅರ್ಜುನ ನಮ್ಮೆಲ್ಲರ ಪರವಾಗಿ ಮುಂದಿಟ್ಟ ಒಂದು ಜಿಜ್ಞಾಸೆ - ಮನುಷ್ಯ ಪೂರ್ಣ ಮನಸ್ಸಿಲ್ಲದಿದ್ದರೂ ಯಾವುದೋ ಪ್ರಭಾವಕ್ಕೊಳಗಾಗಿ ಪಾಪವನ್ನೆಸಗುತ್ತಿರುತ್ತಾನೆ. ಪ್ರಕೃತಿಯ ರಜೋಗುಣದ ಪರಿಣಾಮವಾಗಿ ಹುಟ್ಟಿಕೊಳ್ಳುವ ಕಾಮಾದಿ ದೋಷಗಳೇ ಮನುಷ್ಯನನ್ನು ಬೇರೆ ಬೇರೆ ಬಗೆಯ ಪಾಪಕರ್ಮಗಳಲ್ಲಿ ತೊಡಗಿಸುವುವು.

ಹೀಗೆ ಮಾಡಲ್ಪಡುವ ಪಾಪದ ದುಷ್ಫಲವನ್ನು ಪರಿಹರಿಸಿಕೊಳ್ಳಲು ಶಾಸ್ತ್ರ ಪರಿಚಯಿಸಿಕೊಟ್ಟ ಉಪಾಯವೇ ಪ್ರಾಯಶ್ಚಿತ್ತ. ದುರಿತ-ಪಾಪಗಳ ಪರಿಹಾರಕ್ಕೆ ಉಪಾಸ್ಯನಾಗಿರುವವನು ಶ್ರೀ ನರಸಿಂಹ.

ಹಿರಣ್ಯಕಶಿಪುವಿನ ಪುತ್ರರಲ್ಲಿ ಪ್ರಹ್ಲಾದ ಹಿರಿಯ. ಹಿರಣ್ಯಕಶಿಪು ಪ್ರಹ್ಲಾದ ಇಬ್ಬರೂ ಸಂಬಂಧದಲ್ಲಿ ತಂದೆ ಮಕ್ಕಳಾದರೂ ಸ್ವಭಾವದಲ್ಲಿ ತೀರ ವಿಲಕ್ಷಣರು. ಹಿರಣ್ಯ (ಧನಕನಕಾದಿಗಳು) ಹಾಗೂ ಕಶಿಪು (ಭೋಗವಿಲಸಗಳು) ಅವನ ಜೀವನದ ಪರಮಾದರ್ಶ.

ಇದಕ್ಕೆ ವಿರುದ್ಧ ಜೀವನಶೈಲಿ ಪ್ರಹ್ಲಾದನದು. ಸದಾ ಭೌತಿಕ ವಸ್ತುಗಳಿಂದ ದೂರವಿದ್ದು. ಆಧ್ಯಾತ್ಮವನ್ನೇ ನಂಬಿದ ವಿರಕ್ತಜೀವನ ಅವನದು. ತಂದೆ ಲಕ್ಷ್ಮೀಯ ದಾಸ; ಮಗ ಲಕ್ಷ್ಮೀಪತಿಯ ದಾಸ. ತಂದೆ ಮಗನಿಗೆ ಒಗಟು; ಮಗ ತಂದೆಯ ಒಗಟು. ಅವನಿಗೆ ವಿಷಯದ ನಂಟು; ಇವನಿಗೆ ವಿಷ್ಣುವಿನ ನಂಟು.

ಸಾತ್ವಿಕ-ತಾಮಸ ಶಕ್ತಿಗಳ ಹೋರಾಟ ಇಂದು ನಿನ್ನೆಯದಲ್ಲ! ತಾಮಸವೃತ್ತಿಯ-ಅಸುರೀಸಂಪತ್ತಿನ ಉಪಾಸಕನಾದ ಹಿರಣ್ಯಕಶಿಪು ವರಬಲದಿಂದ ಮದಿಸಿ, ತನ್ನಲ್ಲಿರುವ ಭಗವಂತನನ್ನು ಮರೆತು, ತಾನೇ ಜಗದೀಶ್ವರ ಎಂಬ ಭ್ರಮೆಗೆ ಒಳಗಾಗಿ ಗರ್ವದಿಂದ ಮೈಮರೆತು ಸಾತ್ವಿಕರಾದ ದೇವ-ದ್ವಿಜರನ್ನು ಹಿಂಸಿಸುತ್ತ ಲೋಕಕಂಟಕನಾಗಿ ಕಡೆಗೆ ತಾನು ನಾಶವಾದುದು ತಾಮಸಿ ಶಕ್ತಿಯನ್ನು ನಂಬಿ ಅಸುರೀ ಶಕ್ತಿಯ ಉಪಾಸಕರಿಗಾಗುವ ಪರಿಣಾಮಕ್ಕೆ ಉದಾಹರಣೆಯಾಗಿದೆ.

ಸಾತ್ವಿಕ ಶಕ್ತಿಯ ಉಪಾಸನೆಯಿಂದ 'ದಾಸೋಹಂ' ಎಂದು ಹೇಳಿ ಜಗತ್ಕಲ್ಯಾಣ, ಸುಖ, ಶಾಂತಿಗಳಿಗೆ ಕಾರಣ ಪುರುಷನಾಗಿ ತಾನು ಉದ್ಧಾರವಾಗುವುದರ ಜೊತೆ ತನ್ನನ್ನು ನಂಬಿ ಬಂದವರನ್ನು ಉದ್ಧರಿಸಿ ಇಡೀ ವಿಶ್ವಕ್ಕೆ ಕಲ್ಯಾಣವನ್ನು ಉಂಟು ಮಾಡಿದ ಮಹಾನುಭಾವ! ಸಾತ್ವಿಕ ಶಕ್ತಿಯ ಪ್ರಭಾವಕ್ಕೆ ಪ್ರಹ್ಲಾದ ರಾಜರ್ಷಿಗಿಂತ ಉತ್ತಮ ದೃಷ್ಟಾಂತ ಬೇಕೆ?


ಭಗವಂತ ಹಿರಣ್ಯನ ಅಪರಾಧಗಳ ಮಟ್ಟ ಏರುತ್ತಿರುವುದನ್ನು ಗಮನಿಸುತ್ತಲೇ ಇದ್ದ ಒಂದು ಹಂತಕ್ಕಾಗಿ ಹೊಂಚು ಹಾಕುತ್ತಿದ್ದ,ಶಿಶುಪಾಲನ ಶತಾಪರಾಧಗಳನ್ನು ಕಾಯ್ದಂತೆ. ಇನ್ನೇನು ಮಟ್ಟ ಮುಟ್ಟಿತು ಅನ್ನುವಾಗಲೇ ಛಂಗನೆ ನರಹರಿಯಾಗಿ ಹಾರಿ ಮಟ್ಟ ಹಾಕಿಯೇಬಿಟ್ಟ!

ಭಗವಂತ ಹೀಗೆಣಿಸಿರಬೇಕು, ನಾನೇ ದೇವರೆನ್ನುವ ಈ ಮೃಗವನ್ನು ಕೊಲ್ಲಬೇಕಾದರೆ ಮೃಗರೂಪದಲ್ಲೇ ಹೋಗಬೇಕು. ಅದರಲ್ಲೂ ಮೃಗರಾಜ ರೂಪದಲ್ಲಿ, ನಾನಾದರೂ 'ಮೃಗಾಣಾಂ ಚ ಮೃಗೇಂದ್ರೋಹಂ' ಭಗವಂತನಿಗೆ ತಾನು ಹೇಳಿದ್ದು ನೆನಪಿಗೆ ಬಂತು.

ಮತ್ತೊಂದು ಮುಖ್ಯವಾದ್ದದ್ದು ' ಈಗಾಗಲೇ ವರಕೊಟ್ಟು ಕೈ ಸುಟ್ಟುಕೊಂಡ ನನ್ನ ಭೃತ್ಯರಾದ ಚತುರ್ಮುಖನ ಮುಖ ಉಳಿಸಬೇಕಾದರೆ ನಾನು ಸಿಂಹಮುಖವನ್ನು ಧರಿಸಬೇಕು. ಎಂದು ಭಗವಂತ'ಸೋಹಂ'ಎಂದ ಹಿರಣ್ಯನಿಗೆ ಸಿಂಹ ರೂಪಿಯಾದ, 'ದಾಸೋಹಂ' ಎಂದ ಚಿಣ್ಣನಿಗೆ ಪ್ರಹ್ಲಾದನಿಗೆ ಹಂಸ ರೂಪಿಯಾದ , ತೀರ್ಥರೂಪನಾದ.

ಸ್ವರೂಪ ಶರೀರದ ಹೃದಯದ ಮಧ್ಯ ಶ್ವೇತವರ್ಣದಿಂದ ಅಣೋರಣೀಯನಾಗಿ ಮೆರೆಯುತ್ತಿರುವ ನರಸಿಂಹನನ್ನು ಮತ್ತು ಮನೆಯಿಂದ ಹೊರಗೆ ಹೊರಟಾಗ ನಮ್ಮ ಸಕಲ ವಿಘ್ನಗಳ ಪರಿಹಾರಕ್ಕಾಗಿ ಮುಂದೆ ಮುಂದೆ ಧಾವಿಸುವ ಕಾರುಣ್ಯ ಸ್ವರೂಪವನ್ನು ನೆನೆಯದವನ ಜನ್ಮವ್ಯರ್ಥವಲ್ಲದೆ!

॥ ಜಯ ನೃಹರೇ ಮಲಭವ ಮಮ ಶರಣಃ ॥



# ಚಿನಿವಾರ ಪುರಂದರದಾಸರು

## (೧೪೮೦ - ೧೫೧೦-೧೫೬೪)

**-ಡಾ ॥ ವಾಸುದೇವ ಅಗ್ನಿಹೋತ್ರಿ**

ಯುಗ ಯುಗಗಳ ಇತಿಹಾಸ ಇರುವ ಭಾರತ ದೇಶಕ್ಕೆ ಜ್ಞಾನ ಭೂಮಿ, ವೇದ ಭೂಮಿ, ಕರ್ಮಭೂಮಿ, ಪುಣ್ಯಭೂಮಿ ಎಂದೆಲ್ಲಾ ಕರೆಯುತ್ತ ಬಂದಿದ್ದೇವೆ. ಏಕೆಂದರೆ ಆಸೇತು ಹಿಮಾಚಲ ಪರ್ಯಂತ ಇರುವ ಈ ಜಂಬೂ ದ್ವೀಪಕ್ಕೆ ಸಹಸ್ರಾರು ವರ್ಷಗಳ ಸಾಂಸ್ಕೃತಿಕ ಪರಂಪರೆ ಇದೆ. ಇತ್ತೀಚಿನ ಒಂದು ಸಹಸ್ರ ವರ್ಷಗಳ ಗುಲಾಮಗಿರಿಯಲ್ಲಿ ನಾವು ಬದುಕುತ್ತ ಬಂದಿದ್ದೇವೆ. ಆ ಬದಲಾವಣೆಯಲ್ಲಿ ಹೊಂದಾಣಿಕೆಯ ದಾರಿ ತಪ್ಪಿದ್ದು ೧೫೬೫ ರ ತಾಳಿಕೋಟೆ ಯುದ್ಧದ ನಂತರ. ಅದರಲ್ಲೂ ನಿಜಾಮನ ದ್ವಾರ ಪಡೆದ ಬ್ರಿಟೀಷ ಆಳ್ವಿಕೆ ನಮ್ಮನ್ನು ತತ್ತರಿಸುವಂತೆ ಮಾಡಿತು. ಅಷ್ಟೇ ಏಕೆ ಇತ್ತೀಚೆಗೆ LPG ಎಂದರೆ ಉದಾರಿಕರಣ, ಖಾಸಗೀಕರಣ, ಜಾಗತೀಕರಣದ ನಂತರ ಅದರ ಫಲಸ್ವರೂಪಗಳಾದ FO, ಮತ್ತು ಕೊಳ್ಳುಬಾಕು ಸಂಸ್ಕೃತಿಗಳು ನಮ್ಮ ದೇಶಿ ವ್ಯವಹಾರಗಳನ್ನು, ಕುಟುಂಬದ ಖಾಸಗಿ ಸಂಬಂಧಗಳನ್ನೇ ಶಿಥಿಲಗೊಳಿಸುತ್ತಿರುವುದು ಇನ್ನೊಂದೇ ದಶಕದಲ್ಲಿ ನಮ್ಮ ಅನುಭವಕ್ಕೆ ಬರುತ್ತದೆ.

ದೇಶ ಅಭದ್ರವಾದಾಗ ದುಷ್ಟರ, ದೈತ್ಯರ ಸಂಖ್ಯೆ ಹೆಚ್ಚಾದಾಗ ಸಾತ್ವಿಕರನ್ನು ಸಜ್ಜನರನ್ನು, ಸದ್ಭಕ್ತರನ್ನು ರಕ್ಷಿಸಲು ಪರಮಾತ್ಮನು ಬೇರೆ ಬೇರೆ ಅವತಾರಗಳಲ್ಲಿ ಬರುತ್ತಾನೆ. ಅದನ್ನು ಸೂಚಿಸಲು, ತಿಳಿಸಲು, ಸಾರಿ ಹೇಳಲು ಋಷಿ ಮುನಿಗಳು ಜಗದ್ಗುರುಗಳು, ಸಾಧು ಸಂತರು ಕಾಲ ಕಾಲಕ್ಕೆ ಆಯಾ ಕ್ಷೇತ್ರಗಳಲ್ಲಿ ಹುಟ್ಟಿ ಬಂದು ಆ ಭಗವಂತನ ಆಜ್ಞೆಯಂತೆ ಸದ್ದಿಲ್ಲದೆ ಸರಿಪಡಿಸುತ್ತಾರೆ.ಅವರು ಕೊಡುವ ಸಲಹೆ,ಮಾಡುವ ಸಾಂತ್ವನ ಸಾಮಾನ್ಯವಾಗಿ ಶ್ಲೋಕ, ಉಪನಿಷತ್ತು, ಉಪದೇಶದ ರೂಪದಲ್ಲಿರುತ್ತದೆ. ಅಗತ್ಯ ಬಿದ್ದಾಗ ರಾಜಾಶ್ರಯ ಪಡೆದು ವಿಧಿ ನಿಷೇಧಗಳ ರೂಪ ಪಡೆಯುತ್ತದೆ.ಇದನ್ನೇ ಧರ್ಮ,ರಾಜಧರ್ಮವೆಂದು ಕರೆಯುತ್ತಾರೆ.

ಧರ್ಮವೆಂದರೆ "ಧಾರಯತಿ ಇತಿ ಧರ್ಮ" ಎಂದರೆ ಯಾವುದು ಧಾರಣೆ ಮಾಡುತ್ತದೆಯೋ ನಮ್ಮನ್ನು ಎತ್ತಿ ಹಿಡಿಯುತ್ತದೆಯೋ ಅಥವಾ ರಕ್ಷಿಸುತ್ತದೆಯೋ ಅದೇ ಧರ್ಮ. ಈ ಹಿಂದೆ ಹೇಳಿದ ೧೫೬೫ ರ ತಾಳಿಕೋಟೆ ಯುದ್ಧವು ಈ ದೇಶದ ಕೊನೆಯ ಧರ್ಮ ಸಾಮ್ರಾಜ್ಯವನ್ನು ಪತನಗೊಳಿಸಿದ ಯುದ್ಧ. ಅದಕ್ಕಿಂತಲೂ ಮುಂಚೆ ಸುಮಾರು ಒಂದೆರೆಡು ದಶಕಗಳಲ್ಲಿ ಕೃಷ್ಣದೇವರಾಯನ ಆಳ್ವಿಕೆಯ ನಂತರ ಸಮಾಜದ ಜನರ ಅಜ್ಞಾನ, ಅಸುರಾವೇಶ, ಅತಿಲೋಲುಪತೆ, ವಿಲಾಸಿ ಪ್ರವೃತ್ತಿ

ತಲೆದೋರಲಾರಂಭಿಸಿದವು. ಜನರಲ್ಲಿ ಸ್ವಾರ್ಥ, ಸ್ವಜನ ಪಕ್ಷಪಾತ, ಜೊತೆಗೆ ಗರ್ವ ಈರ್ಷೆಗಳೆಲ್ಲದರ ಪರಿಣಾಮವಾಗಿ ಹುಟ್ಟಿದ ಸಣ್ಣ ಸಣ್ಣ ಸಂಸ್ಥಾನಗಳ ಅಂತಃಕಲಹಗಳು ಕಾಣಿಸಿಕೊಂಡವು. ಇದನ್ನೇ ಇತ್ತೀಚಿನ ದಿನಗಳಲ್ಲಿ ಅಂತರಿಕ ತುರ್ತು ಪರಿಸ್ಥಿತಿಯ ಘೋಷಣೆಗೆ ಕಾರಣಗಳೆಂದು ಭಾವಿಸಬಹುದು. ವಿಜಯನಗರ ಕಾಲದ ೪ ನೇ ಅರಸು ಮನೆತನದ ಆಳ್ವಿಕೆ ಕಾಲದಲ್ಲಿ ಸಮಾಜದಲ್ಲಿ ಇದೇ ಪರಿಸ್ಥಿತಿ ಇತ್ತು. ಇದನ್ನು ಸರಿ ಪಡಿಸಲು ಬಂದ ಪುಣ್ಯಾತ್ಮರೇ ಪೂತಾತ್ಮ ಪುರಂದರದಾಸರು (೧೪೮೦ - ೧೫೬೪). ಇವರು ಬಾಳಿ ಬದುಕಿದ ೪೦ ವರ್ಷಗಳಲ್ಲಿ ಮೊದಲ ೩೦ ವರ್ಷ ಜಿಪುಣಾಗ್ರೇಸರ ಚಿನಿವಾರ ಶ್ರೀ ಶ್ರೀನಿವಾಸ ನಾಯಕನಾದರೆ ನಂತರದ ಅರ್ಧ ಶತಮಾನ ಅವರು ಪೂತಾತ್ಮ ಪುರಂದರದಾಸರು.

ಭಾರತೀಯ ಆಧ್ಯಾತ್ಮ ಪರಂಪರೆ ಎಂದರೆ ವೈದಿಕ ಪರಂಪರೆಯ ಎಲ್ಲಾ ಧರ್ಮಾಚರಣೆಗಳನ್ನು ಒಪ್ಪಿ, ದೇವರು ಮತ್ತು ಸಂತ ಶಕ್ತಿಯನ್ನು ಗೌರವಿಸಿದರು. ಪುರಂದರದಾಸರು ಶ್ರೀ ಮನ್ಮಧ್ವಾಚಾರ್ಯರ ದ್ವೈತ ಸಿದ್ಧಾಂತ, ರಾಜಋಷಿ ವ್ಯಾಸರಾಯರಂಥ ಗುರುಗಳು ಲಭಿಸಿರುವುದು ತಮ್ಮ ಪುಣ್ಯವೆಂದು ಭಾವಿಸಿದರು. ಅವರಿಗಿಂತ ೨೮ ವರ್ಷ ಚಿಕ್ಕವರು, ಸಾಹಸಿಗಳು, ಪ್ರತಿಭಾಸಂಪನ್ನರಾದ ಕನಕದಾಸರಂತಹ ಸಮಾಜಮುಖಿ ಚಿಂತಕರ ಒಡನಾಟ ಅವರಿಗಿತ್ತು. ಹೀಗಾಗಿ ಗುರು, ದೈವ, ಗೆಳೆಯ ಎಲ್ಲವೂ ಅವರಿಗೆ ಒದಗಿ ಬಂದಿರುವುದು ಒಂದು ಯೋಗವೇ ಸರಿ. ಕನ್ನಡ ನಾಡಿನಲ್ಲಿ ನಡೆಯುತ್ತಿರುವ ಸಾಮಾಜಿಕ ವಿಘಟನೆ ಕ್ರಮೇಣ ಗಟ್ಟಿಗೊಳ್ಳುತ್ತಿರುವುದು, ಮುಸಲ್ಮಾನ ರಾಜರುಗಳ ಆಕ್ರಮಣ ಮತ್ತು ತತ್ತರಿಸಿದ ಒಳಜಾತಿಗಳ ಕೂಪ ಮಂಡೂಕ ತನದ ಮುಪ್ಪರಿಯ ಕಾಲವೇ ಪುರಂದರ ದಾಸರಿಗೆ ಫಲವತ್ತಾದ ಭೂಮಿಯಾಗಿತ್ತು.

ಪುರಂದರದಾಸರು ನಾರದ ಅಂಶಸಂಭೂತರೆಂದು ಲೇವಾದೇವಿ ಬಡ್ಡಿ ವ್ಯವಹಾರ ಮಾಡುವ ಜಿಪುಣಾಗ್ರೇಸರ ಎಂದು ಕೇಳಿದ್ದೇವೆ. ಅವರು ಪತ್ನಿ ೪ ಪುತ್ರರೊಂದಿಗೆ ಸಂಸಾರ ನಡೆಸುತ್ತಿದ್ದ ಚಿನಿವಾರರೆಂಬುವದನ್ನು ಮರೆಯುವಂತಿಲ್ಲ. ಅವರ ಜಿಪುಣತನ ಅತೀ ಆದಾಗ ಹೆಂಡತಿಯ ಮುಖೇನ ಜ್ಞಾನೋದಯವಾಯಿತು. ಅದನ್ನೇ ಅವರು ಈ ಸತಿ ಸಂತತಿ ಸಾವಿರವಾಗಲಿ ಎಂದು ಹಾರೈಸಿದರು. (ಅಂದರೆ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾದಂತೆ ಚಿನಿವಾರರಿಗೆ ಉದ್ಯೋಗ ಅವಕಾಶ ಹೆಚ್ಚಾಗುತ್ತದೆ.) ತಾನೊಬ್ಬ ಲೋಭಿಯಾದರೂ ಮುಂದೆ ಜ್ಞಾನ, ಭಕ್ತಿ, ವೈರಾಗ್ಯ ಧುರೀಣರಾಗಿ ತಮ್ಮ ಗುರುಗಳಿಂದ ದಾಸರೆಂದರೆ ಪುರಂದರದಾಸರಯ್ಯಾ ಎಂದು ಪ್ರಶಂಸೆ ಪಡೆದರು.

ಈ ಲೇಖನದಲ್ಲಿ ಮುಖ್ಯವಾದದ್ದು ಶೀರ್ಷಿಕೆ ಅದರಲ್ಲಿರುವ ೨ ಶಬ್ದಗಳು ಪರಸ್ಪರ ವೈರುಧ್ಯವೂ ಹೌದು ಪೂರಕವೂ ಹೌದು. ಯಶಸ್ವಿ ಚಿನಿವಾರರೊಬ್ಬರು ದಾಸ ಶ್ರೇಷ್ಠರಾದ ಉದಾಹರಣೆ ಇವರನ್ನು ಬಿಟ್ಟರೆ ಕನ್ನಡದಲ್ಲಿ ಬೇರಾರೂ ಇಲ್ಲ "ಧನ್ಯೋ ಗೃಹಸ್ಥಾಶ್ರಮ." ಎಂದರೆ ಧರ್ಮ ಮಾರ್ಗದಿಂದ ಅರ್ಥ ಸಂಪಾದನೆ ಮಾಡಿದ ಗೃಹಸ್ಥನೆ ಧನ್ಯನು. ಶ್ರೀನಿವಾಸನಾಯಕ ಶ್ರಮಜೀವಿ, ವ್ಯರ್ಥ ಕಾಲಹರಣ ಮಾಡಿದ ಬುದ್ಧಿವಂತ ಲೇವಾದೇವಿ ವ್ಯಕ್ತಿ. ಇಂದಿನ MBA, M.com, CA,ICWA, M.sc, M.F.A. ಹೀಗೆ ಏನೆಲ್ಲಾ ವ್ಯವಹಾರದ ಕೌಶಲ್ಯವನ್ನು ಕಲಿಸಲು, ತಿಳಿಸಲು, ಬಂದ ಎಲ್ಲಾ ಕೋರ್ಸುಗಳ ಪಠ್ಯಕ್ರಮದಲ್ಲಿ ಈ ಮುಂದಿನ ವಿಷಯಗಳು ಸಾಮಾನ್ಯವಾದವುಗಳು. ಧ್ಯೇಯ ನಿಷ್ಠತೆ, ಸಮಯದ ಸದುಪಯೋಗ, ಉಳಿತಾಯದ ಮನೋಭಾವ, ಇಂತಹ ಎಲ್ಲಾ ವಿಚಾರಗಳನ್ನು ಕಾರ್ಯರೂಪಕ್ಕೆ ತಂದವರೇ ಪುರಂದರದಾಸರು. ಹಾಗಾಗಿ ಅವರು ನವಕೋಟಿ ನಾರಾಯಣರೆಂದು ಹೆಸರುವಾಸಿಯಾದರು. ವಿಜಯನಗರ ಸಾಮ್ರಾಜ್ಯದ ಶ್ರೀಮಂತರಿಗೆ ಸಾಲ ಕೊಡುತ್ತಿದ್ದರೆಂದು ಪ್ರತೀತಿ ಇದೆ. "ಶ್ರಮ, ಸಮಾಜದ ರಹಸ್ಯ-ಪ್ರೇಮ, ಕುಟುಂಬದ ರಹಸ್ಯ". ಇವೆರಡನ್ನೂ ಅವರು ಸಾಧಿಸಿದ್ದರು. ಹೀಗಾಗಿ ಅವರ ವೈರಾಗ್ಯಕ್ಕೆ ಹೆಚ್ಚು ಗೌರವ. ಬಡವನಿಗೆ ವೈರಾಗ್ಯ ಬರುವುದರಲ್ಲಿ ಹೆಚ್ಚಿನ ಪರ್ಯಾಯಗಳಿರುವುದಿಲ್ಲ, ಅಥವಾ ವೈರಾಗ್ಯ ಬಂದ ಮೇಲೆಯೂ ಅದನ್ನೂ ಅಭಾವ ವೈರಾಗ್ಯವೆಂದು ಜನ ಕುಹಕದಿಂದ ನೋಡುತ್ತಾರೆ. ಆದರೆ ಪುರಂದರದಾಸರು ತಮ್ಮ ನವ ಕೋಟಿ ಆಸ್ತಿಯ ಮೇಲೆ ಒಂದು ತುಳಸಿದಳ ಹಾಕಿ ಕೃಷ್ಣಾರ್ಪಣ ಎಂದು ಸತ್ಪಾತ್ರರಿಗೆ ದಾನ ಮಾಡಿದರು. ಇನ್ನೊಂದು ವಿಷಯವೆಂದರೆ ಪುರಂದರದಾಸರು ಹೆಂಡತಿ ಮಕ್ಕಳನ್ನು ಬಿಟ್ಟ ವೈರಾಗಿಗಳಲ್ಲ. ಅವರೊಂದಿಗೆ ವೈರಾಗ್ಯದ ತುತ್ತತುದಿಯನ್ನು ಹತ್ತಿದರು. ಹೀಗಾಗಿ ಅವರ ಚಿಂತನೆಗಳಲ್ಲಿ ಸಂಸಾರವೂ ಇರಲಿ ಕಂಸಾರಿಯ ನೆನಪೂ ಬರಲಿ ಎಂಬ ಅಪೇಕ್ಷೆ ಇದೆ. ಹರಿದಾಸ ಜೀವನ ಪದ್ಧತಿಯಂತೆ ಸಾಲ ಮಾಡಲಾರದೆ, ಸಾಲದೆನ್ನಲಾರದೆ, ನಾಳೆಗೆ ಇಡಲಾರದೆ ಪೂರ್ಣ ಜೀವನ ನಡೆಸಿದವರು. ಹೀಗೆ ಅರ್ಧ ಶತಮಾನದ ದಾಸ ಜೀವನದಲ್ಲಿ ಅವರ ಚಿನಿವಾರ ಜೀವನದ ಅನುಭವಗಳನ್ನು, ಆರ್ಥಿಕ ಚಿಂತನೆಗಳನ್ನು ಸಮಾಜದ ಜನರಿಗೆ ವ್ಯವಹಾರೋಜೀವನಕ್ಕಾಗಿ ಉಸುರಿಸಿದರು. ಅವರ ಕೀರ್ತನೆಗಳು,ಸುಳಾದಿ, ಉಗಾಭೋಗಗಳು, ಆಶುಗೀತೆಗಳಂತೆ ಸಾಂದರ್ಭಿಕವಾಗಿ ಹೊರಹೊಮ್ಮಿದವು. ೪,೭೫,೦೦೦ ಕೀರ್ತನೆಗಳು ರಚಿಸಿದರೆಂಬ ಪ್ರತೀತಿ ಇದೆ. ಅದರಲ್ಲಿಯ ಕೆಲವು ಚಿನಿವಾರ ವೃತ್ತಿಯಿಂದ ಬಂದ ಹಾಗೂ ಇಂದಿನ ವ್ಯವಹಾರ ಜಗತ್ತಿನ ಸಜ್ಜನರಿಗೆ ವಿಶೇಷತಃ ಮಧ್ಯಮ ವರ್ಗದ ಗ್ರಾಹಕ ಗೃಹಸ್ಥರಿಗೆ ಉಪಯುಕ್ತವಾದ ನುಡಿಗಳು ಇಲ್ಲಿವೆ. ಅವೆಲ್ಲವೂ ಸಾಲ, ಠೇವಣಿ, ಖರ್ಚು, ವಸೂಲಿ, ಬಡ್ಡಿ, ದಿವಾಳಿ, ಮಾರಾಟ, ಜಾಹೀರಾತು ಮೊದಲಾದವುಗಳಿಗೆ ಸಂಬಂಧಿಸಿದವುಗಳಾಗಿವೆ.

ತಮ್ಮ ಚಿನಿವಾರ ಜೀವನದ ಎಲ್ಲ ಮೇಲಿನ ಅನುಭವಗಳನ್ನು ಭಕ್ತಿಯಿಂದ ಗುರುಗಳಾದ ವ್ಯಾಸರಾಯರು

ಕೊಟ್ಟ ಜ್ಞಾನದಿಂದ ಜೊತೆಗೆ ಪೂರ್ವಜನ್ಮದ ಶ್ರೀ ನಾರದ ಮಹರ್ಷಿಗಳ ಅಂಶದಿಂದ ಲಭಿಸಿದ ಎಲ್ಲ ವಿಚಾರಗಳನ್ನು ವೈರಾಗ್ಯ ಜೀವನಕ್ಕೆ ತಿರುಗಿಸಿದರು. ಕೊಡಲಾರೆ ಶೆಟ್ಟಿ-ಬಿಡಲಾರೆ ಶೆಟ್ಟಿ, ಕೊಟ್ಟ ಸಾಲ ಕೊಡದೆ ಭಂಡಾಟ ಮಾಡುತ್ತಾನೆ. ಮೂರ್ಖರಾದರು ಜನರು ಲೋಕ ದೊಳಗೆ, ಕಲ್ಲುಸಕ್ಕರೆ ಕೊಳ್ಳಿರೋ, ನಿಂದ ಕಲಿರ ಬೇಕು ಇರಬೇಕು. ಕಲಿಯುಗದ ಮಹಿಮೆಯು ಕಾಣಬಂತೀಗ, ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡ ಜಗಳವೇ ಲೇಸು, ಎಂಬೆಲ್ಲ ಮಾತುಗಳು ವೈರಾಗ್ಯ ಶಿಖಾಮಣಿ ಆದ ಕೂಡಲೇ ದಿಢೀರನೇ ಬಂದ ಆರ್ಥಿಕ ಚಿಂತನೆಗಳಲ್ಲ. ಆರ್ಥಿಕ ಅನುಭವವನ್ನು ಸಾಮಾ ಜಿಕ ಸಿದ್ಧಾಂತ ಪಾತ್ರೆಯಲ್ಲಿ ಹಾಕಿದಾಗ ಸಮಕಾಲೀನ ಸಮಾಜದಲ್ಲಿ ಉಕ್ಕಿ ಬಂದ ನವನೀತವೇ ಅವರ ಕೀರ್ತನೆ ಗಳು. ಹೀಗಾಗಿ ಇಲ್ಲಿ ಸಾಲಗಾರ ಎಂದರೆ ದೇವರು. ಸಾಹು ಕಾರ ಎಂದರೆ ಭಕ್ತ, ಕೊಳ್ಳುವಿಕೆ ಎಂದರೆ ಹರಿನಾಮ, ಮಾರು ವಿಕೆ ಎಂದರೆ ದಾಸವೃತ್ತಿ. ಹೀಗೆಲ್ಲಾ ಒಂದು ವಿಶಿಷ್ಟ ಅನು ಭವದ ರಸಪಾಕವೇ ಚಿನಿವಾರ ಪುರಂದರದಾಸರ ಕೀರ್ತನೆ ಗಳ ವೈಶಿಷ್ಟ್ಯ. ಇತ್ತೀಚೆಗೆ ೨೦೦೮ ರಲ್ಲಿ ವಿಶ್ವದ ಬೇರೆ ಬೇರೆ ಪಾಶ್ಚಿಮಾತ್ಯ ರಾಷ್ಟ್ರದ ಬ್ಯಾಂಕ್ ಹಾಗೂ ಇತರ ಹಣಕಾಸು ಸಂಸ್ಥೆಗಳು ದಿವಾಳಿ ಆದರೂ ಭಾರತಕ್ಕೆ ಅದರಿಂದ ಹೆಚ್ಚಿನ ತೊಂದರೆ ಆಗಲಿಲ್ಲ, ಬದಲಾಗಿ ನಮ್ಮ ದೇಶದ ಅನೇಕ ಬ್ಯಾಂಕುಗಳು ಹೊಸ ಹೊಸ ಶಾಖೆಗಳನ್ನು ಆರಂಭಿಸಿದವು. ಅದಕ್ಕೆ ಕಾರಣ ಭಾರತದಲ್ಲಿ ಶ್ರೀ ರಾಮಚಂದ್ರನ ಆದರ್ಶ ಪಾಲಿಸುತ್ತಿರುವ ಹಿಂದೂ ಕುಟುಂಬ ವ್ಯವಸ್ಥೆ. ರಾಮಾಯಣ ವೆಂದರೇನು? ಒಂದೇ ಮಾತು ಒಂದೇ ಪತ್ನಿ ಒಂದೇ ಬಾಣ,ಯಾವ ದಾಖಲೆಗಳನ್ನು ಮಾಡದೆಯೇ ಕೇವಲ ಅಡವು (ಗಿರವಿ) ಮೇಲೆ ಸಹಸ್ರಾರು ವರ್ಷಗಳ ಕೋಟ್ಯಾಂತರ ಕುಟುಂಬಗಳು ವ್ಯವಹಾರ ಮಾಡಿದ ಬದುಕಿ ಬಾಳಿದ ವಸ್ತುಗಳ ವಿನಿಮಯ ಮಾಡಿದ ರಾಷ್ಟ್ರವಿದು. ಇದಕ್ಕೆ ಬೇಕಾದದ್ದು ಒಂದೇ ಮಾತು ಹಾಗೂ ಒಂದೇ ಬಾಣದಂತಹ ಪರಮಾತ್ಮನ ಸಾಕ್ಷಿ. ಗುಡಿಗೆ ಹೋಗುವುದು ಆಣೆ ಪ್ರಮಾಣ ಮಾಡುವುದು, ಪಂಚಾಯತಿಯಲ್ಲಿ ಸಾಕ್ಷಿ ಹೇಳುವುದು,ಇವೆಲ್ಲವೂ ಶ್ರೀರಾಮನ ಒಂದೇ ಮಾತು ಎಂಬ ರಾಮಾಯಣದಿಂದ ಬಂದವುಗಳು. ಹೀಗಾಗಿ ಭಾರತದ ಕುಟುಂಬ ವ್ಯವಸ್ಥೆ, ಸಮಾಜ ವ್ಯವಸ್ಥೆ ಅದನ್ನು ಆಧರಿಸಿದ ಅರ್ಥ ವ್ಯವಸ್ಥೆ ಸಧೃಢವಾಗಿಡಲು ಧರ್ಮಾಧಾರಿತ ಸಮಾಜವೇ ಕಾರಣ. ಒತ್ತೆ ಇಲ್ಲದೇ ಸಾಲ ಕೊಡುವವನೇ ಮೂರ್ಖ - ನೆಂಟರಿಗೆ ಸಾಲ ಕೊಡುವವನು ಕಡುಮೂರ್ಖನಯ್ಯಾ,ಎಂದು ೫೦೦ ವರ್ಷಗಳ ಕೆಳಗೆ ಹೇಳಿದ ಸಂತ ರೊಬ್ಬರು ಇನ್ನಾರೂ ಇಲ್ಲ. ಹೀಗಾಗಿ ಪುರಂದರದಾಸರು ಮಾತ್ರ ಚಿನಿವಾರರಾಗಿದ್ದ ಕಾರಣಕ್ಕಾಗಿ ಸಂಪಾದನೆ ಮಾಡು ವುದು ಸನ್ಮಾರ್ಗದಿಂದ ಹೇಗೆ ಸಾಧ್ಯ ಹಾಗೂ ಅದಕ್ಕೆ ಅಗತ್ಯ ಇರುವ ನಿಷ್ಠುರತೆ ಮತ್ತು ಅಧಿಕಾರಗಳನ್ನು ಅವರ ಕೃತಿಗಳಲ್ಲಿ ಕಾಣಬಹುದು. ಅವರ ನಂತರ ವಿಶೇಷತಃ ತಾಳಿಕೋಟಿ ಯುದ್ಧದ ನಂತರ ಸಾಮಾಜಿಕ ವಿಘಟನೆ ಆಗಿ ಜನರು ಸಂಪೂರ್ಣ ಸಾಮಾಜಿಕ ವಿಘಟನೆಗೆ ಕಾರಣರಾದರು. ಪರ್ಯಾಯವಾಗಿ ಪಟ್ಟದರಸಿಯ ಬಿಟ್ಟು ಪರಸತಿಯ ಕಾಂಬರು ಎನ್ನುವ ಕಾಲ ಬಂದು ಬಿಟ್ಟಿತು. ಹೀಗೆ ಪುರಂದರ ದಾಸರ ಕೃತಿಗಳಲ್ಲಿಯ ಚಿನಿವಾರ ವೃತ್ತಿ ಮತ್ತು ವೈರಾಗ್ಯ ಪ್ರವೃತ್ತಿಯಿಂದ ಬಂದ ಕೃತಿಗಳ ಕುರಿತ ಒಂದು ವಿಶೇಷ ಅಧ್ಯಯನವೇ ಆಗಬೇಕಾಗಿದೆ. ಇಲ್ಲಿ ಒಂದೆರಡು ಸೂತ್ರರೂಪಿ ಪದ್ಯಗಳನ್ನು ಉದ್ಧರಿಸಿ ತಿಳಿಸಲಾಗಿದೆ.

೧) ಆದದ್ದೆಲ್ಲಾ ಒಳಿತೆ ಆಯಿತು.

೨) ಈಸಬೇಕು ಇದ್ದು ಜಯಿಸಬೇಕು.

೩) ಮಾನವ ಜನ್ಮ ದೊಡ್ಡದು.

ಈ ಮೂರು ಅವರ ಕೃತಿಗಳ ಪರಿಧಿ ಎಂದು ಹೇಳ ಬಹುದು. ಇನ್ನೂ ಕೆಲವು ಪ್ರಮುಖ ಕೀರ್ತನೆಗಳೆಂದರೆ, ಅಂಜಿಗ ನಾ ನಿನ್ನ ನಂಬಿದೆ ಎನ್ನುವಲ್ಲಿ ತಾನು ಪಡುವ ಹೆಮ್ಮೆಯ ಬಗ್ಗೆ ಗೌರವ ಮೂಡುತ್ತದೆ. ಆರು ಬದುಕಿದರಯ್ಯಾ ಹರಿ ನಿನ್ನ ನಂಬಿ ಎನ್ನುವಲ್ಲಿ ವಿಡಂಬನೆಯಿಂದ ನಿಂದಾಸ್ತುತಿ ಮಾಡುತ್ತಾರೆ. ಆರು ಹಿತವರು ನಿನಗೆ ಈ ಮೂವರೊಳಗೆ ಎನ್ನುವಲ್ಲಿ ಜೀವನದ ನಶ್ವರತೆ ಕಾಣುತ್ತದೆ. ಆವಕುಲವಾದರೇನು ಎನ್ನುವಲ್ಲಿ ಬ್ರಾಹ್ಮಣ ರೆಂಬ ಸೊಕ್ಕು ನೆಲಕಚ್ಚುತ್ತದೆ. ಇಕ್ಕಲಾರೆ ಕೈ ಎಂಜಲೂ ಎನ್ನು ವಲ್ಲಿ. ಜಿಪುಣತನದ ಸತ್ಯ ದರ್ಶನವಾಗುತ್ತದೆ. ಕೂಡಲೇ ಇದು ಭಾಗ್ಯ. ಇದು ಭಾಗ್ಯ. ಇದು ಭಾಗ್ಯವಯ್ಯ ಪದುಮನಾಭನ ಪಾದ ಭಜನೆ ಸುಖವಯ್ಯ ಎಂದು ಹೇಳಿ ಭೋಗಭಾಗ್ಯವೆಂದರೆ ಭಜನೆಯೇ ಹೊರತು ಪದಾರ್ಥಗಳಾಗಲಿ-ಸಂಬಂಧಗಳಾಗಲಿ ಅಲ್ಲ ಎಂಬುದರ ಅರಿವಾಗುತ್ತದೆ. ಇಬ್ಬರ ಹೆಂಡಿರ ಸುಖವ ಇಂದು ಕಂಡೆನಯ್ಯಾ ಎನ್ನುವಲ್ಲಿ ವೈರಾಗ್ಯ ಕಾಣುತ್ತದೆ. ಇನ್ನೂ ದಯಬಾರದೇ ದಾಸನ ಮೇಲೆ ಎನ್ನುವಲ್ಲಿ ಇವರ ಸಮ ರ್ಪಣಾಭಾವ ಮತ್ತು ಪರಮಾತ್ಮನು ಒಡ್ಡುವ ಪರೀಕ್ಷೆಗಳ ದರ್ಶನವಾಗುತ್ತದೆ.

ಉದರ ವೈರಾಗ್ಯವಿದು ನಮ್ಮ ಪದುಮನಾಭನಲಿ ಲೇಸ ಭಕುತಿ ಇಲ್ಲ ಎನ್ನುವ ಕೀರ್ತನೆ ಡಾಂಭಿಕ ಭಕ್ತರ ಸೂಚನೆಗಳು ಮತ್ತು ಅವರಿಂದ ಇರಬೇಕಾದ ಎಚ್ಚರಿಕೆಯನ್ನು ಕುರಿತು ಹೇಳುತ್ತದೆ. ಇಂದಿಗೂ ಪ್ರತಿದಿನ ೨-೩ ಸಲ ಇಂತಹ ಉದರ ವೈರಾಗ್ಯದ ವ್ಯಕ್ತಿಗಳ ದರ್ಶನ ನಮ್ಮ ನಾಡಿನಲ್ಲಾಗುತ್ತಿದೆ. ಹಾಗಾಗಿ ಸಮಾಜದ ಜನ ಎಚ್ಚರಿಕೆಯಿಂದಿದ್ದು ನೈಜ ಭಕ್ತರನ್ನು ಎಂದರೆ ಸತ್ಪಾತ್ರರನ್ನು ಗುರುತಿಸಿ ಗೌರವಿಸಿ ಪ್ರೋತ್ಸಾಹಿಸ ಬೇಕು. ದೀಕ್ಷಾ ಬದ್ಧ ಹರಿದಾಸರು ಅಂಕಿತ ಪಡೆದ ಕೀರ್ತನ ಕಾರರು ಇಂದಿಗೂ ನಮ್ಮ ನಾಡಿನಲ್ಲಿ ಇದ್ದಾರೆ. ಆ ಪರಂಪರೆ ಯನ್ನು ಮುಂದುವರಿಸ ಅಕ್ಕಾಗಿಯೇ ಊರಿಗೆ ಬಂದರೆ ದಾಸಯ್ಯಾ ನಮ್ಮ ಕೇರಿಗೆ ಬಾ ಕಂಡೆ ದಾಸಯ್ಯಾ ಎಂದು

ಬರೆದರು. ಪರಮಾತ್ಮನ ಮೇಲೆ ಆಣೆ ಹಾಕಿ ತಮ್ಮ ಪ್ರಾಮಾಣಿಕ ಭಕ್ತಿಯನ್ನು ಪಂಚಾಯತಿ ಕಟ್ಟೆಯಲ್ಲಿ ರೂಪಿಸಿದರು. ಎನಗೂ ಆಣೆ ರಂಗ ನಿನಗೂ ಆಣೆ, ಇವೆಲ್ಲದರ ಮಧ್ಯದಲ್ಲಿ ಒಬ್ಬ ಸದ್ಭಕ್ತ ನಮ್ಮ ಗುರುತಿಸುವ ಬಗೆ ಹೇಗೆ ಎಂಬ ಚಿಂತೆ ನಮಗೆ ಇಂದಿಗೂ ಕಾಡುತ್ತದೆ. ಏತರ ಕಟಪೀಟಿ ಒಂದಿನ ಹೋಗುತಿ ಲಟಪಿಟಿ ಎನ್ನುವದು ಉಡಾ ಫೆಯ ಮಾತಾದರೂ ಜೀವನದ ನಿಸ್ಸಾರತೆಯನ್ನು ತಿಳಿಸುತ್ತದೆ. ಸದ್ಭಕ್ತನಿಗೆ ಒಂದೇ ಕೂಗಳತೆ ವೈಕುಂಠ ಎಂದು ಗಜೇಂದ್ರನ ಉದಾಹರಣೆ ಕೊಡುತ್ತಾರೆ. ಕಂಡು ಕಂಡು ನೀ ಎನ್ನ ಕೈ ಬಿಡುವರೆ ಕೃಷ್ಣಾ ಎಂದು ಅಂಗಲಾಚುತ್ತಾರೆ.ಕದವ ಮುಚ್ಚಿದಳಿದಕೋ ಗೈಯ್ಯಾಳಿ ಮೂಳಿ ಎಂದು ಭ್ರಷ್ಟ ಹಾಗೂ ಸಮಾಜ ಘಾತುಕ ಹೆಣ್ಣು ಮಕ್ಕಳನ್ನು ಎಚ್ಚರಿಸುತ್ತಾರೆ. ಖ್ಯಾತಿ ಬಾರದ ವಸ್ತು ಎಷ್ಟಿದ್ದರೇನು ಎಂದು ಸಂಪತ್ತಿನ ನಶ್ವರತೆಯನ್ನೂ ತಿಳಿಸುತ್ತಾರೆ. ಜಾಲಿಯ ಮರದಂತೆ ಧರೆಯೊಳು ದುರ್ಜನರು ಎನ್ನುವ ಕೀರ್ತನೆಯಂತೂ ಸಮಾಜದಲ್ಲಿದ್ದೂ ಅದರ ತಾಪತ್ರಯ ಅಂಟದಂತೆ ಬದುಕಲು ಕಲಿಸುತ್ತಾರೆ. ಇನ್ನೊಂದು ಪದ್ಯದ ಒಂದು ಸಾಲಿನಲ್ಲಿ ಹಸಿವೆಗಾರದ ಬೆಕ್ಕು ಹತ್ತಿಯನು ಮೆದ್ದಂತೆ. ಎಂದು ಹೇಳಿ ಸಮಾಜದಲ್ಲಿ ಹೊಂದಾಣಿಕೆ ಇಲ್ಲದ ಕ್ಷುದ್ರ ಮನಸ್ಸಿನ ಜನರ ಒಡನಾಟದಲ್ಲಿದ್ದೂ ಸುಖವಾಗಿರಬೇಕಾದರೆ ಪರಮಾತ್ಮನ ನಾಮ ಒಂದೇ ಕಾಪಾಡುತ್ತದೆ ಎಂದು ಸ್ವಾನುಭವದಿಂದ ಹೇಳುತ್ತಾರೆ. ತುರುಕರು ಕರೆದರೆ ಉಣ ಬಹುದಣ್ಣ ಎನ್ನುವಲ್ಲಿ ಅವರ ಭಾಷಾಶ್ಲೇಷದ ಜಾಣ್ಮೆ ಅದಕ್ಕಿಂತ ಮುಖ್ಯವಾಗಿ ಅವರ ಸಮಯ ಪ್ರಜ್ಞೆಯ ವಿವೇಕ ತಿಳಿದು ಬರುತ್ತದೆ. ದಾರಿ ಯಾವುದಯ್ಯಾ ವೈಕುಂಠಕೆ, ದಾಸನ ಮಾಡಿಕೋ ಎನ್ನ, ಎಂದು ಹೇಳುವಲ್ಲಿ ಅವರು ದುಗ್ಗಾಣೆ ಎಂಬುದು ದುರ್ಜನ ಸಂಗ ಎಂದು ಹಣದ ಬಗ್ಗೆ ನಿರ್ಣಯಕ್ಕೆ ಬಂದಿರುತ್ತಾರೆ. ಆ ಮೇಲೆ ದೇವ ಬಂದ ನಮ್ಮ ಸ್ವಾಮಿ ಬಂದ, ಧರ್ಮವೇ ಜಯ ಎಂಬ ದಿವ್ಯಮಂತ್ರ, ಧಾನ್ಯ ದೊರಕಿತು ಎನಗೆ, ನಂಬಿ ಕೆಟ್ಟವ ರಿಲ್ಲವೋ, ನಾನೇಕೆ ಪರದೇಶಿ, ಪಾಪೋಸು ಹೋದವಲ್ಲ ಸ್ವಾಮಿ,ರಾಮಕೃಷ್ಣರು ಮನೆಗೆ ಬಂದರು ಸಕಲ ಗ್ರಹಬಲ ನೀನೆ ಸರಸಿಜಾಕ್ಷ, ಹರಿ ಕುಣಿದಾ ನಮ್ಮ ಹರಿ ಕುಣಿದಾ, ಮೊದಲಾದ ತೃಪ್ತಭಾವದ ಕೀರ್ತನೆಗಳು ಭಕ್ತಿ ತುಂದಿಲರಾದಾಗ ಹಾಡಿದ ಅವರ ತಾದಾತ್ಮ್ಯ ನಮಗಿಂದು ಮಾದರಿಯಾಗುತ್ತದೆ. ಅವರು ಚಿನಿವಾರರಾದಾಗಿ ನಿಂದ-ದಾಸರಾದ ಮೇಲೆ ಕಂಡ ಅನುಭವವೆಂದರೆ ರೊಕ್ಕ ಎರಡಕ್ಕು ದುಃಖ ಮತ್ತು ವ್ಯಾಪಾರ ನಮಗಾಯಿತು ಎಂದರೆ ವ್ಯಾಪಾರ ಮಾಡಲೇಬೇಕು.ಜೀವನ ವ್ಯಾಪಾರದ ಮುಖಾಂತರವೇ ಸಂಸಾರ ವ್ಯಾಪಾರದಲ್ಲಿ ಸಾಗಬೇಕು. ಸಮಯವಿಲ್ಲದಿದ್ದರೆ ಗುರಿ ತಲುಪುವ ಅನುಮಾನವಿದ್ದರೆ ಸಂಬಂಧಿಕರ ಆತ್ಮೀಯತೆ ಹೆಚ್ಚಾದರೆ ಎಲ್ಲ ಅಪಾಯಗಳನ್ನು ಮೀರಲು ಅವರಲ್ಲಿ ಮಾನವರಿಗಾಗಿ ಒಂದು ಮಂತ್ರವಿದೆ.

ನರಜನ್ಮ ಬಂದಾಗ ನಾಲಿಗೆ
ಇರುವಾಗ ಕೃಷ್ಣಾ ಎನಬಾರದೇ

ಈ ಕೀರ್ತನೆಯಲ್ಲಿ ದೈನಂದಿನ ಎಲ್ಲ ಸಹಜ ಕ್ರಿಯೆಗಳಲ್ಲಿರುವಾಗ ಎಂದರೆ ಸ್ನಾನ, ಊಟ, ನಿದ್ರೆ, ವಿಶ್ರಾಂತಿ, ಪತ್ನಿಯೊಂದಿಗೆ ಸಲ್ಲಾಪ, ಪುತ್ರವಾತ್ಸಲ್ಯ, ಖುಷಿಯಿಂದ ಗೆಳೆಯರೊಡನೆ ಮಾತನಾಡುವಾಗ ಹೀಗೆ ಹತ್ತು ಹಲವು ಕೆಲಸದಲ್ಲಿರುವ ಮನುಷ್ಯನು ಆ ಕೆಲಸ ಮಾಡುತ್ತಲೆ ಕೃಷ್ಣಾ ಎಂದರೆ ಅವನಿಗೆ ಕಷ್ಟಗಳು ಲಭಿಸುವುದಿಲ್ಲ.ಅವು ತಾನೇ ತಾನಾಗಿ ಪರಿಹಾರವಾಗುತ್ತವೆ. ಎಂಬುದು ಹರಿದಾಸರ ಅನುಭವದ ಮಾತು.ಎಲ್ಲರಿಗೂ ಮೆಚ್ಚಿಗೆಯಾದ ಅವರ ಅತ್ಯಂತ ಪ್ರಮುಖ ನುಡಿಯೊಂದು ಹೀಗಿದೆ.

ಪರಿಹಾಸ್ಯದ ಮಾತನಾಡುತಲೊಮ್ಮೆ ಕೃಷ್ಣಾ ಎನಬಾರದೇ
ಪರಿಪರಿಕೆಲಸದೊಳೊಂದು ಕೆಲಸವೆಂದು ಕೃಷ್ಣಾಎನಬಾರದೇ

ಏಕೆಂದರೆ ದುರಿತರಾಶಿಗಳನು ತರಿದು ಬಿಸಾಡುವ ಕೃಷ್ಣನ ನಾಮಕ್ಕೆ ಅಪಾರವಾದ ಶಕ್ತಿ ಇದೆ. ಏಕೆಂದರೆ ಅವನು ಗರುಡಗಮನ. ಎಲ್ಲಿ ಕರೆದರಲ್ಲಿ ಬರುವನು, ಎಂದು ಹೇಳುತ್ತ ಗರುಡಗಮನ ನಮ್ಮ ಪುರಂದರವಿಠಲನ ಕೃಷ್ಣಾ ಎನಬಾರದೇ, ಎಂದು ನಾಮಸ್ಮರಣೆ ಮಾಡಲು ಹೇಳುತ್ತಾರೆ.

ಈ ಜಗತ್ತಿನಲ್ಲಿ ಅರ್ಥಶಾಸ್ತ್ರಜ್ಞರು ಕಲ್ಯಾಣ ರಾಜ್ಯದ ಕಾಲದಲ್ಲಿಯೂ ಚಿನ್ನಕ್ಕೆ ಬಹಳ ಮಹತ್ವ ಕೊಟ್ಟ Bimetalizm gold Standrads ಎಂದು ಕರೆದರು. ಇಂದಿಗೂ ಭಾರತದ Reserve Bank ತನ್ನ ನೋಟುಗಳ ಮುದ್ರಣ ಮಾಡುವ ನಿಯಮದಲ್ಲಿ ಬಂಗಾರದ ಠೇವಣಿಗೆ ಹೆಚ್ಚಿನ ಮಹತ್ವ ಕೊಡುತ್ತದೆ. ಎಂದರೆ ಭಾರತದಲ್ಲಿ ಒಂದು ಕಾಲಕ್ಕೆ ಗೋ ಸಂಪತ್ತು. ಪ್ರಮುಖವಾಗಿತ್ತು. ಆ ಗೋ ಸಂಪತ್ತಿನ ಅತ್ಯಂತ ಪರಿಷ್ಕೃತ ರೂಪವೇ ಬೆಣ್ಣೆ. ಅದನ್ನು ಪ್ರೀತಿಯಿಂದ ತಿಂದವನು ಕೃಷ್ಣ ಅವನಿಗೆ ಬೆಣ್ಣೆ ಕೃಷ್ಣ ಎಂದೇ ಹೆಸರು. ಇಂದಿಗೂ ಪ್ರಪಂಚದಲ್ಲಿ Most liquid asset ಎಂದರೆ ಚಿನ್ನ ಅದರ ವ್ಯವಹಾರವೆಂದರೆ ಬಹಳ ಬುದ್ಧಿವಂತಿಕೆಯಿಂದ ಸುರಕ್ಷಿತವಾಗಿ ಮಾಡಬೇಕಾಗುತ್ತದೆ. ಶ್ರೀನಿವಾಸನಾಯಕರು ಅಂತಹ ಬುದ್ಧಿವಂತ ಚಿನಿವಾರರೂ ಹೌದು.ಬೆಣ್ಣೆ ಕೃಷ್ಣನನ್ನು ಒಲಿಸಿಕೊಂಡ ದಾಸ ಶ್ರೇಷ್ಠರೂ ಹೌದು.

ಕೆಲವು ದಿನಗಳ ಹಿಂದೆ ನಮ್ಮ ಸೇಡಂ ನ ವಿಶ್ವಕರ್ಮ ಸಮಾಜದ ಬಂಧುಗಳು ಮತ್ತು ನನ್ನ ಹಲವು ವಿದ್ಯಾರ್ಥಿಗಳು ಚಿನಿವಾರ ಪುರಂದರದಾಸರ ಬಗ್ಗೆ ಮಾತನಾಡಲು ಆಹ್ವಾನಿಸಿದಾಗ ನನಗೆ ಅನಿಸಿದ ಕೆಲವು ಮಾತುಗಳನ್ನು ಸಂದರ್ಭ ಸ್ಫೂರ್ತಿಯಿಂದ ಹೇಳಿದೆ. ಶ್ರೀನಿವಾಸನಾಯಕ ಯಶಸ್ವಿ ಚಿನಿವಾರರಾದರೆ ಪುರಂದರದಾಸರು ದಾಸಶ್ರೇಷ್ಠ ಚಿನಿವಾರರು.

# ಇದೇ ಕರ್ಮಭೂಮಿ

**ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್**
**ಅನುವಾದ : ಡಿ.ಎಸ್.ಭೂಮಿಕ**


ಪ್ರಸ್ತುತ ನಾವಿರುವುದು ಕರ್ಮಭೂಮಿ,ಉನ್ನತ ಲೋಕಗಳು ಭೋಗಸ್ಥಾನಗಳೆನ್ನಲಾಗುತ್ತದೆ. ಇನ್ನು ಅಧೋ ಲೋಕಗಳು ದುಃಖಸ್ಥಾನಗಳು ಅಥವಾ ದಂಡಸ್ಥಾನಗಳು. ನಾವಿರುವುದು ಭೋಗಸ್ಥಾನ ಹಾಗೂ ದುಃಖಸ್ಥಾನಗಳ ಮಧ್ಯೆ ವಾದ್ದರಿಂದ ಭೋಗವೂ, ದುಃಖವೂ ಇಲ್ಲಿ ಕಾಣಿಸಿರುತ್ತವೆ. ಆದರೆ ಮುಖ್ಯವಾದ ಪ್ರಧಾನವಾದ ಲಕ್ಷಣವು ಮಾತ್ರ ಕರ್ಮವೇ ಅಂದರೆ ಇಲ್ಲಿ ಕರ್ಮಗಳನ್ನು ಮಾಡುವುದೇ ಸಕಲ ಜೀವಿಗಳ ಪ್ರಧಾನಕಾರ್ಯ, ಪ್ರಧಾನ ಲಕ್ಷಣ, ಪ್ರಧಾನ ಲಕ್ಷ್ಯವಾಗಬೇಕು. ಈ ಜಗತ್ತಿನಲ್ಲಿ ಮಾನವರಷ್ಟೇ ಅಲ್ಲದೇ ಪಶುಪಕ್ಷ್ಯಾದಿಗಳು ಸಹಾ ಕೆಲಸ - ಕಾರ್ಯಗಳಲ್ಲಿ ನಿರತರಾಗಿರುವಂತೆ ಕಂಡು ಬರುತ್ತವೆ. ಅದು ಸಹಜವೂ ಹೌದು. ಯಾವುದೇ ಕೆಲಸಗಳಿಲ್ಲದೇ ಕುಳಿತಿರುವ ಪಶುಪಕ್ಷಿಗಳು ನಮಗೆ ಕಂಡು ಬರುವುದಿಲ್ಲ.ಆದರೆ ಯಾವುದೇ ಕೆಲಸ - ಕಾರ್ಯವಿಲ್ಲದೇ ಖಾಲಿ ಕುಳಿತಿರುವ ಮನುಷ್ಯರು ಮಾತ್ರ ನಮಗೆ ಕಾಣಸಿಗುತ್ತಾರೆ. ಪ್ರತಿ ಮನುಷ್ಯನಿಗೆ ಆತನ ಗುಣಕ್ಕನುಸಾರವಾಗಿ ಅವನ ಕರ್ಮಗಳ ವೇದಬದ್ಧವಾಗಿ ನಿರ್ಣಯಿಸಲ್ಪಡುತ್ತವೆ. ಅವರೇ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು, ಈ ವರ್ಣ ವ್ಯವಸ್ಥೆಯು ಭಗವದ್ಗೀತೆಯಲ್ಲಿ ಹೇಳಲ್ಪಟ್ಟಿದೆ. ಮೇಧಾಶಕ್ತಿಯನ್ನು ಮಾತ್ರವೇ ಉಪಯೋಗಿಸಿಕೊಂಡು ಸಕಲ ಕಲ್ಯಾಣ ಕಾರ್ಯಗಳನ್ನೆಸಗುವವರೇ ಬ್ರಾಹ್ಮಣರು ಕೊಟ್ಟ ಬುದ್ಧಿ ಬಲದಿಂದ ಹಾಗೆಯೇ ತಮ್ಮ ಭುಜಬಲದಿಂದ ಪ್ರಜಾಪಾಲನೆ ಮಾಡುವವರು ಬ್ರಾಹ್ಮಣರ ಆಶೀರ್ವಾದದಿಂದ ಕ್ಷತ್ರಿಯರು ಕೊಟ್ಟ ರಕ್ಷಣೆಯಿಂದ ವ್ಯಾಪಾರ, ಗೋರಕ್ಷಣೆ, ವ್ಯವಸಾಯಗಳನ್ನು ಮಾಡುವವರೇ ವೈಶ್ಯರು. ಇನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ವರ್ಣದವರನ್ನು ವಿನಯವಾಗಿ ಸೇವಿಸುತ್ತಾ ಅವರ ಆಶ್ರಯದಲ್ಲಿ ಆನಂದವಾಗಿ, ಆರೋಗ್ಯವಾಗಿ ಜೀವಿಸುವವರೇ ಶೂದ್ರರು. ಒಟ್ಟಿನಲ್ಲಿ ಎಲ್ಲರೂ ಕರ್ಮಕಾರರೇ.

ಅಷ್ಟಕ್ಕೂ ಕರ್ಮ ಏಕೆ ಮಾಡಬೇಕಾಗುವುದು? ಈ ಪ್ರಶ್ನೆಗೆ ಸಿಗುವ ಉತ್ತರವೊಂದೇ. ಯಾವುದು ನಮ್ಮಲ್ಲಿಲ್ಲವೋ ಅದನ್ನು ಪಡೆಯುವುದಕ್ಕೋಸ್ಕರ ಕರ್ಮಗಳನ್ನು ಮಾಡಬೇಕಾಗುವುದು. ತನ್ನಲ್ಲಿಲ್ಲದಿರುವುದನ್ನು ಪಡೆದುಕೊಳ್ಳಲು ಮಾನವನು ಕೆಲಸಗಳಲ್ಲಿ ನೆಲೆನಿಲ್ಲುತ್ತಾನೆ. ಆದರೆ ಭಗವಂತನಿಗೆ ಇಂತಹ ಪರಿಸ್ಥಿತಿಯಿರುವುದಿಲ್ಲ.ಸಮಸ್ತ ಜಗತ್ತನ್ನು ಸೃಷ್ಟಿಸಿದ್ದು ತಾನೇ ಆದುದರಿಂದ ತನ್ನಲ್ಲಿಲ್ಲದಿರುವುದು ಜಗತ್ತಿನಲ್ಲೇ ಇರುವುದಿಲ್ಲ. "ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ್ ಜಗತ್ಯಾಂಜಗತ್" - ಈ ಜಗತ್ತಿನಲ್ಲಿರುವ ಸರ್ವಸ್ವವೂ ಭಗವಂತನದ್ದೇ ಎಂದು ಈಶೋಪನಿಷತ್ ತಿಳಿಸುತ್ತದೆ. ಆದರೂ ಭಗವಂತನು ಈ ಜಗತ್ತಿಗೆ ಬಂದಾಗ ಅವತಾರವೆತ್ತಿದಾಗ ಕರ್ಮಗಳನ್ನು ಮಾಡುತ್ತಲೇ ಇರುತ್ತಾನೆ.

"ಓ ಪಾರ್ಥ! ಮೂರು ಲೋಕಗಳಲ್ಲಿ ನನಗೆ ವಿಧಿಸಲ್ಪಡುವ ಕರ್ಮವಾವುದೂ ಇಲ್ಲ. ನಾನು ಬಯಸುವುದೂ ಯಾವುದೂ ಇಲ್ಲ. ಯಾವುದನ್ನು ಹೊಂದುವ ಅಗತ್ಯವೂ ನನಗಿಲ್ಲ. ಆದರೂ ನಾನು ವಿಧ್ಯುಕ್ತ ಕರ್ಮಗಳಲ್ಲಿ ನೆಲೆಗೊಂಡಿದ್ದೇನೆ" (ಭಗವದ್ಗೀತೆ 3.22)

"ಏಕೆಂದರೆ ಒಂದು ವೇಳೆ ನಾನು ವಿಧ್ಯುಕ್ತ ಕರ್ಮಗಳನ್ನು ಜಾಗೃತೆಯಿಂದ ಮಾಡುವುದರಲ್ಲೇನಾದರೂ ವಿಫಲನಾದರೆ ಮೂರ್ಖರಾದ ಮಾನವರು ನನ್ನ ಮಾರ್ಗವನ್ನೇ ಅನುಸರಿಸುತ್ತಾರೆ'(ಭಗವದ್ಗೀತೆ 3.23)

ಇದು ಶ್ರೀ ಕೃಷ್ಣ ಭಗವಂತನು ಆಡಿದ ಮಾತುಗಳು. ತಾನು ಹೊಂದಬೇಕಾಗಿರುವುದೂ, ತನ್ನಲ್ಲಿಲ್ಲದಿರುವುದೂ ಯಾವ ವಸ್ತುವೂ ಇಲ್ಲದಿರುವುದರಿಂದ ತಾನು ಕರ್ಮದಲ್ಲಿಯೇ ನೆಲೆನಿಂತು ಕಾರ್ಯವೆಸಗುತ್ತಿರುತ್ತೇನೆಂದು ದೇವದೇವನೇ ಹೇಳಿದ್ದಾನಾದ್ದರಿಂದ ಪ್ರತಿ ಮನುಷ್ಯನು, ಮುಖ್ಯವಾಗಿ ಯುವ ಪೀಳಿಗೆಯವರು ಕೆಲಸ ಮಾಡದಿರುವ ಹಾಗೂ ಕೆಲಸ - ಕಾರ್ಯಗಳಿಲ್ಲದಿರುವ ಪರಿಸ್ಥಿತಿಗಳು ಇರಲೇಬಾರದು. ಕೆಲಸ ಕಾರ್ಯಗಳಲ್ಲಿ ತೊಡಗಬೇಕೆಂದರೆ ಚುರುಕುತನಬೇಕು, ಉತ್ಸಾಹಬೇಕು, ನಿಶ್ಚಯಾತ್ಮಕ ಬುದ್ಧಿಬೇಕು.ಧೈರ್ಯಬೇಕು.ಬುದ್ಧಿಯಿಂದ ಪ್ರಯೋಗಗಳನ್ನು ಮಾಡಬೇಕು. ಗುರಿಯಿಟ್ಟುಕೊಂಡು ಜೀವನ ನಡೆಸಬೇಕು. ಸೋಮಾರಿತನ ಸಂಪೂರ್ಣವಾಗಿ ತೊಲಗಬೇಕು. ಭೋಗದಾಸೆ ನಶಿಸಿ ಹೋಗಬೇಕು. ಆಗಲೇ ಆರೋಗ್ಯ ಚೆನ್ನಾಗಿರುತ್ತದೆ.ಮನಸ್ಸು ಚೆನ್ನಾಗಿರುತ್ತದೆ.ಜೀವನವು ಆನಂದದಾಯಕವಾಗಿರುತ್ತದೆ. ಉದ್ಯೋಗದಲ್ಲಿರುವವರೂ ಸಹಾ 60 ವರ್ಷದಾಟುತ್ತಲೇ ತಮ್ಮ ಕೆಲಸಗಳೆಲ್ಲಾ ಆಗಿ ಹೋದಂತೆ, ಇನ್ನು ತಮಗೆ ಯಾವುದೇ ಕೆಲಸವಿಲ್ಲದಂತೆ ಭಾವಿಸುತ್ತಿರುತ್ತಾರೆ. ಭಗವಂತನೇ ಕೆಲಸಗಳಲ್ಲಿ ತೊಡಗಿಕೊಂಡಿರುವಾಗ ಹುಲು ಮಾನವರಾದ ನಮ್ಮದೇನು? ಪ್ರತಿಯೊಬ್ಬನಿಗೂ ತನ್ನ ವಯಸ್ಸು, ಓದು, ಶಕ್ತಿ, ಕಾಲಾನುಸಾರ ಎಷ್ಟೋ ಬಗೆಯ ಕೆಲಸಗಳು ಉಂಟಾಗುತ್ತವೆ. 'ಮನಸ್ಸಿದ್ದಲ್ಲಿ ಮಾರ್ಗ' ಎಂಬ ಲೋಕೋಕ್ತಿಯಂತೆ "ನಾನು ಜೀವನ ಪೂರ್ತಿ ಸಂತೋಷದಿಂದ ಕರ್ಮಗಳನ್ನು ಮಾಡುತ್ತಲೇ ಇರುತ್ತೇನೆ" ಎಂದು ಯಾರಾದರೂ ಅಂದುಕೊಂಡರೆ ಅವರಿಗೆ ಅದ್ಭುತವಾದ ಅವಕಾಶಗಳೂ, ಆರೋಗ್ಯವೂ ಕೈಗೂಡುತ್ತದೆ. ಅವರಂಥವರೇ ಧೀರ್ಘಾಯುಷ್ಯರಾಗಿ ಪರಮಾನಂದದಿಂದ ಜೀವಿಸುತ್ತಾರೆ. ಆದ್ದರಿಂದ ಗೀತೋಪದೇಶದ ಮೂಲಕ ಎಲ್ಲರೂ ಕಾರ್ಯೋನ್ಮುಖರಾಗಲು ಸನ್ನದ್ಧರಾಗಬೇಕು.



# ಪಾಠ -4

# ಸಂಸ್ಕೃತ ಕಲಿಯೋಣ...!!

- ನಿರ್ವಹಣೆ - ಡಾ|| ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್

| | | | |
|---|---|---|---|
| क् + क = क्क | ಕ್ + ಕ = ಕ್ಕ | | |
| क् + ख = क्ख | ಕ್ + ಖ = ಕ್ಖ | ग् + घ = ग्घ | ಗ್ + ಘ = ಗ್ಘ |
| क् + ट = क्ट | ಕ್ + ಟ = ಕ್ಟ | ग् + द् = ग्द | ಗ್ + ದ = ಗ್ದ |
| क् + त = क्त | ಕ್ + ತ = ಕ್ತ | ग् + ध = ग्ध | ಗ್ + ಧ = ಗ್ಧ |
| क् + थ = क्थ | ಕ್ + ಥ = ಕ್ಥ | ग् + न = ग्न | ಗ್ + ನ = ಗ್ನ |
| क् + न = क्न | ಕ್ + ನ = ಕ್ನ | ग् + ब = ग्ब | ಗ್ + ಬ = ಗ್ಬ |
| क् + प = क्प | ಕ್ + ಪ = ಕ್ಪ | ग् + भ = ग्भ | ಗ್ + ಭ = ಗ್ಭ |
| क् + म = क्म | ಕ್ + ಮ = ಕ್ಮ | ग् + म = ग्म | ಗ್ + ಮ = ಗ್ಮ |
| क् + य = क्य | ಕ್ + ಯ = ಕ್ಯ | ग् + य = ग्य | ಗ್ + ಯ = ಗ್ಯ |
| क् + र = क्र | ಕ್ + ರ = ಕ್ರ | ग् + र = ग्र | ಗ್ + ರ = ಗ್ರ |
| क् + ल = क्ल | ಕ್ + ಲ = ಕ್ಲ | ग् + ल = ग्ल | ಗ್ + ಲ = ಗ್ಲ |
| क् + व = क्व | ಕ್ + ವ = ಕ್ವ | ग् + व = ग्व | ಗ್ + ವ = ಗ್ವ |
| क् + ष = क्ष | ಕ್ + ಷ = ಕ್ಷ | | |
| क् + स = क्स | ಕ್ + ಸ = ಕ್ಸ | | |
| ख् + थ = ख्थ | ಖ್ + ಥ = ಖ್ಥ | | |
| ख् + न = ख्न | ಖ್ + ನ = ಖ್ನ | | |
| ख् + प = ख्प | ಖ್ + ಪ = ಖ್ಪ | | |
| ख् + य = ख्य | ಖ್ + ಯ = ಖ್ಯ | | |
| ख् + र = ख्र | ಖ್ + ರ = ಖ್ರ | | |
| ख् + व = ख्व | ಖ್ + ವ = ಖ್ವ | | |
| ग् + ग = ग्ग | ಗ್ + ಗ = ಗ್ಗ | | |


## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ

# ನರಸಿಂಹಾವತಾರದ ರಹಸ್ಯ

- ಶ್ರೀಮತಿ. ಸಿ.ಎಸ್.ಊರ್ಮಿಳಾ



ಸತ್ಸಜ್ಞಾನ ಸುಖ ಸ್ವರೂಪ ಮಮಲಂ ಕ್ಷೀರಾಬ್ಧಿ ಮಧ್ಯೇ ಸ್ಥಿತಂ।
ಯೋಗಾರೂಢಮತಿ ಪ್ರಸನ್ನ ವದನಂ ಭೂಷಾ ಸಹಸ್ರೋಜ್ವಲಂ
ತ್ರ್ಯಕ್ಷಂ ಚಕ್ರಪಿನಾಕ ಸಾಭಯವರಾನ್ ಬಿಭ್ರಾಣ ಮರ್ಕಚ್ಛವಿಂ ।
ಛತ್ರೀಭೂತ ಫಣೀಂದ್ರಂ ಇಂದು ಧವಳಂ ಲಕ್ಷ್ಮೀ ನೃಸಿಂಹಂ ಭಜೇ॥

ಭಗವಂತನು ಸರ್ವಜ್ಞನಾಗಿಯೂ,ಸರ್ವಶಕ್ತನಾಗಿಯೂ ಇರುವುದರಿಂದ ತನ್ನ ಸಂಕಲ್ಪ ಮಾತ್ರದಿಂದಲೇ ಜಗತ್ತಿನ ಸೃಷ್ಟಿಸ್ಥಿತಿ ಸಂಹಾರಗಳನ್ನು ಸಹ ಮಾಡಬಲ್ಲನು. ಲೋಕದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಭಗವಂತನಾದ ಜಗತ್ಕಾರಣನಾದ ಶ್ರೀ ಮನ್ನಾರಾಯಣನು ಬ್ರಹ್ಮ, ರುದ್ರ, ಇಂದ್ರ ಮುಂತಾದ ದೇವತೆಗಳಿಗೆ ಅನೇಕ ಕಾರ್ಯಗಳನ್ನು ಮಾಡುವಂತೆ ನಿಯಮಿಸಿರುತ್ತಾನೆ. ಹೀಗಿರುವಲ್ಲಿ ಹಿರಣ್ಯಕಶಿಪು ರಾವಣ ಮುಂತಾದ ರಾಕ್ಷಸರು ಅನೇಕ ವರ್ಷಗಳ ಕಾಲ ತಪಸ್ಸನ್ನು ಆಚರಿಸಿ ಬ್ರಹ್ಮಾದಿ ದೇವತೆಗಳಿಂದ ವರವನ್ನು ಪಡೆದುಕೊಂಡು ಜಗತ್ತಿನಲ್ಲಿ ಅಹಿತ ಕಾರ್ಯವನ್ನು ಮಾಡಲು ಉದ್ಯುಕ್ತರಾಗಿರುತ್ತಾರೆ ಇಂದರಿಂದಾಗಿ ಶಿಷ್ಟರು. ಸಾಧುಸಂತರು ಭಯಗ್ರಸ್ತರಾಗಿರುತ್ತಾರೆ. ಈ ಸಂದರ್ಭದಲ್ಲಿ ಭಗವಂತನು ವಿಭಿನ್ನವಾದ ಅವತಾರವನ್ನು ಎತ್ತುತ್ತಾ ತನ್ನ ಕೃಪೆಯಿಂದಲೇ ಅಧಿಕಾರವನ್ನು ಚಲಾಯಿಸುತ್ತಾನೆ ಮತ್ತು ತನ್ನ ಆಜ್ಞಾನುಸಾರವಾಗಿಯೇ ಅವರವರು ನಡೆಸುವ ತಪಸ್ಸು, ಯಜ್ಞ ಮುಂತಾದವುಗಳಿಗೆ ಫಲಕೊಡುವ ಬ್ರಹ್ಮಾದಿ ದೇವತೆಗಳ ಮಾತನ್ನೂ ಸುಳ್ಳಾಗಿಸದೇ ಭಗವಂತನು ಅವತಾರವನ್ನು ಎತ್ತುತ್ತಾನೆ. ಇದಕ್ಕೆ ಹಿರಣ್ಯಕಶಿಪುವನ್ನು ಸಂಹರಿಸಲು ನರಮೃಗರೂಪಧರನಾಗಿ ಅವತರಿಸಿದುದೇ ಸಾಕ್ಷಿ ದುಷ್ಟರಾವಣನನ್ನು ಸಂಹರಿಸಲು ಮನುಜ ಕುಲದಲ್ಲಿ ರಾಮಹುಟ್ಟಿದುದೇ ಸಾಕ್ಷಿ.

ಈ ಲೋಕದಲ್ಲಿ ಸಮಸ್ತ ಪ್ರಾಣಿಗಳೂ ಜನ್ಮ-ಜರ ಮರಣಾದಿಗಳು ಎಲ್ಲರಿಗೂ ಬರುವಂತಹುದೇ."ಜಾತಸ್ಯ ಮರಣಂ ಧ್ರುವಂ ಜನ್ಮ ಮೃತಸ್ಸ ಚ " ಎಂದು ಗೀತಾಚಾರ್ಯ ಹೇಳಿದಂತೆ ಅವರವರ ಕರ್ಮಾನುಸಾರವಾಗಿ ಪ್ರತಿಯೊಬ್ಬನೂ ಈ ಲೋಕದಲ್ಲಿ ಸುಖದುಃಖಗಳನ್ನು ಅನುಭವಿಸಿ ಮರಣವನ್ನು ಅಪ್ಪುತ್ತಾನೆ ಎಂಬುದು ಶಾಶ್ವತ ಸತ್ಯ. ಇದನ್ನು ಅರಿತವನು ದೇವಮಾನವನಾಗುತ್ತಾನೆ.ಅರಿಯದವನು ದಾನವನಾಗುತ್ತಾನೆ. ಭಕ್ತ ವಿರೋಧಿಗಳನ್ನು ಪರೋಕ್ಷವಾಗಿಯೂ, ಪ್ರತ್ಯಕ್ಷವಾಗಿಯೂ ಅವರವರ ಪಾತಕಗಳನ್ನು ದುಃಖಗಳನ್ನು ಅವರ ಮನಸ್ಸಿನಲ್ಲಿ ಉಂಟಾಗುವ ನಾನಾ ಸಂದೇಹಗಳನ್ನು ಭಗವಂತನೇ ಪರಿಹರಿಸುತ್ತಾನೆ. ವಿಷ್ಣುವು ನರಸಿಂಹಾವತಾರ ಮಾಡಿ ಪ್ರಹ್ಲಾದನ ತಂದೆ ಹಿರಣ್ಯಕಶಿಪುವನ್ನು ಸಂಹಾರ ಮಾಡಿದುದೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿ.

ಜಗತ್ಕಾರಣನಾದ ಮಹಾವಿಷ್ಣುವಿನಿಂದ ನಿರ್ಮಿತವಾದ ಈ ಪ್ರಪಂಚದಲ್ಲಿ ಎರಡು ಬಗೆಯನ್ನು ಕಾಣುತ್ತೇವೆ. ಪಾಪ-

ಪುಣ್ಯ , ಶತ್ರು - ಮಿತ್ರ, ಒಳಿತು - ಕೆಡಕು, ಸಜ್ಜನರು - ದುರ್ಜನರು ಇತ್ಯಾದಿ. ಯಾರು ಸತ್ಯಶೀಲರಾಗಿರುತ್ತಾರೋ ಧರ್ಮನಿರತರಾಗಿರುತ್ತಾರೋ ಸದಾಚಾರ ಸಂಪನ್ನರೋ ಸರ್ವಲೋಕಹಿತರೋ ಅವರನ್ನೇ ಸಜ್ಜನರು ಸಾತ್ವಿಕರೆಂದು ಪರಿಗಣಿಸಲಾಗುವುದು ಅದಕ್ಕೆ ತದ್ವಿರುದ್ಧವಾಗಿ ಭಗವಂತನನ್ನು ಕಂಡರೆ ದ್ವೇಷ, ಸಜ್ಜನರ ಆನಂದಕ್ಕೆ ವಿಘ್ನತರುವುದು ಲೋಕ ಕಂಟಕನಾಗಿರುವುದು ಹೆಣ್ಣು ಹೊನ್ನು, ಮಣ್ಣು ಈ ಮೂರೇ ಜೀವನದ ಸಾರ ಸರ್ವಸ್ವ ಎಂದು ಬಗೆಯುವವರೇ ದುರ್ಜನರು ದುಷ್ಟರೆಂದು ಪರಿಗಣಿಸಲಾಗುವುದು.

ಮಹಾವಿಷ್ಣುವಿನ ಅವತಾರ ರಹಸ್ಯವೂ ಸಹ ಎರಡು ಧ್ಯೇಯಗಳನ್ನು ಹೊಂದಿರುತ್ತದೆ.1. ದುಷ್ಟಶಿಕ್ಷಣ 2. ಶಿಷ್ಟ ಪರಿಪಾಲನ.

ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃ ತಾಮ್
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ

ಎಂದು ಶ್ರೀ ಕೃಷ್ಣ ಗೀತೆಯಲ್ಲಿ ಸ್ಪಷ್ಟಪಡಿಸಿದ್ದಾನೆ. ದುಷ್ಟರನ್ನು ಅಳಿಸಿ ಶಿಷ್ಟರನ್ನು ಪರಿಪಾಲಿಸುವುದೇ ಭಗವಂತನ ಪ್ರಮುಖವಾದ ಉದ್ದೇಶ ಕರ್ಮಬಂಧದಿಂದ ಸಂಸಾರದಲ್ಲಿ ತೊಳಲುತ್ತಿರುವ ಚೇತನರು. ಅದರ ಬಂಧದಿಂದ ಬಿಡಿಸಿಕೊಳ್ಳ ಬೇಕಾದರೆ ಇರುವ ಮಾರ್ಗಗಳು ಎರಡು ಅದೇ ಭಕ್ತಿ ಮತ್ತು ಪ್ರಪತ್ತಿ. ಭಕ್ತಿಯೆಂದರೆ ಸದಾ ಭಗವಂತನನ್ನು ಧ್ಯಾನಿಸುವುದು. ಅವನನ್ನೇ ಕುರಿತು ತಪೋಧ್ಯಾನ ನಿರತನಾಗುವುದು. ಪ್ರಪತ್ತಿಯೆಂದರೆ ನನಗೆ ಭಕ್ತಿ ಯೋಗಾದಿಗಳನ್ನು ಮಾಡಲು ತನಗೆ ಶಕ್ತಿ ಇಲ್ಲ ಎಂಬುದನ್ನು ಮನಗಂಡು ತನ್ನ ಅಶಕ್ತತೆಯನ್ನು ಆ ಪರಮಾತ್ಮನಲ್ಲಿಯೇ ಅರುಹಿ ನೀನೆ ನನಗೆ ಗತಿ ಅಪ್ಪಾ'-ಎಂದು ತನ್ನನ್ನು ರಕ್ಷಿಸುವ ಭಾರ ಪರಮಾತ್ಮನಿಗೇ ಸೇರಿದ್ದು ತನ್ನದು ಎಂಬುದು ಈ ಪ್ರಪಂಚದಲ್ಲಿ ಯಾವುದೂ ಇಲ್ಲ. ಸಕಲವೂ ಭಗವಂತನದೇ ಎಂದು ಆತ್ಮ ಸಮರ್ಪಣೆ ಮಾಡುವುದು ಶರಣಾಗತಿ ಮಾಮೇಕಂ ಶರಣಂ ವ್ರಜ ಎಂದು ಭಗವಂತನೇ ಅಭಯ ಪ್ರಧಾನ ಮಾಡಿದ್ದಾನೆ. ಈ ಭಕ್ತಿ ಪ್ರವತ್ತಿಗೆ ಸಾಕಾರ ಸ್ವರೂಪನಾದವನು ಭಕ್ತಪ್ರಹ್ಲಾದ. ಇವನ ತಂದೆಯೇ ದುಷ್ಟನಾದ ಹಿರಣ್ಯಕಶಿಪು ಇವನು ಭಗವದ್ಭಕ್ತರಾದ ಸಾಧುಸಂತರರನ್ನು

**ಎಡದಿಂದ ಬಲಕ್ಕೆ**

1. ಶ್ರೀ ವೆಂಕಟೇಶಂ ಸ್ಮರಾಮಿ
2. ಅಚ್ಚೋ ವಚ್ಚೋ
3. ತಿರುವಲ್ಲಿಕ್ಕೇಣಿ

**ಬಲದಿಂದ ಎಡಕ್ಕೆ**

4. ಸ್ವಯಂ ವ್ಯಕ್ತ ಕ್ಷೇತ್ರ
5. ತತ್ವಶೇಖರ

**ಮೇಲಿಂದ ಕೆಳಕ್ಕೆ**

6. ಕಡಲ್‌ಮಲ್ಲೈ
7. ಅಗ್ನಿಮೀಳೇ
8. ಶಾಲಕ್ಕಿ
9. ಶಿಂಗವೇಲ್‌ಕುಂಡ್ರಂ

**ಕೆಳಗಿನಿಂದ ಮೇಲಕ್ಕೆ**

10. ತಿರುವೇಂಗಡಂ
11. ಪರಾಶರ
12. ಹವಿಸ್ಸು
13. ದ್ವಯ ಚುರುಕ್ಕು

| ಕ್ರ.ಸಂ | 1 | 2 | 3 4 | 5 | 6 | 7 | 8 | |
|---|---|---|---|---|---|---|---|---|
| 1 | 1 ಶ್ರೀ | ವೆಂ | 6 ಕ | ಟೇ | ಶಂ | ಸ್ಮ | ರಾ | ಮಿ |
| 2 | ಡಂ | ರ | ಡ | 2 7 ಅ | ಚ್ಚೋ | ವ | ಚ್ಚೋ | 9 ಶಿಂ |
| 3 | ಗ | ಶ | ಲ್ | ಗ್ನಿ | 8 ಶಾ | ಸ್ಸು | ಕ್ಕು | ಗ |
| 4 | ವೇಂ | ರಾ | ಮ | ಮೀ | ಲ | ವಿ | ರು | ವೇ |
| 5 | ರು | 11 ಪ | ಲ್ಲೈ | ಳೇ | ಕ್ಕಿ | 12 ಹ | ಚು | ಲ್ |
| 6 | 3 10 ತಿ | ರು | ವ | ಲ್ಲಿ | ಕ್ಕೇ | ಣಿ | ಯ | ಕುಂ |
| 7 | ತ್ರ | ಕ್ಷೇ | ಕ್ತ | ವ್ಯ | ಯಂ | 4 ಸ್ವ | 13 ದ್ವ | ಡ್ರಂ |
| 8 | | ಮ್ | ರ | ಖ | ಶೇ | ತ್ವ | 5 ತ | |

ಹಿಂಸಿಸುತ್ತಾ ವಿಷ್ಣುವನ್ನು ದ್ವೇಷಿಸುತ್ತಾ, ವೈದಿಕ ಕರ್ಮಾನುಷ್ಠಾನಗಳನ್ನು ಸರಿಯಾದ ರೀತಿಯಲ್ಲಿ ಮಾಡದಂತೆ ಅದಕ್ಕೆ ಅಡಚಣೆ ಮಾಡುತ್ತಾ ತಾನೇ ಈ ಲೋಕಕ್ಕೆಲ್ಲಾ ಪ್ರಭು ವೆಂದೂ ತನ್ನನ್ನೇ ಎಲ್ಲರೂ ಪೂಜಿಸಬೇಕೆಂದು ಕಟ್ಟಳೆ ಇಟ್ಟು ಮೆರೆದನು ರಾಕ್ಷಸನಾಗಿದ್ದರೂ ಹಿರಣ್ಯಕಶಿಪು ಸಾವಿರಾರು ವರ್ಷಗಳ ವರೆಗೆ ತಪಸ್ಸು ಮಾಡಿ ಬ್ರಹ್ಮನಿಂದ ವರವನ್ನು ಪಡೆದು ಕೊಂಡಿದ್ದನು. ಅದುವೇ ಒಂದು ರೋಚಕದ ಸಂಗತಿ ತನಗೆ ಭೂಮಿಯ ಮೇಲಾಗಲಿ,ಆಕಾಶದಲ್ಲಿ ಆಗಲಿ ಮನುಷ್ಯರಿಂದಾಗಲಿ ದೇವತೆಗಳಿಂದಾಗಲಿ.ಯಾವುದೇ ಆಯುಧಗಳಿಂದಾಗಲಿ ತನಗೆ ಸಾವು ಉಂಟಾಗದಂತೆ ಬ್ರಹ್ಮನಿಂದ ವರವನ್ನು ಪಡೆದುಕೊಂಡಿದ್ದನು. ಇಂತಹ ರಾಕ್ಷಸೀ ಗುಣಗಳನ್ನು ಪಡೆದ ಹಿರಣ್ಯಕಶಿಪುವಿನ ಯತ್ಕಿಂಚಿತ್ ಪ್ರಣ್ಯ ಫಲವೋ ಎಂಬಂತೆ ಪ್ರಹ್ಲಾದನು ಜನಿಸಿದನು. ಇದೆಂತಹ ವಿಪರ್ಯಾಸ? ಹಿರಣ್ಯಕಶಿಪುವು ತನ್ನ ಮಗ ಪ್ರಹ್ಲಾದನ ವಿಷ್ಣು ಭಕ್ತಿಯನ್ನು ಎಳ್ಳಷ್ಟೂ, ಸಹಿಸದೆ ಅವನಿಗೆ ನಾನಾ ವಿಧವಾದ ಚಿತ್ರಹಿಂಸೆ ಕೊಟ್ಟ ಅವನನ್ನು ಕೊಂದು ಬಿಡಬೇಕೆಂದು ನಾನಾ ರೀತಿಯಲ್ಲಿ ಪ್ರಯತ್ನಿಸಿದ ಆನೆಯಿಂದ ತುಳಿಸಿದನು. ಬೆಂಕಿ ಯಲ್ಲಿ ಹಾಕಿದನು. ಸಮುದ್ರದಲ್ಲಿ ಎಸೆದನು ವಿಷವನ್ನು ಪಾನ ಮಾಡಿಸಿದನು. ಆದರೆ ಪ್ರಹ್ಲಾದನಾದರೋ ಸ್ವಲ್ಪವೂ ವಿಚಲಿತ ಮನಸ್ಕನಾಗದೆ ನಿರಂತರವಾಗಿ 'ಓಂ ನಮೋ ನಾರಾಯಣಾಯ' ಎಂಬ ಅಷ್ಟಾಕ್ಷರ ಮಂತ್ರವನ್ನೇ ಜಪಿಸುತ್ತಾ ಸಕಲ ಕಷ್ಟಗಳಿಂದಲೂ ಪಾರಾದನು. ಹಿರಣ್ಯಕಶಿಪುವಿನ ಸಕಲ ಪ್ರಯತ್ನ ಗಳು ನಿಷ್ಫಲವಾಯಿತು. ಹಾಗಾದರೆ ಈ 'ನಾರಾಯಣ' ಎಂಬ ಪದಕ್ಕೆ, ಹೆಸರಿಗೆ ಅಷ್ಟೊಂದು ಪ್ರಬಲವಾದ ಶಕ್ತಿ ಇದೆಯೇ? ನಿಜ ನಾರಾಯಣ ಎಂಬ ಪದವೇ ವಿಶ್ವ ವ್ಯಾಪಕತ್ವವನ್ನು ಸೂಚಿಸುತ್ತದೆ. ಈಗ ಈ ನಾರಾಯಣ ಎಂಬ ನಾಮದ ಮಹಿಮೆಯ ಬಗ್ಗೆಯೂ ತಿಳಿಯೋಣ.

'ನಾರಾಯಣ'ಎಂಬ ಪದವು ಅತ್ಯಂತ ವ್ಯಾಪಕವಾದ ಅರ್ಥವನ್ನು ವ್ಯಕ್ತಪಡಿಸುತ್ತದೆ. ಇದು ಎಲ್ಲ ದೇಶ ಎಲ್ಲ ಕಾಲಗಳಿಗೂ ಅನ್ವಯಿಸುವ ಸರ್ವವ್ಯಾಪಕ ಸತ್ಯವನ್ನೇ ಹೇಳುತ್ತದೆ.

ನಾರಾಯಣ ಎಂಬ ಸಮಸ್ತ ಪದದಲ್ಲಿ "ನಾರ' ಎಂದರೆ ಎಲ್ಲ ಜೀವಿಗಳ ಸಮೂಹ 'ನರಾಣಾಂ ಸಮೂಹಃ ನಾರಂ" ಆ ಎಲ್ಲಾ ಜೀವ ಸಮೂಹಕ್ಕೂ ಏಕಮಾತ್ರ 'ಆಯನಂ' ಎಂದರೆ 'ಮಾರ್ಗ' ವಾಗಿರುವ ಪರಮಾತ್ಮನೇ ನಾರಾಯಣ ಜೀವಿಗಳಿಗೆ ಪರಮ ಶ್ರೇಯಸ್ಸನ್ನು ಪಡೆಯಲು ಅವನನ್ನು ಬಿಟ್ಟು ಬೇರೆ ಯಾವ ಮಾರ್ಗವೂ ಇಲ್ಲ. ಇದನ್ನು ನಾನ್ಯಃ ಪಂಥಾ ಅಯನಾಯ ವಿದ್ಯತೇ ವೇದೋಪನಿಷತ್ತಿಗಳೂ ಸಮರ್ಥಿಸಿವೆ.

ಪರಮಶ್ರೇಯಸ್ಸಿಗೆ ನಾರಾಯಣನೇ ಕಾರಣನು ಎಂದು ತಿಳಿದಿದ್ದಾಯಿತು ಹಾಗಾದರೆ ಜೀವಿಗಳಿಗೆ ಪರಮ ಲಕ್ಷ್ಯ ಯಾರು? ಎಂದರೆ ಅದೂ ಸಹ ನಾರಾಯಣನೇ. 'ನಾರಾಸ್ಯ ಜೀವ ಸಮೂಹಸ್ಯ ಅಯನಃ ಗತಿಃ ನಾರಾಯಣ' ಎಲ್ಲ ಜೀವಿಗಳಿಗೂ ಶ್ರೇಯಸ್ಸಿಗೆ ಪರಮೋಪಾಯವೂ ಮತ್ತು ಪರಮಗತಿಯೂ ಆಗಿರುವ ಪರಮಾತ್ಮನೇ ಪರಾತ್ಪರನೇ ನಾರಾಯಣ.

'ಅರ' ಎಂದರೆ ದೋಷ ನ ಎಂದರೆ - ದೋಷ ಗಂಧರಹಿತನಾದ ಪರಮಾತ್ಮನೇ ನಾರಾಯಣ.

'ನಾರ'- ಎಂಬ ಪದಕ್ಕೆ ಕಲ್ಯಾಣಗುಣಗಳು ಎಂಬ ಮತ್ತೊಂದು ಅರ್ಥವೂ ಉಂಟು ಈ ಎಲ್ಲ ಕಲ್ಯಾಣ ಗುಣಗಳಿಗೂ ಏಕಮಾತ್ರ ಆಶ್ರಯನಾಗಿರುವ ಪರಮ ಪುರುಷನೇ ನಾರಾಯಣ.

'ನಾರ' ಎಂದರೆ ಎಲ್ಲ ಜೀವಿಗಳ ಸೃಷ್ಟಿಗೂ ಮೂಲವಾದದ್ದು 'ಜಲತತ್ವ'. "ಆಪೋ ನಾರಾ ಇತಿ ಪ್ರೋಕ್ತಾಃ- ಎಂದು ಸ್ಪಷ್ಟಪಡಿಸಿದೆ.

ಶೇಷನಾರಾಯಣಶ್ರೀಮಾನ್ ಕ್ಷೀರಾರ್ಣವ ನಿಕೇತನ:
ನಾಗಪರ್ಯಂಕ ಮುತ್ಸೃಜ್ಯ ಹ್ಯಾಗತೋ ಮಧುರಾಂ ಪುರಿಂ

ಎಂಬ ಉಕ್ತಿಗಳಿಂದ ನಾರಾಯಣನೇ ಈ ಸೃಷ್ಟಿಗೆ ಮೂಲವಾದ ಜಲದಲ್ಲಿ ಪವಡಿಸಿದ್ದಾನೆ. ಎಲ್ಲ ಜೀವಗಳನ್ನು ಮತ್ತು ಪ್ರಕೃತಿಯನ್ನು ಶರೀರವನ್ನಾಗಿ ಹೊಂದಿರುವ ಆದಿ ಮೂಲನೇ 'ನಾರಾಯಣ'ಎಂಬುದು ಸ್ಪಷ್ಟವಾಗುತ್ತದೆ. ನಾಗ ಪರ್ಯಂಕದಲ್ಲಿ ಪವಡಿಸಿದ ಪರಮಾತ್ಮ ಮಧುರಾಪುರಿಗೆ ಬಂದು ಕೃಷ್ಣನಾಗಿ ಜನಿಸಿದನು ಎಂಬ ಉಕ್ತಿಯು ಅದೆಷ್ಟು ಸೊಗಸಾಗಿದೆ.

ಉಪನಿಷತ್ತಿನ ಈ ವಾಕ್ಯಗಳನ್ನು ಗಮನಿಸೋಣ.

ಹರಿಃ ಓಂ ಓ ಮಿತ್ಸಗ್ರೇ ವ್ಯಾಹರೇತ್ ನಮ ಇತಿ ಪಶ್ಚಾತ್ ನಾರಾಯಣಾಯೇತ್ಯು ಪರಿಷ್ಟಾತ್ ಓಮಿತ್ಯೇಕಾಕ್ಷರಂ ನಮ ಇತಿ ದ್ವೇ ಅಕ್ಷರೇ ನಾರಾಯಣಾಯೇತಿ ಪಂಚಾಕ್ಷರಾಣಿ ಏತದ್ವೈ ನಾರಾಯಣಾ ಸ್ಸಾಷ್ಟಾಕ್ಷರಂ ಪದಂ ಯೋಹವೈ ನಾರಾಯಣ ಸ್ಸಾಷ್ಟಾಕ್ಷರಂ ಪದಮಧ್ಯೇತಿ

ಅನಪಬ್ರಹವ ಸರ್ವಮಾಯು ರೇತಿ ವಿಂದತೇ ಪ್ರಜಾ ಪತ್ಸಂ ರಾಯಸ್ಪೋಽಕ್ಷಂ ಗೌಪತ್ಸಂ

ತತೋಽಮ್ನತತ್ವಮಶ್ನುತೇ ತತೋ ಮೃತತ್ವಮಶ್ನುತ ಇತಿ

ಯ ಏವಂ ವೇದ ಇತ್ಯುಪನಿಷತ್ - ಹರಿಃ ಓಂ. ಎಂದು ಓಂ ನಮೋ ನಾರಾಯಣಾಯ - ಎಂಬ ಅಷ್ಟಾಕ್ಷರೀ ಮಂತ್ರದ ಮಹಿಮೆಯನ್ನು ವ್ಯಕ್ತ ಪಡಿಸಿದೆ.

'ನಾರಾಯಣ ಎಂಬ ನಾಮದ ಸ್ಮರಣೆಯ ಪಾನಾಮೃತವೆನ್ನ ನಾಲಿಗೆ ಸಿಖಿಯಲ್ಲಿ' ಎಂದು ಪುರಂದರದಾಸರು ಹೇಳಿದ ಪದವನ್ನು ನಾವು ಸ್ಮರಿಸಿ ನಾವೂ ಸಹ ಆ ನಾರಾಯಣನನ್ನೇ ಸದಾ ಧ್ಯಾನಿಸೋಣ.

ಪ್ರಕೃತ ವಿಷಯಕ್ಕೆ ಬರೋಣ. ನಾರಾಯಣನ ಮಹಿಮೆಯನ್ನು ಅರಿತ ಪ್ರಹ್ಲಾದ ನನ್ನು ಒಮ್ಮೆ ಹಿರಣ್ಯಕಶಿಪುವು ರಾಜಸಭೆಯಲ್ಲಿ ಸಭಾ ಮಂಟಪದ ಒಂದು ಕಂಬವನ್ನು ಬಡಿದು "ಇಲ್ಲಿ ಇದ್ದಾನೆಯೇ ನಿನ್ನ ನಾರಾಯಣ"ಎಂದು ಕೇಳಿದನು. ಅದಕ್ಕೆ ಪ್ರಹ್ಲಾದನು ಧೈರ್ಯವಾಗಿ ಹೇಳುತ್ತಾನೆ. ಮಹಾವಿಷ್ಣು ಸರ್ವವ್ಯಾಪಿ,ಸರ್ವಂತರ್ಯಾಮಿ- ಎಲ್ಲೆಲ್ಲೂ ಇದ್ದಾನೆ ಈ ಕಂಬದಲ್ಲಿಯೂ ಇದ್ದಾನೆ ಎಂದನು. ಕುಪಿತನಾದ ಹಿರಣ್ಯಕಶಿಪು ಕಂಬವನ್ನು ತನ್ನ ಗಧೆಯಿಂದ ಹೊಡೆದು ಇಲ್ಲಿದ್ದಾನೆಯೇ ತೋರಿಸು ಎಂದಾಗ ಕ್ರೋಧಾ ವಿಷ್ಟ ನಾದ ಭಗವಂತ ಆ ಕಂಬವನ್ನೇ ಸೀಳಿ ಕೊಂಡು ನರ+ಸಿಂಹ ನಾಗಿ ಹೊರ ಬಂದನು.

ಸತ್ಯಂ ವಿಧಾತುಂ ನಿಜ ಭೃತ್ಸ ಭಾಷಿತಂ
ವ್ಯಾಪ್ತಿಂ ಚ ಭೂತೇಷ್ವ ಖಿಲೇಷು ಚಾತ್ಮನಃ
ಅದೃಶ್ಯತ ಅತ್ಯದ್ಭುತ ರೂಪ ಮುದ್ವಹನ್
ಸ್ತಂಭೇ ಸಭಾಯಾಂ ನ ಮೃಗಂ ನ ಮಾನುಷಂ

ಹೀಗಾಗುವುದೆಂದು ರಾಜನಾಗಲಿ, ಸಭೆಯಲ್ಲಿ ನೆರೆದ ಜನರಾಗಲಿ ನಂಬಿರಲಿಲ್ಲಿ ರಾಜ ಸಭೆಯಲ್ಲಿದ್ದವರೆಲ್ಲಾ ಈ ವಿಚಿತ್ರವಾದ ಉಗ್ರರೂಪವನ್ನು ಕಂಡು ಗಡ- ಗಡ ನಡುಗಿದರು. ನರಸಿಂಹ ಸ್ವಾಮಿಯು ಮೊದಲು ತಾನು ವಿಷ್ಣುವೇ ಎಂದು ಸ್ಪಷ್ಟಪಡಿಸಿಲು ತನ್ನ ಕೈಯಲ್ಲಿ ಶಂಖ ಚಕ್ರಗಳನ್ನು ಇಟ್ಟುಕೊಂಡು, ಹೊರ ಬಂದ ಇನ್ನೆರಡು ಕೈಗಳನ್ನು ಮಂಡಿಯ ಮೇಲಿಟ್ಟು ಕೊಂಡು,ಯುದ್ಧ ಮುದ್ರೆಯಲ್ಲಿ ಹಿರಣ್ಯಕಶಿಪುವನ್ನು ಮಲ್ಲಯುದ್ಧಕ್ಕೆ ಆಹ್ವಾನಿಸುತ್ತಿರುವ ಭಂಗಿಯಲ್ಲಿ ನಿಂತು ಕಾಳಗಕ್ಕೆ ಸಿದ್ಧನಾದ ನರಸಿಂಹ. ಬಳಿಕ ಒಬ್ಬ ಮಲ್ಲನಂತೆ ದ್ವಿಭುಜನಾಗಿ ನಿಂತ ಹಿರಣ್ಯ ಕಶಿಪುವಿಗೆ ಇದು ಅನಿರೀಕ್ಷಿತ ಎದೆಡವಡವಿಸುತ್ತಿದ್ದರೂ ಅದನ್ನು ತೋರ್ಪಡಿಸದೆ. ಹಿರಣ್ಯಕಶಿಪು ವೀರಾಗ್ರಣಿಯಂತೆ ಧೃತಿಗೆಡದವನಂತೆ ಕೈಯಲ್ಲಿ ಕತ್ತಿಯನ್ನು ಹಿಡಿದು ನರಸಿಂಹನ ಮೇಲೆ ಹರಿಹಾಯ್ದ ನರಸಿಂಹಸ್ವಾಮಿ ಅವನನ್ನು ಎಳೆದೊಡನೆ ಕೆಳಗೆ ಬಿದ್ದು ಬಿಟ್ಟನು ಅಷ್ಟೇ ಅಲ್ಲ ಪ್ರಜ್ಞಾಹೀನ ನಾದನು. ಕೂಡಲೇ ನರಸಿಂಹ ಅವನನ್ನು ತನ್ನೆ ರಡೂ ಕೈಗಳಿಂದ ಎತ್ತಿ ಕೊಂಡು ತನ್ನ ತೊಡೆಯ ಮೇಲೆ ಮಲಗಿಸಿ ಕೊಂಡನು ಪ್ರಜ್ಞೆ ತಪ್ಪಿ ಬಿದ್ದಮಗು ವನ್ನು ತಂದೆಯಾದವನು ಎತ್ತಿ ತೊಡೆಯ ಮೇಲೆ ಮಲಗಿಸಿಕೊಳ್ಳುವಂತೆ. ಭಗ ವಂತ ಅದೆಷ್ಟು ವಾತ್ಸಲ್ಯ ಪರನಾದವನು! ಊಹಿ ಸಲು ಅಸಾಧ್ಯವಾದುದು.ಕೂಡಲೇ ನರಸಿಂಹ ಹರಿತ ವಾದ ಕತ್ತಿಯ ಅಲಗಿ ನಿಂತ ಹರಿತವಾಗಿದ್ದ ತನ್ನ ಉಗುರು ಗಳಿಂದಲೇ ತನ್ನ ತೊಡೆಯ ಮೇಲೆ ಮಲಗಿದ್ದ ಹಿರಣ್ಯಕಶಿಪು ವಿನ ಹೊಟ್ಟೆಯನ್ನು ಬಗೆದ ಅಷ್ಟಕ್ಕೆ ಮುಗಿಯಿತೇ? ಇಲ್ಲ. ಹೊಟ್ಟೆ ಯೊಳನಿಂದ ಹಿರಣ್ಯಕನ ಉದ್ದವಾದ ಕರುಳು ನೃಸಿಂಹನ ಉಗುರುಗಳಿಗೆ ಸಿಕ್ಕಿ ಕೊಂಡು ಹೊರಬಂದಿತು. ನರಸಿಂಹ ಅದನ್ನು ಕಟಾಕ್ಷಿಸಿದ. ಭಗವಂತನ ಸ್ಪರ್ಷ ಮಾತ್ರದಿಂದಲೇ ಅದು ಹಿರಣ್ಮಯವಾಗಿ ಬಿಟ್ಟಿತು. ಆ ಕರುಳನ್ನೇ ತನ್ನ ಕೊರಳಿಗೆ ಧರಿಸಿಕೊಂಡು ಆಂತ್ರಮಾಲಾ ವಿಭೂಷಿತನಾದ ಭಗವಾನ್ ಶ್ರೀ ನರಸಿಂಹ. ಅಂತಹ ನರಸಿಂಹ ರೂಪನಾದ ಭಗವಾನ್ ವಿಷ್ಣುವು ನಮ್ಮೆಲ್ಲರಿಗೂ ಜಗತ್ತಿಗೂ ಸನ್ಮಂಗಳವನ್ನುಂಟು ಮಾಡಲಿ ಎಂದು ಪ್ರಾರ್ಥಿಸೋಣ.

ಗರ್ಜಂತಂ ಗರ್ಜಯಂತಂ ನಿಜ ಭುಜ ಪಟಲ ಸ್ಫೋಟ ಯಂತಂ ಹಟಂತಂ
ರೂಪ್ಯಂತಂ ತಾಪಯಂತಂ ದಿವಿಭುವಿದಿತಿ ಜಂ ಕ್ಷೇಪಯಂತಂಕ್ಷಿಪಂತಾ
ಕ್ರಂದಂತಂ ರೋಷಯಂತಂ ದಿಶಿ ದಿಶಿ ಸತತಂ ಸಂಹರಂತಂ ಭರಂತಂ
ವೀಕ್ಷಂತಂ ಘೂರ್ಣಯುತಂ ಶರನಿಕರಶತೈಃ ದಿವ್ಯ ಸಿಂಹಂ ನಮಾಮಿ.

# ಹರಿದಾಸರು ಬೆಳಗಿಸಿದ ಭಾವದೀಪ

- ಶ್ರೀ ರಾಜಾ. ಎಸ್. ರಾಜಗೋಪಾಲಾಚಾರ್ಯರು

ಎಷ್ಟು ಪುಣ್ಯ ಮಾಡಿದ್ದವು ಈ ವಸ್ತುಗಳು-

ದೀಪಸ್ತಂಭ, ಎಣ್ಣೆ - ತುಪ್ಪ ಬತ್ತಿ ಕತ್ತಲೆ ಕಳೆಯುವ ಅದ್ಭುತ ಸಾಧನಗಳು

ಪರಮಾತ್ಮನ ಪಕ್ಕದಲ್ಲೇ ಇರುವಂಥ ಸೌಭಾಗ್ಯ.

ನಮ್ಮ ಮನಸ್ಸು ಕೆಲವು ಕ್ಷಣ ದೇವರನ್ನು ನೆನೆಯಬಹುದು.

ಈ ದೇಹ ಕಷ್ಟಪಟ್ಟುಕೊಂಡು ಕೆಲವು ಗಂಟೆಗಳ ಕಾಲ ದೇವರ ಚಿಂತನೆಯಲ್ಲಿ ಒಮ್ಮೊಮ್ಮೆ ಇರಬಹುದು. ಆದರೆ ಈ 'ದೀಪವಿದೆಯಲ್ಲ ಅದು ದಿನಗಟ್ಟಲೆ 'ಶ್ರೀ ಹರಿ'ಯ ಬಳಿಯಲ್ಲಿ ಸೇವೆ ಸಲ್ಲಿಸುತ್ತದೆ. ಬದರಿಯಲ್ಲಿ ಹಚ್ಚುವ ದೀಪ ಆರು ತಿಂಗಳು ಕಳೆದ ನಂತರವು ಇರುತ್ತದೆ. ಎಂಥ ಸೋಜಿಗ ಅದಕ್ಕೆ ವೇದಗಳು ಉದ್ಘರಿಸಿದ್ದು"ಅಸತೋಮಾ ಸದ್ಗಮಯ। ತಮಸೋಮಾ ಜ್ಯೋತಿ ರ್ಗಮಯ। ಕತ್ತಲು ಕರಗಲಿ; ಬೆಳಕಿನ ಕಡೆ ನಡೆಯೋಣ. ದೇವಾಲಯಗಳಲ್ಲಿ ಲಕ್ಷದೀಪೋತ್ಸವ ಮಾಡುತ್ತಾರೆ. ಕೋಟಿ ಸೂರ್ಯ ಸಮಪ್ರಭನಿಗೆ ಲಕ್ಷ ಪುಟಾಣಿ ದೀಪಗಳು ಎಂಬುವದಾಗಿ ಶಾಸ್ತ್ರ ಹೇಳುತ್ತವೆ. ಸೂರ್ಯ ಚಂದ್ರರೇ ನಿನ್ನ ನಯನಗಳು ಇಂಥಹ ಅದ್ಭುತ ಗಾತ್ರನಿಗೆ ನಾವು ಹಚ್ಚುವ ಪುಟ್ಟದೀಪ ಎಷ್ಟರ ಮಟ್ಟಿಗೆ ಬೆಳಕು ಬೀರಬಲ್ಲದು?

ಪ್ರಾಯ! ಲೈಟ್ ಬಿಲ್ ತೆಗೆದುಕೊಳ್ಳದೇ ಬೆಳಕಿನ ದೊಡ್ಡ ಮೂಲವಾದ ಸೂರ್ಯ ಮತ್ತು ಚಂದ್ರನನ್ನು ಕೊಟ್ಟ ಪ್ರಪಂಚದ ಶ್ರೀಮಂತ ದಣಿ ಶ್ರೀಮನ್ ನಾರಾಯಣ.

ದೀಪ ಶುಭದ ಸಂಕೇತ. ದಾಸರು ದೀಪದ ಮಹತ್ವ ಬಲ್ಲವರು. 'ಆರತಿ' ಮಾಡುವಾಗ ಇದೆ ವಿಶೇಷತೆ ಬಗ್ಗೆ 'ಬೆಳಕು' ಚೆಲ್ಲುತ್ತಾರೆ. ಪ್ರಸನ್ನ ವೆಂಕಟದಾಸರೆನ್ನುತ್ತಾರೆ -

ಮಂಗಳ ಬಾಯೊಳು ಮೊತ್ತ ಕಟ್ಟಿದಗೆ
ಮಂಗಳಾವಯದ ಮುಚ್ಚಿದ
ಮಂಗಳ ಕೋರೆಲಿ ಪ್ರಿಯಳಾ ಇಟ್ಟವಗೆ
ಮಂಗಳ ಸಖದ್ಯಸು ಕುಟ್ಟಿದಗೆ ॥೧॥

ಮಂಗಳವೆತ್ತಿ ಬಿಂಕವ ಕಳೆದಗೆ
ಮಂಗಳ ಭೂಪರನಳಿದವಗೆ
ಮಂಗಳಗೋಸುಗ ಖಳರ ಹನನಿಗೆ
ಮಂಗಳ ಅಂಗನೇರಾಂಬರ ಕಳೆದಗೆ ॥೨॥

ಮಂಗಳಾಂಗಕೆ ಉಡಿಗೆಯನೊಲ್ಲದಗೆ
ಮಂಗಳ ಸಿಲ್ಕುವ ನೊಲ್ಲದಗೆ
ಮಂಗಳ ಪ್ರಸನ್ವೆಂಕಟೇಶ ಬಲ್ಲಿದ
ಮಂಗಳಮಯ ಕೈವಲ್ಯದಗೆ ॥೩॥

ಮತ್ತೊಂದು ಪದ ಅವರದ್ದು ಹೀಗಿದೆ -
ಮಂಗಳ ಮಂದಿರಗೆ ಮಂಗಳ ಮುರಾರಿಗೆ
ಮಂಗಳ ತಿಮ್ಮಯ್ಯಗೆ ಜಯ ಮಂಗಳಾ
ಶೇಷಗಿರಿವಾಸಗೆ ದಾಸ ಭಯ ನಾಶಗೆ
ತೋಷ ಪೂರ್ಣ ದಾಸಗೆ ಪ್ರಸನ್ವೇಂಕಟೇಶಗೆ।

ಈ ಕೃತಿಯ ಸೊಬಗು ನೋಡಿ ಮಂಗಳ ಅಂಜನಗಿರಿ ಪತಿಗೆ ಶುಭ ಮಂಗಳವೆನ್ನಿ ಸಿರಿಪತಿಗೆ।

ಪ್ರಸನ್ನ ವೆಂಕಟದಾಸರು ಹೃದಯದಿಂದ ಮಾಡಿದ ಆರತಿ -

ಮುಪ್ಪುರದ ನಾರಿಯರ ಮನವ ಗೆದ್ದವಗೆ
ತಪ್ಪದೆ ಕಲಿಬಲವ ತರಿದಾತಗೆ
ಸರ್ಪಗಿರಿಯಲಿ ನಿಂತ ನಿತ್ಯ ಸುಖದಾತೆಗೆ
ಶ್ರೀ ಪ್ರಸನ್ವೇಂಕಟೊಡೆಯನೆನಿಪಗೆ ॥
ದಾಸರೆಂಬೋ ಮಾತು -
ಮಂಗಳ ಮಹಿಮೆಗೆ ನೀರಜನಯ
ನಂಗಳ ಬಹು ಪಸರಿಸಿ ಭೃಂಗಾಳ
ಕಂಗಳೆಯರು ಸ್ಮಿತ ವದನಂಗಳೆಯರು ಸ್ಮಿತವದ
ನಂಗೆಳೆಯರು ಶಿರಿ ವೆಂಗಳಪತಿಗಾರುತಿಯ ಬೆಳಗಿರಿ॥
ಮಂಗಳ ಮೂರುತಿಗೆ ಮಂಗಳಾರತಿ
ನೀರಾಜವನೆತ್ತಿರೋ ತಿಮ್ಮಯ್ಯಗೆ
ವಾರಿಜೋದ್ಭವೇರಕಾಮರಯ್ಯಗೆ

ಸುಶ್ರಾವ್ಯವಾದ ಜನಪ್ರಿಯ ಗೀತೆಯಲ್ಲಿ ದಾಸರೆನ್ನುವುದು ನೋಡಿ

ಪಂಜು ಪಿಡಿವೆನೋ ಶ್ರೀನಿವಾಸಾ ನಿ
ನ್ನೆಂಜಲ ಬಳಿದುಂಬೆ ಶ್ರೀನಿವಾಸಾ ನಾ

ಸಂಜೆ ಉದಯಕೆ ಶ್ರೀನಿವಾಸಾಕಾ
ಆಂಜೆಯ ಪಿಡಿವೇ ಶ್ರೀನಿವಾಸಾ

ವಾರಿಶೇಷಾಚಾರ್ಯರು 'ಅದ್ಭುತ ರಹಸ್ಯ' ವೊಂದನ್ನು ಬಿಚ್ಚಿಡುತ್ತಾರೆ. ಶ್ರೀನಿವಾಸ ಕಲ್ಯಾಣಕ್ಕೆ ಎಲ್ಲಾ ದೇವತೆಗಳಿಗೆ ವಿವಾಹ ಕಾರ್ಯದ ಜವಾಬ್ದಾರಿಯನ್ನು ಕೊಡುತ್ತಿರುವಾಗ ದೀಪಾದಿಗಳ ಶುದ್ಧ ಮಾಡಲಿಕ್ಕೆ 'ಸೂರ್ಯ'ನನ್ನು ನೇಮಿಸುತ್ತಾರೆ.

ಕೇಳಿ ಮಾಡನು ಶ್ರೀನಿವಾಸ ತಾನು ಬ್ಯಾಗ
ಪೇಳಿದ ಎಲ್ಲರಿಗೆ ಕೆಲಸವನು।
ದೀಪಾದಿಗಳ ಶುದ್ಧ ಮಾಡಲಿಕ್ಕೆ ನಮ್ಮ ಶ್ರೀಪತಿ
ಸೂರ್ಯ ಕರನ ಮಾಡಿದ ಈ ಪರಿತಾರಿ ವೇಂಕಟೇಶ
ಪೇಳಲು ಎಲ್ಲಾ ವ್ಯಾಪಾರ ಮಾಡಲಿಕ್ಕೆ ನಿಂತರಾಗ।

ಸಾಧಕರಾದ ಶ್ರೀವಾರಿ ಶೇಷಾಚಾರ್ಯರು ತಿಮ್ಮಪ್ಪನಿಗೆ ಮಾಡಿದ ಆರತಿಯ ಸನ್ನಿವೇಶವನ್ನು ಬಣ್ಣಿಸುವ ಪರಿ ಹೀಗಿದೆ : -

ಸೃಷ್ಟಿಕರ್ತ ವಿಶಿಷ್ಟ ಗುರು ಪರ
ಮೇಷ್ಠಿಯ ಬ್ಯಾಗ ದಿಟ್ಟತನದಲಿ
ವಿಷ್ಣ ರೂಪಿಯ ಮದಿನಿ ಮಾಡಲು
ಅಷ್ಟ ವರ್ಗವ ಮಾಡಿದಾಗಲೆ
ಕೃಷ್ಣಗಾರತಿಯ ಬೆಳಗ್ಯಾರು
ಕೊಪ್ಪರಿ ಒಳಗೆ ಸುಗಂಧ ಜಲ
ವಿಪ್ರವರರು ರಾಶಿ ಧಾರಗೆ
ತಪ್ಪದಲೇ ಸರಸ್ವತಿ ಮುಖರೆಲ್ಲಾ ಒಪ್ಪುತಲಿ
ಗಾಯನವ ಮಾಡುತ ಸರ್ಪಶಯನಗೆ
ರತ್ನ ಪೀಠದಲ್ಲಪ್ಪ
ತಿಮ್ಮಪ್ಪನಿಗೆ ಶ್ರೀಸಹಿತಗೆ
ಕರ್ಪೂರದಾರುತಿಯ ಬೆಳಗ್ಯಾರೋ

ಆಚಾರ್ಯರು ಮುಂದುವರೆದು ಓಕುಳಿಯಾರತಿಯ ಸಂದರ್ಭವನ್ನು ಚಿತ್ರಿಸುತ್ತಾರೆ.

ಅರಿಶಿನ ಎಣ್ಣೆ ಬಾಲೆಯರು ಬಲು ಹರ್ಷದಿಂದಲಿ ಮೈಗೆ ಹಚ್ಚಿ ಸರಸಿ ಜಾಕ್ಷಿಯರೆಲ್ಲರನ ಹಟು? ಗೆ ವರದೊಳಗೆ? ಕುಳ್ಳರಿಸಿ ದೇವರ ವರ ಕನಕ ಪಾತ್ರೆಯಿಂದ ಬಿಸಿನಿರು ಎರೆದೊ ಕುಳಿ ಯಾರತಿ ಯಾರಾಗ? ಕರದಿಂ ಹಸೆಯ ಜಗುಲಿಗೆ। ಶೋಭಾನೆ ಬಂಗಾರದ ಪಾತ್ರೆಯನ್ನು ಬಿಸಿ ನೀರು ಹಾಕಲು ಉಪಯೋಗಿಸುತ್ತಿದ್ದರು ಎಂಬ ಸಂಗತಿ ಅಂದಿನ ಕಾಲದ ವೈಭೋಗವನ್ನು ತೋರಿಸಿಕೊಡುತ್ತದೆ.

ಮತ್ತೊಂದು ಪದವ ನೋಡಿ -

ಮಂಗಳಾರುತಿಯನು ಅಂಗನೆ
ಮಾಡಿದಳು ರಂಗಗೆ ಪದ್ಮಿನಿ ಸರಿತಗೆ
ಸಹಿತ ನಿಗರ್ಪಣೆಯು
ಶುಭಾಂಗ ಗಗನನು ಮಾಡಿದನು

ಅದ್ವೈತ ಹರಿದಾಸರಲ್ಲೊಬ್ಬರಾದ ಕೆಲ್ಲಂಗೆರೆ ತಿಮ್ಮಪ್ಪ ದಾಸರ ಮಗ ಅರಸಿಕೇರೆ ರಾಮದಾಸರ ಕೃತಿ ದೀಪದ ಬಗ್ಗೆಯದ್ದಾಗಿದೆ.

ದೀಪವನು ಬೆಳಗುವನು ದೇವ ನೀ ನೋಡು।
ವ್ಯಾಪಿಸುವ ತಿಮಿರವನು ಪರಿಹರಿಸಿ ಕೊಂಬಂಥ॥
ಸಕಲ ದೇಹಾತ್ಮನಲ್ಲಿ ತಿಲತೈಲವಾಗಿರುವ।
ಅಖಿಳ ಶೃತಿವರ್ತಿಯಿಂ ಸಮ್ಮಿಳಿತವಾಗಿ
ಪ್ರಕಟದಿಂದಲೇ ಮೂರುರೂಪದೊಳು ಒಂದಾಗಿ
ವಿಕಸ ರೂಪದಿ ಮೂರು ಲೋಕಗಳ ಬೆಳಗುತಿಹ ॥
ಜ್ಞಾನವೇ ಗೋಘೃತವು ಮಾತುಗಳೆ ವರ್ತಿಗಳು
ನೀನದಕೆ ಮೂಲಕಾರಣ ವಸ್ತುವೆನಿಸಿ
ಸ್ವಾನುಕೂಲಗಳಿಂದ ಒಂದಾಗಿ ಚಿತ್ತದೊಳು
ಲೀನವಾಗಿರುವ ತಿಳಿ ಘೃತವು ಸೇರಿರುವ॥
ಎನ್ನ ಜೀವವೇ ದೀಪ, ನಿಮ್ಮ ಪಾದವೇ ಬ್ರಹ್ಮ
ಭಿನ್ನ ಭಾವವೇ ಅಳಿದ ಪೂರ್ಣ ರೂಪದೊಳು
ನಿನ್ನೊಳಗೆ ನಿಲಿಸೆನ್ನ ಪುಣ್ಯ ಸಮವೆಂದೆನಿಸು
ಸ್ವರ್ಗಮಯ ತಿರುಪತಿ ವೆಂಕಟರಮಣ

ಉಡುಪಿಯ ವರಾಹ ತಿಮ್ಮಪ್ಪದಾಸರು ಶ್ರೀನಿವಾಸನ ಪೂಜಾ ಕ್ರಮದ ಬಗ್ಗೆ ವಿವರಿಸುವಾಗ -

ಧೂಪಮಾಘ್ರಾಪಯ ದೀಪದ ದರುಶನವು
ಆಪಷ್ಟು ಸವೋಪಚಾರಗಳು...
ಪೂಜೆಯ ಕೈಕೊಳೊ ಮೂಜಗದೊಡೆಯನೆ
ಮೂಜಗದೊಳು ನೀನು ತೇಜವುಳ್ಳವನಾಗಿ
ಬೇಗದಿ ಮಂಗಳ ಪದಗಳ ಹೇಳಿ ಲೇ
ಸಾಗಿ ಎತ್ತುವ ಅಮೋಘದಾರತಿಗಳ

ತಿಮ್ಮಪ್ಪದಾಸರ ಮತ್ತೊಂದು ಕೃತಿಯಲ್ಲಿ ಎಣ್ಣೆ ಮಜ್ಜನ ಮಾಡು ಸನ್ನಿವೇಶ ಆಗ -

ಬೆಟ್ಟ ದೊಡೆಯನೆನಿಸಿ ದೃಷ್ಟಿಗೋಚರವಾದ ಶ್ರೀ
ಕೃಷ್ಣ ಮಾ ಲಕ್ಷುಮಿಗೆ ಆರತಿಯ ಎತ್ತಿರೆ
ವರಮಹಾಲಕ್ಷುಮಿಗೆ ವರಾಹ ತಿಮ್ಮಪ್ಪಗೆ
ಅರಿಶಿನದೆಣ್ಣೆಯ ರಚಿಸಿದಿ ಪರಿಯು॥
ಪೂಜೆಯೇ ಮಾಡಿಯೇ ಮೂಜಗದೊಡೆಯಗೆ
ವ್ಯಾಜ್ಯವ  ಮಾಡದೇ ನೈವೇದ್ಯಕ್ಕೆ ಇಡಲು
ಮಾಡದೆ ಉಂಬಂತರಂಗದ ಪರಿಯೊಳು
ಆ ಜನಾರ್ಧನನಿಗೆ ಮಂಗಳಾರುತಿಯ ॥
ಅಸುರವಾಗಿಹ ಆರತಿ ಬೆಳಗಲು
ದಾಸರೊಳಾವೇಶವಾದನ ಹರಿಯು
ಲೇಸಕಾಣಿಸಿ ಮುಂದೆ ಸಂತೋಷಯೀವೆನು
ಭೂಸುರ ಭೋಜನವಾಗಲೆಂದೇನುತ ॥

ಇನ್ನು ಪುರಂದರದಾಸರ ಆರತಿ ಅಧ್ಯಾಯಕ್ಕೆ ಹೋಗಿ ಅಲ್ಲಿನ ದೀಪವನ್ನು ನೋಡಿ ಬರೋಣ.

೧) ನಳನಳಿಸುವ ನಾನಾ ಪುಷ್ಪಗಳು ಶ್ರೀತುಳಸಿ
ಹೊಳೆವ ಕಿರೀಟ  ಕೊರಳಲಿ ಪದಕ
ನಳಿನಾಕ್ಷನಿಗೆ ಕರ್ಪೂರದಾರತಿಯನೆತ್ತಿ
ಕಳೆಯ ನೋಡಲರಿಯದ ಪಾಪಿ ತನುವಿನಲಿ ॥
೨) ಪಂಕಜಮುಖಿಯರೆಲ್ಲರೂ ಬಂದು ಲಕ್ಷ್ಮೀವೆಂಕಟ
ರಮಣಗಾರುತಿ ಎತ್ತಿರೆ
೩) ತಪ್ಪುಗಳನ್ನೆಲ್ಲ ನೀನೊಪ್ಪಿಕೊಳ್ಳೋ ನ
ಮ್ಮಪ್ಪ ಕಾಯಬೇಕು ತಿಮ್ಮಪ್ಪ ನೀನೆ.... ।
ಏಕಾರತಿ - ಧೂಪಾರತಿಯ- ಎಂದು
ಶ್ರೀಕಾಂತ ನಿನಗೆ ನಾ ಮಾಡಲ್ಲಿಲ್ಲ.....॥
ಮಂಗಳಾರುತಿಯ ನಾ ಮಾಡಲಿಲ್ಲ ಜಯ
ಮಂಗಳವೆನ್ನುತ ಪಾಡಲಿಲ್ಲ....

**ತಿಮ್ಮಪ್ಪದಾಸರು (ಕ್ರಿ.ಶ. ೧೭೭೦ - ಕ್ರಿ.ಶ. ೧೮೬೦ ):**

ತಿರುಪತಿಯ ತಿಮ್ಮಪ್ಪನನ್ನೇ ನಮ್ಮ ಬಾಳಿನ ಬೆಳಕು ಎಂಬುದಾಗಿ ಭಾವಿಸಿದ ವಿಚಾರ  ಅವರ ಈ ನುಡಿಯಲ್ಲಿ ಹೀಗಿದೆ -

ಬೆಳಗುತಿದೆ ಬೆಳಗುತಿದೆ ಭಾನುವಿನ ಬೆಳಕು
ತಳತಳಿಸಿ ಸರ್ವವನು ತೇಜಿಸುವ ಬೆಳಕು॥
ಅಮಿತಾಂಡಕೋಟಿಗಳನಾಳಿ ಬೆಳಗುವ ಬೆಳಕು
ತಿಮಿರ ತಂಡಗಳನ್ನು ತೆಗೆದಿಡುವ ಬೆಳಕು
ಸುಮನಸರೂಪಾಗಿ ಶೋಭಿಸುತಿಹ ಬೆಳಕು
ವಿಮಲವಾಗಿಯೇ ತಾನು ಒಲಿದಿರುವ ಬೆಳಕು ॥
ಮನೆಮನೆಗಳಿಭೀ ಮುಖದಿ ಮೂಡಿ ನಿಂದಿಹ ಬೆಳಕು
ಮುನಿಮನೋಜ್ಞತೆಯಾದ ಮುಖ್ಯತಮ ಬೆಳಕು
ಸನಕಾದಿಗಳು ತಾವೇ ಸಂಪಾದಿಸಿದ ಬೆಳಕು.
ಕೊನೆ ಮೊದಲ ನೋಡಿದರೆ ಕಾಣದಿಹ ಬೆಳಕು॥
(ಮಧ್ಯದಲ್ಲಿ ಇನ್ನು ಎರಡು ನುಡಿಗಳಿವೆ)
ಪರಮಪಾವನವಾಗಿ ಪಾಪವಳಿಯುವ ಬೆಳಕು
ಶರಣಾಗತರನು ಕಾಯುವ ಸುಲಭಸುಖ ಬೆಳಕು
ತಿರುಪತಿಯ ವಾಸವನು ತಾಳಿಕೊಂಡಿಹ ಬೆಳಕು
ವರದವೆಂಕಟರಮಣ ನಾಮ  ರವಿ ಬೆಳಕು ॥

ದಿವಗಂತ ಸರಗುರು ವೆಂಕಟವರದಾರ್ಯರ ವಿಶಿಷ್ಟ ರಚನೆಯೊಂದು ಹೀಗಿದೆ -

ಸರ್ವಂ ಸಹಾದೀಪ ಸರ್ವಚೇತನ ದೀಪ।

ಸರ್ವಾಪರಾಧವ ನಿರ್ವಹಿಸುವ ಭೂಪ।

(ಕ್ಷಮಿಸೆನ್ನ ದೋಷಗಳ ಕ್ಷಿಪ್ರದಿ ಹರಿ ।

ಕ್ಷಮೇಯನ್ನು ಧರಿಸಿಗ ಕಮಲಾನಿವಾಸನೇ)

ವಾರಿಶೇಷಾಚಾರ್ಯರು ಶ್ರೀನಿವಾಸನ ಕಲ್ಯಾಣದಲ್ಲಿ ದಾಖಲಿಸಿರುವ ವಚನವನ್ನೊಮ್ಮೆ ಗಮನಿಸಿ -

ಕೆಲಸದ ಹಂಚಿಕೆ ವಚನ (ಶ್ರೀನಿವಾಸ ದೇವರ ವಿವಾಹ ಸಂಬಂಧ)

ಇನ್ನು ಚಂದ್ರಮನೆ ಕೇಳ್ವನ್ನುತರ ದೀವಟಿಗೆ ಚೆನ್ನಾಗಿ ಪಿಡಿವುದಕೆ ಚೆನ್ನಿಗನು ನೀನು ।

ಶ್ರೀ ಅನಂತಾದ್ರಿಯ ಅನಂತಾಚಾರ್ಯರು ವೆಂಕಟೇಶ ಪಾರಿಜಾತದಲ್ಲಿ ಶ್ರೀನಿವಾಸನಿಗೆ ಸುಂದರವಾದ ಲಾವಣ್ಯವತಿಯರಾದ ನಾರಿಯರು ಮಾಡಿದ ‘ಆರತಿ’ ಯ ಶೈಲಿಯನ್ನು ಹೀಗೆ ಬಣ್ಣಿಸುತ್ತಾರೆ.

...ಹೀಗೆಂದು ಆರತಿಯ ಬಾಗಿ ಬಳಕುತ

ಮಾಡಿ ಸಾಗಿದರು ನಾರಿಯರು...।

ಸತಿಯಿಂದ ಶೋಭಿಸಿದ ಶ್ರೀನಿವಾಸನಿಗೆ...

ನೋಡಿ ನಾರಿಯರಾಗ ಕೂಡಿ ಲಕ್ಷ್ಮೀಯ ಮುಂದೆ ಮಾಡುತಲಿ

ಆರತಿಯ ಮಾಡಿದರು
ಹರಿಯ ಕೊಂಡಾಡಿ  ಪಾಡುತಲಿ।

ಸಾಕ್ಷಾತ್ ಲಕ್ಷ್ಮೀದೇವಿಯನ್ನು ಮುಂದೆ ಮಾಡಿ ನಾರಿಯರು ಆರತಿ ಎತ್ತಿದರು. ಅಂದರೆ ಎರಡನೇ ಹೆಂಡತಿಗೆ ಮೊದಲನೇ ಹೆಂಡತಿಯಿಂದ ಮಂಗಳಾರತಿ.

ಅನಂತಾದ್ರೀಶರ ಶ್ರೀ ವೆಂಕಟೇಶ ಪಾರಿಜಾತದಲ್ಲಿ ಮತ್ತೊಂದು ಇಂತದೇ ಪ್ರಸಂಗದಲ್ಲಿ..

ಮುತ್ತಿನ ಆರತಿ ತಂದು ಅರ್ಥಿಯಿಂದ ಬೆಳಗಿದರು।
ಮುತ್ತಿನ ಅಕ್ಷತೆಯನ್ನಿಟ್ಟು ಮತ್ತೈದೆರೆಲ್ಲ ॥

ಇನ್ನೊಂದು ಸನ್ನಿವೇಶದಲ್ಲಿ -

ಮಂದಗಮನೆಯರಿಂದ ತಂದಿತ್ತ ಕಸ್ತೂರಿ
ಗಂಧ ಪರಿಮಳದಿಂದ ಛಂದಾಗಿ ಮೈಗೊರೆಸಿ
ಮುಂದಕ್ಕೆ ಎರೆವುತಿರೆ ತಂದಳಾ ರತಿದೇವಿ
ಛಂದದಾರತಿ ಆಗ ಇಂದಿರಾದೇವಿ ಅವ
ಆಂದ ಒಡಗೂಡಿ ಮುಕುಂದನ ಪಣೆಗೆ ಮುದ
ದಿಂದ ಕುಂಕುಮವಿಟ್ಟು ಮುಂದೆ ಆರತಿ ಬೆಳಗಿ
ಮುಂದೆ ಮತ್ತೆರೆದು ತ್ವರೆಯಿಂದ ಹರಸಿದಳಾಗ ॥

ನಿತ್ಯಾನುಸಂಧಾನಕ್ಕೆ ಗೊತ್ತಾಗಿರುವ ಪ್ರಬಂಧಗಳಲ್ಲಿ ತಿರುಪಲ್ಲಾಂಡಿಗೆ ಆಗ್ರಸ್ಥಾನ. ಶ್ರೀನಿವಾಸ ದೇವರಿಗೆ ಆರತಿ ಬೆಳಗುವಾಗ ಇದನ್ನು ಹೇಳುತ್ತಾರೆ. ಶ್ರೀ ವೈಷ್ಣವದಾಸರಾದ ಪೇರಿಯಾಳ್ವಾರ್‌ರ ಕೊಡುಗೆಯಿದು.

ಪೊಯ್‌ಗೈ ಆಳ್ವಾರರು ಹೇಳಿದು (ಕನ್ನಡ ಅನು: ಶ್ರೀಮಾಸ್ತಿವೆಂಕಟೇಶ ಅಯಂಗಾರ್:)

ನೆಲವೆ ಹಣತೆಯಾಗಿ ಹರಹಿದ ಕಡಲು ನೆಯ್ಯಾಗಿ (ಎಣ್ಣೆ)

ಬಿಸುಗದಿರ ಸೂರ್ಯನೆ ಸೆಂಡರ ಕೂಡಿಯಾಗಿರಲು।

ಸಿರಿಕೃಷ್ಣ ಅಂಕಿತದಿಂದ ಶೋಭಿತರಾದ ಶ್ರೀವ್ಯಾಸ ರಾಜರು ಶ್ರೀನಿವಾಸನ ದೇವಾಲಯಕ್ಕೆ ಹದಿನಾಲ್ಕು ಸಾವಿರ ಸರ್‌ಪಣಗಳನ್ನು ಕೊಟ್ಟು ಪ್ರತಿ ವರ್ಷವು ವಿಶೇಷ ದಿನಗಳಲ್ಲಿ ಒಟ್ಟು ೩೭೫೪ ಅಷ್ಟಪದಿಗಳನ್ನು ದೇವರಿಗೆ ಅರ್ಪಿಸುವ ವ್ಯವಸ್ಥೆ ಮಾಡಿದ್ದಾರೆ. ಇದರಲ್ಲಿ ದೀಪಾವಳಿ ಹಾಗೂ ದೀಪದ ಮಾಸ ಕಾರ್ತಿಕೋತ್ಸವವು ಸೇರಿವೆ.

ಬ್ರಹ್ಮೋತ್ಸವದಲ್ಲಿ ಶ್ರೀನಿವಾಸ ದೇವರ ಮುಂದೆ ನಿಂತ ಪಂಜು ಹಿಡಿದವರನ್ನು ಕುರಿತು ಶ್ರೀ ವಿಜಯರಾಯರು -

ಭಾಗವತರು ಸಮ್ಮೇಳದಿ ಕುಣಿದೊಲಿದಾಡೆ।
ಸಾಲು ಪಂಜಿನ ಗುಂಜಿ ಛತ್ರಚಾಮರ ಧ್ವಜಡಾಲುಗಳಿಂ ಮುಪ್ಪಿರಲು ॥

ದೀಪ ಹಚ್ಚಿದರೆ ಏನು ಸಿಗುತ್ತದೆ? -

ದೀಪ ಸಂಯೋಜನಾತ್ ಜ್ಞಾನಂ ಪುತ್ರಲಾಭೋ ಭವೇದ್ರವಂ

ಶ್ರೀ ರಾಯರ ಸ್ತೋತ್ರದ ಈ ಮಾತು ನಿಜವಾ?

ಹೌದು, ಅಕ್ಷರಶಃ ನಿಜ !

ಶ್ರೀ ರಾಯರ ಪೂರ್ವಾಶ್ರಮದ ಅಪ್ಪ - ಅಮ್ಮ ಅಂದು ತಿರುಪತಿಯಲ್ಲಿ ದೀಪ ಹಚ್ಚಿದ ಕಾರಣದಿಂದ ಹುಟ್ಟಿದ ಮಗುವೇ ವೆಂಕಟನಾಥ. ಇದಕ್ಕೆ ಪ್ರತಿಯಾಗಿ ರಾಯರು ನಿರ್ದಿಷ್ಟ ಸಮಯದವರೆಗೆ ಉರಿಯುವ ದೀಪ ಹಚ್ಚಲಿಲ್ಲ. ನಿರಂತರವಾಗಿ ಸಜ್ಜನರಿಗೆ ದಾರಿತೋರುವ ದೀಪ ಹಚ್ಚಿದರು. ಅದೇ ಶ್ರೀ ರಾಯರ ಗ್ರಂಥಗಳೆಂಬ ಭಾವದೀಪ. ಧೀರ ವೇಣುಗೋಪಾಲ ಅಂಕಿತ ರಾಯರ ಮಹಿಮೆಯಿದು. ಆಧುನಿಕತೆಯ ವೇಗಕ್ಕೆ ದೇಶದ ಸರಿಸುಮಾರು ಗುಡಿಗಳು ವಿದ್ಯುತ್ ವ್ಯವಸ್ಥೆಯನ್ನು ಅಳವಡಿಸಿಕೊಂಡಿವೆ. ಆದರೆ ಇಂದಿಗೂ ಪ್ರಾಚೀನ ಪದ್ಧತಿಯ ತೈಲ-ಘೃತದಿಂದ ಶೋಭಿಸುವ ಗರ್ಭಗುಡಿ ತಿರುಪತಿಯ ಶ್ರೀನಿವಾಸನದ್ದು. ಸಂಪ್ರದಾಯಸ್ಥರ ಮನೆಯಲ್ಲಿ ಹೀಗೊಂದು ಪದ್ಧತಿ ಈಗಲೂ ಚಾಲ್ತಿಯಲ್ಲಿದೆ. ಶ್ರೀನಿವಾಸನ ಕುರಿತಾದ ನವರಾತ್ರಿ ಹಬ್ಬದಲ್ಲಿ ಭಕ್ತರು ಹತ್ತು ದಿನಗಳ ಕಾಲ ದೀಪ ಹಚ್ಚಿದಾಗ ಯಾವುದೇ ಕಾರಣ ಬಂದರೂ ಪರ ಊರಿಗೆ ಹೋಗಲಾರರು. ದೀಪ ಹಚ್ಚುವ ಕಾಯಕಕ್ಕೆ ನೇಮದ ಹಿರಿಮೆ - ಗರಿಮೆ ಇದೆ.

ಕೋಟಿ ಸೂರ್ಯ ಸಮಪ್ರಭಾ ಶ್ರೀನಿವಾಸ ನೆನ್ನುತ್ತಾರೆ. ಅದಕ್ಕಿಂತಲೂ ಮಿಗಿಲು ಅವನ ಪ್ರಕಾಶ. ಭಕ್ತರಿಗೆ ದಯಪಾಲಿಸುವ ಬೆಳಕು ಅದು ಬಾಳಿನ ಜ್ಯೋತಿ. ಹಚ್ಚುವ ಆರತಿ ನಮ್ಮ ಶುಭೋದಯದ ಕಿರಣ, ಆ ಪ್ರಭೆಯಿಂದ - ಜ್ವಾಲೆಯಿಂದ ನಮ್ಮ ಅಜ್ಞಾನ ಸುಟ್ಟು ಹೋಗಲಿ. ಅದರ ದ್ಯುತಿ ಚೆಂದ; ದೀಪ ತಾನುರಿದು ಬೆಳಕು ಕೊಡುವಂತೆ ದಾಸರು ಹಚ್ಚಿದ ದೀಪ ನಾವು ಕಾಣುವ ನಕ್ಷತ್ರ. ಅವನ ಅನುಗ್ರಹವಾಗುವ ದಿನ ದೀಪಾವಳಿ ಸ್ವಲ್ಪವೇ ಬೆಳಕು ಕೊಟ್ಟರೆ ದಾರಿಹೋಕನಿಗೆ ನೆರವಾಗುವ ಗುಣ ಮಿಣುಕು ಹುಳುವಿನದ್ದು. ಆ ಗುಣ ನಮ್ಮನ್ನು ಆವರಿಸಿಕೊಳ್ಳಲಿ. ದಾಸರು ದೀಪ ಹಚ್ಚುವ ಸಮಯದಲ್ಲಿ ನಮ್ಮ ಅಕ್ಷರದ ಸಾಲುಗಳು ಅರ್ಪಿತವಾಗಲಿ.

# ಶ್ರೀ ವಿಷ್ಣು ಸಹಸ್ರ ನಾಮ ಅಮೃತ

-ಶ್ರೀಮತಿ. ಎ. ಗೀತವೀರರಾಘವನ್



ಮಹಾಭಾರತವು ಪಂಚಮ ವೇದವೆಂದು ಪ್ರಸಿದ್ಧ ವಾಗಿದೆ. ಶ್ರೀಮನ್ನಾರಾಯಣಸ್ವರೂಪಿಯಾದ ವೇದವ್ಯಾಸರು ತಮ್ಮ ದಿವ್ಯಮತಿ ಎಂಬ ಕಡೆಗೋಲಿನಿಂದ ಈ ಮಹಾಭಾರತ ಎಂಬ ಶ್ರುತಿಸಾಗರವನ್ನು ಮಥಿಸಿ ತೆಗೆದಿರುವ ಅಮೃತ ಶ್ರೀ ವಿಷ್ಣುಸಹಸ್ರನಾಮ ಸಂಕೀರ್ತನ. ಇದು ಮಹಾಭಾರತದ ಸಾರಸರ್ವಸ್ವವಾಗಿದೆ. ಶ್ರೀಮಹಾಭಾರತವು ಶ್ರೀರಾಮಾಯಣದಂತೆ ಅತ್ಯಂತ ಪ್ರಮುಖವಾದ ಇತಿಹಾಸ. ವೇದ ಉಪನಿಷತ್ತುಗಳನ್ನು ಸರಿಯಾಗಿ ತಿಳಿಯಲು ಪ್ರಮುಖ ಪ್ರಮಾಣವಾಗಿರುವುದು ಈ ರಾಮಾಯಣ ಮತ್ತು ಮಹಾಭಾರತಗಳು.

ಈ ವಿಷ್ಣು ಸಹಸ್ರನಾಮವನ್ನು ಉಪದೇಶಿಸಿದವರು ಶ್ರೀ ಭೀಷ್ಮಾಚಾರ್ಯರು. ಅವರು ಮಹಾಜ್ಞಾನಿ. ತಮ್ಮ ದೃಢ ಬ್ರಹ್ಮಚರ್ಯದಿಂದಲೂ, ಮಾತಾಪಿತೃಗಳು ಶುಶ್ರೂಷೆಯಿಂದಲೂ ವರ ಪಡೆದವರು. ವ್ಯಾಸಭಗವಾನರು ಧರ್ಮರಾಯನಿಗೆ ಶರಮಂಚದಲ್ಲಿರುವ ಭೀಷ್ಮರು ಪರಮಪದ ಸೇರಿಬಿಟ್ಟರೆ ಅವರೊಡನೆ ಅವರ ಜ್ಞಾನವೆಲ್ಲಾ ಅಸ್ತಮವಾಗಿ ಹೋಗುವುದರಿಂದ ತಕ್ಷಣ ಅವರಲ್ಲಿ ಧರ್ಮವನ್ನೆಲ್ಲಾ ತಿಳಿಯಬೇಕೆಂದು ತಿಳಿಸಿದರು. ಅಂತೆಯೇ ಧರ್ಮರಾಯನು ಅವರಿಂದ ಎಲ್ಲಾ ಧರ್ಮಗಳ ಜ್ಞಾನವನ್ನು ಪಡೆದು ಕೊನೆಯಲ್ಲಿ ಅವರನ್ನು ಮತ್ತೆ ಈ ಧರ್ಮಗಳಲ್ಲೆಲ್ಲಾ ತಮ್ಮ ಅಭಿಪ್ರಾಯದಲ್ಲಿ ಯಾವುದು ಅತ್ಯಂತ ಶ್ರೇಷ್ಠವಾದುದು "ಕೋ ಧರ್ಮಃ ಸರ್ವ ಧರ್ಮಾಣಾಂ ಭವತಃ ಪರಮೋ ಮತಃ" ಎಂದು ಪ್ರಶ್ನಿಸಲು ಜಗನ್ಮಂಗಳನಾದ ನಿತ್ಯ ಮಂಗಳನಾದ ದೇವದೇವನಾದ ಶ್ರೀ ಮನ್ನಾರಾಯಣನ ಸಹಸ್ರನಾಮ ಕೀರ್ತನವನ್ನು ಪರಮ ಧರ್ಮನವೆಂದು ಉಪದೇಶಿಸಿದರು.

ಭೀಷ್ಮರ ಮತದಲ್ಲಿ ಅತ್ಯಂತ ಶ್ರೇಷ್ಠವಾದ ಈ ಸ್ತೋತ್ರ ಲೋಕಕ್ಕೆ ಅತ್ಯಂತ ಮಂಗಳಕರವಾದುದು. ಇದು ಮಹಾಭಾರತದ ಸಾರಸರ್ವಸ್ವವಾಗಿದೆ. ಒಮ್ಮೆ ಎಲ್ಲಾ ದಿಕ್ಕುಗಳಲ್ಲಿ ಭಕ್ತ ಜನರು, ಋಷಿಗಳು ಏನನ್ನು ಅತ್ಯಂತ ಪೂಜನೀಯವಾಗಿ ಗಾನ ಮಾಡುತ್ತಿರುವರೆಂದು ಪರೀಕ್ಷಿಸಿದಾಗ ಎಲ್ಲೆಲ್ಲಿಯೂ ಶ್ರೀ ವಿಷ್ಣುಸಹಸ್ರನಾಮ ಸ್ತೋತ್ರ ಗಾನ ಮಾಡುತ್ತಿದ್ದುದ್ದು ತಿಳಿದು ಬಂದಿತು.(ಋಷಿಭಿಃ ಪರಿಗೀತಾನಿ)

ಪ್ರಧಾನವಾದ ಕೆಳಗೆ ಸೂಚಿಸಿರುವ ಈ ಆರು ಕಾರಣಗಳಿಂದ ಇದು ಅತ್ಯಂತ ಪ್ರಾಶಸ್ತ್ಯ ಪಡೆದಿದೆ.

೧) ಮಹಾಭಾರತದ ಸಾರಸರ್ವಸ್ವವಾಗಿದೆ.

೨) ವೇದಗಳನ್ನೆಲ್ಲಾ ವಿಭಾಗ ಮಾಡಿದ ವೇದವ್ಯಾಸರು ಇದನ್ನು ರಚಿಸಿದ್ದಾರೆ.

೩) ಮಹಾಜ್ಞಾನಿ ಭೀಷ್ಮರು ಇದನ್ನು ಉಪದೇಶಿಸಿದ್ದಾರೆ.

೪) ಇದು ಭಗವದ್ಗೀತೆಯ ಸಾರಾಂಶವಾಗಿದೆ.

೫) ಮಹಾಭಾರತದ ನಾರಾಯಣೀಯದ ತತ್ವವಾಗಿದೆ.

೬) ಎಲ್ಲಾ ವರ್ಣದವರಿಗೂ ಎಲ್ಲರಿಗೂ ಇದಕ್ಕೆ ಅಧಿಕಾರ ವಿದೆ.

ಇದು ಗಾನ ಮಾಡಲು ಮಧುರ, ಕೇಳಲು ಅತ್ಯಂತ ಇಂಪು, ಸರ್ವಪುರುಷಾರ್ಥಗಳನ್ನು ಗಳಿಸಿ ಕೊಡುವ

ಕಲ್ಪವೃಕ್ಷವಾಗಿದೆ.ಎಲ್ಲಾ ಜೀವಿಗಳನ್ನೂ ಎಲ್ಲಾ ವ್ಯಾಧಿಗಳಿಂದ ಕಾಪಾಡುವ ಸಿದ್ಧೌಷಧವಾಗಿದೆ.

ಇದಕ್ಕೆ ಶ್ರೀ ಪರಾಶರ ಭಟ್ಟರೆಂಬ ದಿವ್ಯ ಜ್ಞಾನಿ ಭಗವದ್ಗುಣ ದರ್ಪಣ ಎನ್ನುವ ಭಾಷ್ಯ ವನ್ನು ರಚಿಸಿ ಉಜ್ವಲವಾದ ದರ್ಪಣದಲ್ಲಿ ಭಗ ವದ್ಗುಣಗಳನ್ನು ಪ್ರತಿಬಿಂಬಿಸಿದ್ದಾರೆ.

ಈ ದಿವ್ಯ ಸಂಕೀರ್ತದಲ್ಲಿ ಪರಮಪುರುಷ ಶ್ರೀಮನ್ನಾ ರಾಯಣನ ದಿವ್ಯ ಅವತಾರಗಳೂ ಒಂದೊಂದು ನಾಮದಲ್ಲಿ ಒಂದೊಂದು ಗುಣಗಳ ಅತ್ಯುತ್ತಮ ವಿರೂಪಣೆಯೂ ಇದೆ. ಅಥರ್ವಣ ವೇದದಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಅನೇಕ ವಿಷಮ ಜ್ವರಗಳಿಗೆ ಇದನ್ನು ಪಠಿಸಬೇಕೆಂದು ಸೂಚಿಸ ಲಾಗಿದೆ.

ಶ್ರೀ ವಿಷ್ಣು ಸಹಸ್ರ ನಾಮವು ಧರ್ಮ, ಅರ್ಥ, ಕಾಮ, ಮೋಕ್ಷಗಳಾದ ನಾಲ್ಕು ವಿಧ ಪುರುಷಾರ್ಥಗಳನ್ನು ದೊರಕಿಸಿ ಕೊಡುತ್ತದೆ. ಇದರಲ್ಲಿ ತತ್ವ, ಹಿತ, ಪುರುಷಾರ್ಥಗಳು ಅಡಗಿದೆ. ಮಾನವರೆಲ್ಲರಿಗೂ ಇದು ಪರಮ ಪ್ರಾಪ್ಯವಾದುದು. ಸಾಮಾನ್ಯ ಜನರೂ ಇದನ್ನು ಅತಿ ಭಕ್ತಿಯಿಂದ ಪಾರಾಯಣ ಮಾಡಿ ಧನ್ಯರಾಗುತ್ತಾರೆ. ಬಾಣನು ೭ ನೇ ಶತಮಾನದಲ್ಲಿ ತನ್ನ ಕಾದಂಬರಿ ಎಂಬ ಗ್ರಂಥದಲ್ಲಿ ಆ ದಿನಗಳಲ್ಲಿ ಮಗುವಿನ ಜನನದ ಸಮಯದಲ್ಲಿ ಸೂತಿಕಾ ಗೃಹದ ಮುಂದೆ ಬಂಧುಗಳು ನಿರಂತರವಾಗಿ ಸಹಸ್ರನಾಮ ಪಾರಾಯಣ ಮಾಡುತ್ತಿದ್ದ ರೆಂದು ಬರೆದಿದ್ದಾನೆ.

ಈ ಸ್ತೋತ್ರದಲ್ಲಿ ಉಪೋದ್ಘಾತವೂ ಮತ್ತು ಫಲಶ್ರುತಿಯೂ ವಿಸ್ತಾರವಾಗಿದೆ.ಗಾನ,ಧ್ಯಾನ,ದಾರಣ, ವೇದನ.... ಗಳಿಗೆಲ್ಲಾ ಪ್ರಸಿದ್ಧವಾಗಿದೆ. ಲೋಕದಲ್ಲಿ ಜನರಿಗೆ ತತ್ವದ ವಿಷಯದಲ್ಲಿ ವಿವಿಧವಾದ ಜಿಜ್ಞಾಸೆ ಉಂಟಾಗುತ್ತಿದೆ. ಅಂತೆಯೇ ಯುಧಿಷ್ಠಿರನು ಭೀಷ್ಮರನ್ನು ರಾಜ ಧರ್ಮ ಮುಂತಾದ ಅನೇಕ ಧರ್ಮಗಳನ್ನು ತಿಳಿದ ಮೇಲೆ ಪರಮ ತತ್ವ, ಯಾವುದು ಪರಗತಿ ಯಾವುದೆಂದು ಪ್ರಶ್ನಿಸುತ್ತಾನೆ. ಭೀಷ್ಮರು ಪರಮತತ್ವ ಪರಬ್ರಹ್ಮ ಅತ್ಯಂತ ಮಂಗಳಕರವಾದ ಶ್ರೀಮನ್ನಾರಾಯಣನೆಂದು ತಿಳಿಸಿ ಅವನ ನಾಮ ಸಂಕೀರ್ತ ನದ ಮಹತ್ವವನ್ನು ತಿಳಿಸುತ್ತಾರೆ.

ಜೀವನದಲ್ಲಿ ನೆಮ್ಮದಿ ಶಾಂತಿಯನ್ನು ಪಡೆದು ಮಂಗಳತ್ವವನ್ನು ಪಡೆಯುವ ಉಪಾಯವನ್ನು ಸೂಚಿಸಿ ಯಾಗಾದಿಗಳನ್ನು ಮಾಡಬಹುದು. ಆದರೆ ಅದು ಅತ್ಯಂತ ಕಷ್ಟಕರ. ಉಪವಾಸ ದೇಹಶ್ರಮ, ಅನೇಕ ದ್ರವ್ಯಗಳು ಅಪಾರ ಹಣ ವನ್ನು ವ್ಯಯ ಮಾಡಬೇಕಾಗುತ್ತದೆ. ಅಷ್ಟಾದರೂ ಅದರಲ್ಲಿ ಫಲಸಿಗುವುದೆಂಬ ನಿಶ್ಚಯವಿಲ್ಲ. ಅತ್ಯಂತ ಸುಲಭವಾಗಿ ಯಾವ ಶ್ರಮವಿಲ್ಲದೆ ಸರ್ವಶ್ರೇಷ್ಠನನ್ನು ಪಡೆಯಲು ಎಲ್ಲರಿಗೂ ಶ್ರೀ ಮನ್ನಾರಾಯಣನ ಶ್ರೀನಾಮ ಸಂಕೀರ್ತನ ದಿವ್ಯ ಉಪಾಯ. ಇದರಿಂದ ಫಲ ನಿಶ್ಚಿತ. ಅತ್ಯಂತ ಸಾರತಮ ವಾದ ಉಪಾಯ. ಸುಲಭವಾಗಿ ಅವನನ್ನು ದೊರಕಿಸಿ ಕೊಡು ತ್ತದೆ.


ಇದರಲ್ಲಿ ತತ್ವ, ಹಿತ, ಪುರುಷಾರ್ಥಗಳು ಅಡಗಿದೆ.

ಈ ದಿವ್ಯ ಸಹಸ್ರನಾಮ ಸಂಕೀರ್ತನೆ "ವಿಶ್ವಂ ವಿಷ್ಣುಃ" ಎಂದು ಪ್ರಾರಂಭವಾಗುತ್ತದೆ.ವಿಶ್ವಂ ಎಂದರೆ ವಿಶ್ವವೆಲ್ಲಾ ಅವನೇ.ಎಲ್ಲಾ ಚರಾಚರ ವಸ್ತುಗಳಿಗೂ ಅಂತರ್ಯಾಮಿ ಯಾಗಿ ವಿಶ್ವಂ ಆಗಿದ್ದಾನೆ "ವಿಶ್ವಸೃಟ್" ಈ ವಿಶ್ವವನ್ನೆಲ್ಲಾ ಸೃಷ್ಟಿ ಸಿದವನು ಅವನೇ. ಅವನೇ ವಿಶ್ವಮೂರ್ತಿ ವಿಶ್ವ ರೂಪವೆಂದು ಕೊಂಡಾಡಲಾಗಿದೆ.ಅವನ ದಿವ್ಯ ಅವತಾರಗಳೆಲ್ಲಾ ಈ ಸಂ ಕೀರ್ತನದಲ್ಲಿ ವಿವರಿಸಿದೆ. ಅವನ ಕಲ್ಯಾಣಾಗುಣಗಳನ್ನು ದಿವ್ಯವಾಗಿ ಸ್ತುತಿಸಿದೆ. ಕೊನೆಯಲ್ಲಿ ಶಂಖಬೃನ್ನಂದಕೀ ಚಕ್ರೀ ಎನ್ನತ್ತಾ ಅವನ ದಿವ್ಯಯುಧಗಳನ್ನು ಸ್ತುತಿಸಿದೆ. ಭಗವಂತನ ಆಭರಣಗಳು ಅವನಿಗೆ ಆಯುಧಗಳೂ ಆಗುತ್ತದೆ. ಅವನ ಆಯುಧಗಳು ಆಭರಣವೂವಾಗುತ್ತದೆ.

ಈ ದಿವ್ಯ ಸಂಕೀರ್ತನೆಯನ್ನು ಕೇಳಿದವರಿಗೆ ಸ್ತುತಿಸಿ ದವರಿಗೂ ಎಲ್ಲಾ ಶ್ರೇಯಸ್ಸು ಉಂಟಾಗುತ್ತದೆ. ಎಲ್ಲಾ ವಿಧವಾದ ರೋಗಗಳೂ ನಿರ್ಮೂಲನವಾಗಿ ಶ್ರೇಯಸ್ಸು ಉಂಟಾಗುತ್ತದೆ. ಲೋಕದಲ್ಲಿ ಶಾಂತಿ ನೆಲೆಸುತ್ತದೆ. ಆದುದರಿಂದ ನಾವೆಲ್ಲರೂ ಕಲಿಯುಗದಲ್ಲಿ ಅತ್ಯಂತ ಸುಲಭ ಉಪಾಯವಾದ ಶ್ರೀ ಮನ್ನಾ ರಾಯಣನ ಈ ದಿವ್ಯ ಸಹಸ್ರನಾಮ ಸಂಕೀರ್ತನೆಯನ್ನು ಭಕ್ತಿ ಯಿಂದ ಹಾಡಿ ಲೋಕಶಾಂತಿ ನೆಮ್ಮದಿಗಾಗಿ ಆ ಸ್ವಾಮಿಯನ್ನು ಪ್ರಾರ್ಥಿಸೋಣ.

# ಸಪ್ತಗಿರಿ ಮಾಸಪತ್ರಿಕೆಗೆ ಸುವರ್ಣ ಸಂಭ್ರಮ

- ಬೆಳವಾಡಿ ಅಶ್ವತ್ಥನಾರಾಯಣ




"ಭೂ ವೈಕುಂಠ" ಎಂದೇ ಪ್ರಸಿದ್ಧವಾದ ತಿರುಮಲೆ ತಿರುಪತಿ ದೇವಸ್ಥಾನದಿಂದ ಪ್ರಸಾರವಾಗುವ ಸಪ್ತಗಿರಿ ಮಾಸ ಪತ್ರಿಕೆಗೇ ಸುವರ್ಣ ಸಂಭ್ರಮ.

ಇಂದಿನ ತಿರುಪತಿ ಬೆಟ್ಟವನ್ನೇ ಗರುಡಾಚಲ ಎಂದೂ ಕರೆಯುತ್ತಾರೆ.

### ಹಿನ್ನೆಲೆ

ಶ್ರೀ ಮಹಾವಿಷ್ಣುವು ವರಾಹಾವತಾರ ಮಾಡಿ ಹಿರಿಣಾಕ್ಷ ನನ್ನು ಕೊಂದ ಮೇಲೆ ಅದೇ ಆಕಾರದಿಂದ ವೈಕುಂಠಕ್ಕೆ ಹೋಗ ಲಾರದೆ ಈಗಿನ ತಿರುಪತಿ ಬೆಟ್ಟವಿದ್ದಲ್ಲಿ ಗರುಡನಿಂದ ವೈಕುಂಠದಲ್ಲಿ ತನ್ನ ಕ್ರೀಡಾಪರ್ವತವನ್ನು ತರಿಸಿ ಅಲ್ಲೇ ನಿಂತು ಬಿಟ್ಟನು.

ವೈಕುಂಠದಲ್ಲಿ ಲಕ್ಷ್ಮಿಯು ಬಹಳ ಕಾಲ ಪತಿಗಾಗಿ ನಿರೀಕ್ಷಿಸಿದರೂ ಆತನು ಬಾರದಿರಲು ಆಕೆಯು ಆಕಾಶ ರಾಜನಿಗೆ ಪದ್ಮಾವತಿಯೆಂಬ ಹೆಸರಿನಿಂದ ಮಗಳಾಗಿ ಹುಟ್ಟಿ ಅಲ್ಲಿ ಶ್ರೀನಿವಾಸನಾಗಿನಿಂತ ವಿಷ್ಣುವನ್ನು ವಿವಾಹವಾದಳು ಎಂದು "ಸ್ಕಾಂದ - ಪುರಾಣದಿಂದ" ತಿಳಿದು ಬರುತ್ತದೆ.

ಇಂತಹ ಶ್ರೀನಿವಾಸ ಮತ್ತು ಪದ್ಮಾವತಿ ದಂಪತಿಗಳು ಕಲಿಯುಗದಲ್ಲಿ ವಿಶೇಷವಾಗಿ ಎಲ್ಲರ ಆರಾಧ್ಯದೇವತೆಗಳಾಗಿ ದ್ದಾರೆ.

ಅದಕ್ಕೆ ದಾಸವರೇಣ್ಯರು" ಇಂಥಹ ವೈಭವಯಿನ್ನಾವ ದೇವರೊಳು ನಾ ಕಾಣೆ" ಎಂದು ಭಕ್ತಿಯ ಪರಾಕಾಷ್ಠೆಯನ್ನು ಮೆರೆದಿದ್ದಾರೆ.

"ವೆಂಕಟಾದ್ರಿ ಸಮಂಸ್ಥಾನಂ ಬ್ರಹ್ಮಾಂಡೇನಾಸ್ತಿ ಕಿಂಚನ
ವೆಂಕಟೇಶಸಮೋದೇವ್ರೋ ನಭೂತೋನ ಭವಿಷ್ಯತಿ"

ಎಂಬ ಪ್ರಶಂಸೆ ಜನಜನಿತವಾಗಿದೆ.

ಇಂತಹ ಸ್ವಾಮಿಗೆ ಎಡಬಿಡದೆ ಪೂಜೆ, ಅಲಂಕಾರ, ರಥೋತ್ಸವ, ಮಹಾನೈವೇದ್ಯ, ಪ್ರಪತ್ತಿ ದಿನದಿನವೂ

ಕಾಲಕಾಲಕ್ಕೆ ನಡೆಯುತ್ತಿದ್ದು, ಇಂತಹ ಸ್ವಾಮಿಯ ವೈಭವೋಪೇತ ಕಾರ್ಯಕ್ರಮಗಳ ಮಾಹಿತಿ ಹೊತ್ತ ವಿಚಾರಗಳನ್ನು ದೇವಳದ ಸಂಬಂಧಪಟ್ಟ ಭಕ್ತಾಗ್ರಣಿಗಳು,ಮಹನೀಯರು, ಸಂಸ್ಕೃತ ಪ್ರಖಾಂಡಪಂಡಿತರು, ಸಾಹಿತ್ಯದಿಗ್ಗಜರು, ಸಪ್ತಗಿರಿ ಮಾಸಪತ್ರಿಕೆ ಮೂಲಕ ವಿವಿಧ ಭಾಷೆ ಗಳಲ್ಲಿ ಭಕ್ತ ಕೋಟಿಗೆ, 50 ವರ್ಷಗಳಿಂದ ತಿಳಿ ಸುತ್ತಾ ಬಂದಿದ್ದಾರೆ. ವಿಶೇಷವೆಂದರೆ ಪ್ರಖಾಂಡ ಪಂಡಿತರು,ಪಾಮರರು,ಭಕ್ತಾಗ್ರೇಸರು ಸ್ವಾಮಿಯ ಬಗ್ಗೆ ಬರೆದಂತಹ ಲೇಖನಗಳನ್ನು ಸಹ ಪ್ರಕಟಿಸು ತ್ತಿದ್ದಾರೆ. ಅಲ್ಲದೆ ಲೇಖಕರಿಗೆ ಹೆಚ್ಚುವರಿಯಾಗಿ ಐದು ಮಾಸ ಪತ್ರಿಕೆ ಕಳುಹಿಸುವುದರೊಂದಿಗೆ ಸೂಕ್ತ ಸಂಭಾವನೆ ಸಹ ಕಳುಹಿಸುತ್ತಿರುವುದು, ಶ್ಲಾಘನೀಯವಾದ ಅಂಶವೇ ಸರಿ. ಲೇಖಕರು ಸ್ವಾಮಿ ಪ್ರಸಾದವೆಂದು ಧನ್ಯತಾ ಭಾವ ತಳೆಯುವು ದಂತೂ ನಿಜ.

ಈ ಲೇಖಕನಾದ ನಾನೂ ಸಹ ಸುಮಾರು ಹದಿನೈದು ವರ್ಷಗಳಿಂದ ಈ ಮಾಸಪತ್ರಿಕೆ ಓದುತ್ತಿದ್ದು, ಈಗ್ಗೆ ಎಂಟು ವರ್ಷಗಳಿಂದ ಬೆಳವಾಡಿ ಅಶ್ವತ್ಥನಾರಾಯಣ ಎಂಬ ಹೆಸರಿನಲ್ಲಿ ಲೇಖನ ಬರೆಯುತ್ತಾ ಬಂದಿದ್ದೇನೆ. ಈಗಾಗಲೇ 20 ಲೇಖನಗಳು ಪ್ರಕಟಗೊಂಡಿವೆ. ಸ್ವಾಮಿಯ ಅನಂತ ಕೃಪೆಗೆ , ಆಶೀರ್ವಾದಕ್ಕೆ ಪ್ರಸಾದ ರೂಪದ ಹೆಚ್ಚುವರಿ ಪುಸ್ತಕಕ್ಕೆ ಮತ್ತು ದೇವಳದ ಅಧಿಕಾರಿಗಳು ಹೇಳುವಂತೆ ಪರಮಾತ್ಮನ ಸಂಭಾವನೆ ಕೃಪೆಗೂ ಸಹ ಪಾತ್ರನಾಗಿದ್ದೇನೆ. ಸಂಬಂಧ ಪಟ್ಟವರಿಗೆಲ್ಲಾ ಮತ್ತೆ ಕಲಿಯುಗದ ದೈವ, ಪರಬ್ರಹ್ಮಶ್ರೀಹರಿಗೆ ನಾಮನತ ಮಸ್ತಕನಾಗಿದ್ದೇನೆ. "ಸುವರ್ಣ ಸಂಭ್ರಮ".

"ನಭೂತೋನಭವಿಷ್ಯತಿ" ಎಂಬಂಥೆ ನಡೆಯಲಿ ನನ್ನ ಪ್ರಾರ್ಥನೆ.

ಇನ್ನು ''ಸಪ್ತಗಿರಿ''ಮಾಸಪತ್ರಿಕೆ ನನಗೆ ಮೆಚ್ಚಿಗೆ ಯಾಗಲು ಕಾರಣಗಳು, ನನ್ನ ಪ್ರಕಾರ ಇಂತಿವೆ:

1. ಪೇಪರ್ ಕ್ವಾಲಿಟಿ ತುಂಬಾ ಚೆನ್ನಾಗಿದೆ.

2. ಬೆಲೆ ಬಡವರಿಗೂ ಎಟಕುವಂತಿದೆ

3. ಆಯಾ ಸಂದರ್ಭಕ್ಕೆ ತಕ್ಕಂತೆ ಸ್ವಾಮಿಯ ಭಾವ ಚಿತ್ರಗಳು ಮನ ಸೂರೆಗೊಳ್ಳುತ್ತವೆ.

4. ಸ್ವಾಮಿಯನ್ನು ಕುರಿತಾದ ಲೇಖನಗಳು ಅತ್ಯುತ್ತಮ ವಾಗಿದ್ದು, ಆಯಾಲೇಖನಗಳಿಗೆ ಸೂಕ್ತವಾದ ಫೋಟೋ ಹಾಕು ತ್ತಿರುವುದು, ಲೇಖನಕ್ಕೆ ಕಿರೀಟವಿಟ್ಟಂತೆ.

5. ಮಾಸ ಪತ್ರಿಕೆ ವಿವಿಧ ಭಾಷೆಗಳಲ್ಲಿ (ಸಂಸ್ಕೃತವೂ ಸೇರಿದಂತೆ) ಬರುತ್ತಿರುವುದು ಶ್ಲಾಘನೀಯ.

6. ಎಲ್ಲಕ್ಕಿಂತ ಹೆಚ್ಚಾಗಿ ದೇವಳದಲ್ಲಿ ಸ್ವಾಮಿಗೆ ನಡೆಯುವ ಭಕ್ತಿಯ ಕಾರ್ಯಕ್ರಮಗಳ ವಿವರಣೆ ಪತ್ರಿಕೆ ಹೊತ್ತು ತರುವುದು.

7. ಕಾರ್ಯಕ್ರಮ ನಡೆದ ಮೇಲೆ ಅದರ ವಿವರಣೇ ಸಹ ಅದರ ಮುಂದಿನ ಸಂಚಿಕೆ ಯಲ್ಲಿ ವಿವರವಾಗಿ, ದಾಖಲಿಸಿ, ಅಲ್ಲಿಗೆ ಹೋಗ ಲಾಗದ ಭಕ್ತರಿಗೂ ಅದನ್ನು ಓದಿಯೆ ತನ್ಮಯ ರಾಗುವಂತೆ ಮಾಡುತ್ತಿರುವುದು "ಸಪ್ತಗಿರಿ" ಮಾಸಪತ್ರಿಕೆಯ ವಿಶೇಷ.

"ಭೂ ವೈಕುಂಠ" ಎಂದೇ ಪ್ರಸಿದ್ಧವಾದ ತಿರುಮಲೆ ತಿರುಪತಿ ದೇವಸ್ಥಾನದ ಅಧಿಪತಿ ಮಹಾವಿಷ್ಣುವನ್ನು ವರ್ಣಿಸಲಸದಳ ಏಕೆಂದರೆ ಮಹಾಕವಿ ಕುಮಾರವ್ಯಾಸ ಹೇಳು ವಂತೆ ಆ ಶ್ರೀ ಹರಿಯನ್ನು ಹೊಗಳಲಾರದೆ ವೇದದ ತಾಳಿಗೆಗಳು ವಣಗಿದವಂತೆ.

ಸಹಸ್ರನಾಲಿಗೆಯುಳ್ಳ ಆದಿಶೇಷ ಹೊಗಳಲರಿಯ ಎಂದ ಮೇಲೆ ಪಾಮರರಾದ ನಾವು ಅವನ ಮಹಿಮೆ ಹೊಗಳಲಾದೀತೇ ಬರೆಯಲಾದೀತೇ?

ಆದರೂ ನಮ್ಮ ಅಲ್ಪಮತಿಗೆ ಎಟುಕಿದಂತೆ ಸಂಗ್ರಹಿಸಿ ಹೇಳಬಹುದಾದರೆ " ಆ ಮಹಾವಿಷ್ಣುವಿನ ಮಹಿಮೆ ಇಂತಿದೆ:-

ಯುಗ ಕೋಟಿ ಸಹಸ್ರಾಣಿ ವಿಷ್ಣುಮಾರಾಧ್ಯ ಪದ್ಮಭೂಃ।
ಪುನಸ್ತ್ರೈಲೋಕ್ಯಧಾತೃತ್ವಂ ಪ್ರಾಪ್ತವಾನಿತಿ ಶುಶ್ರುಮ ॥

ಬ್ರಹ್ಮನು ಕೋಟಿಸಹಸ್ರ ಯುಗಗಳ ಕಾಲ ತಪಸ್ಸಿನಿಂದ ವಿಷ್ಣುವನ್ನು ಆರಾಧಿಸಿ ತ್ರೈಲೋಕ್ಯಕ್ಕೆ ಧಾತೃವಾಗುವ ಸ್ಥಾನವನ್ನು ಪಡೆದನು.

ಮಹಾದೇವಃ ಸರ್ವಮೇಧೇ ಮಹಾತ್ಮಾ।
ಹುತ್ವಾತ್ಮಾನಂ ದೇವದೇವೋ ಬಭೂವ ॥

ಈಶ್ವರನು ವಿಷ್ಣು ಪ್ರೀತ್ಯರ್ಥವಾಗಿ ಮಾಡಿದ ಸರ್ವಮೇಧ ಯಾಗದಲ್ಲಿ ತನ್ನನ್ನೇ ಹೋಮ ಮಾಡಿ ದೇವದೇವನಾದನು.

ಭಕ್ತಾಗ್ರೇಸರನಾದ ಪ್ರಹ್ಲಾದ ರಾಜರೂ ಸಹ

ಸ್ಥಲೇವಿಷ್ಣುರ್ಜಲೇ ವಿಷ್ಣು ವಿಷ್ಣುಸ್ಥಾವರ ಜಂಗಮಾಃ ।
ಅಂತರ್ವಿಷ್ಣು ಬಹಿರ್ವಿಷ್ಣು ಸರ್ವಂ ವಿಷ್ಣುಮ ಯಂಜಗತ್॥

ಎಂದಿದ್ದಾರೆ.

ಇಂತಹ ದೇವದೇವನ ಮಹಿಮೆಯನ್ನೊಳಗೊಂಡ ಸಪ್ತ ಗಿರಿ ಮಾಸಪತ್ರಿಕೆಗೆ ನನ್ನ ಕೋಟಿ ಶಿರಸಾಷ್ಟಾಂಗ ಪ್ರಣಾಮಗಳು.

ಪತ್ರಿಕೆ ನಿರಂತರವಾಗಿ ಪ್ರಕಟಗೊಂಡು ಸದ್ಭಕ್ತರನ್ನು ತಣಿಸಲಿ ಎಂದು ಆದೇವದೇವನಲ್ಲಿ ಪ್ರಾರ್ಥಿಸುವೆ.



# ಸಪ್ತಗಿರಿ ಸಪ್ತಗಿರೀಶನ ಕರುಣಾಲಹರಿ

- ಡಾ|| ಸುಮನ ಬದರೀನಾಥ್

*ಸಪ್ತಗಿರಿ ಸಪ್ತಗಿರಿ ಸಪ್ತಗಿರೀಶನ ಕರುಣಾಲಹರಿ*
*ಹರಿದು ಬರುತಿದೆ ಸಜ್ಜನರೆಲ್ಲರು ಮಜ್ಜನ ಮಾಡಿರಿ||*

ಮಾಸದ ಮೊದಲ ದಿನದಿಂದ ಸಪ್ತಗರಿಯ ಬರವಿಗಾಗಿ ಮನ ಕಾತುರದಿಂದ ಕಾಯುತ್ತದೆ. ಮುಖಪುಟದಲ್ಲಿನ ಮಂಗಳಾಂಗ ತಿರುಮಲೇಶನ ಚಿತ್ರವನ್ನು ನೋಡುತ್ತಿದ್ದಂತೆಯೇ ಧನ್ಯತಾಭಾವದಿಂದ ಮೈ ನವಿರೇಳುತ್ತದೆ. ಆಕರ್ಷಣೆಯ ಲೇಖನಗಳು, ಮನ ಸೆಳೆಯುವ ವರ್ಣಚಿತ್ರಗಳು,ಮಾರ್ಗದರ್ಶಕವಾದ ಮಾಹಿತಿಗಳು, ಒಂದೇ, ಎರಡೇ, ನಮ್ಮ ಅಚ್ಚು ಮೆಚ್ಚಿನ ಸಪ್ತಗಿರಿ ಸರ್ವಾಂಗ ಸುಂದರವಾಗಿ ಮೂಡಿ ಬರುತ್ತಿದೆ.

ಸಪ್ತಗಿರಿ ಮಾಸಪತ್ರಿಕೆಯ ವೈಶಿಷ್ಟ್ಯವೇನೆಂದರೆ ಅದರ ವಾಚನದಿಂದ ಭಗವಂತನಲ್ಲಿ ಭಕ್ತಿ, ಧರ್ಮಾಚರಣೆಯಲ್ಲಿ ಆಸಕ್ತಿ ದೇವಾಲಯದರ್ಶನದಲ್ಲಿ ಅನುರಕ್ತಿಗಳೊಡನೆ ನಿತ್ಯಜೀವನದಲ್ಲಿ ಸದಾಚಾರಗಳ ಅಭಿವ್ಯಕ್ತಿ ಫಲಿತಗೊಳ್ಳುತ್ತಿವೆ.

ತಿರುಮಲೇಶ ಶ್ರೀನಿವಾಸನ, ತಾಯಿ ಪದ್ಮಾವತಿಯ ದರ್ಶನ, ಮಹಿಮೆ, ಮಹೋತ್ಸವಗಳ ಬಗ್ಗೆ ನೀಡಲಾಗುವ ಮಾಹಿತಿ ಮತ್ತು ವರ್ಣಚಿತ್ರಗಳನ್ನು ನೋಡಿದಾಗಿನ ಆನಂದದ ಅನುಭೂತಿ ಅವರ್ಣನೀಯ. ನಮ್ಮ ಭಾರತ ದೇಶದ ಉದ್ದಗಳಲ್ಲಿರುವ ಪ್ರಾಚೀನ ದೇವಾಲಯಗಳ ಬಗ್ಗೆ ಲೇಖನಗಳಿಂದ ಅವುಗಳನ್ನು ಸಂದರ್ಶಿಸಬೇಕೆಂಬ ಅಭಿಲಾಷೆ ಮೂಡದಿರದು. ಈ ಪತ್ರಿಕೆಯಲ್ಲಿ ನಾವು ನಾವಾಗಿಯೇ ಅರಿಯೆಲಾಗದ ವೇದೋಪನಿಷತ್ತುಗಳು, ರಾಮಾಯಣ, ಭಾರತ, ಗೀತೆ, ಪುರಾಣಾದಿ ಸದ್ಗ್ರಂಥಗಳ ಬಗ್ಗೆ ಅಪರೂಪದ ಮಾಹಿತಿಗಳು ದೊರೆತು ನಮ್ಮ ಜ್ಞಾನ ಹೆಚ್ಚುತ್ತಿದೆ. ಇದಲ್ಲದೆ, ಯುಗಾದಿ, ಸಂಕ್ರಾಂತಿ, ನವರಾತ್ರಿ, ಮುಂತಾದ ಸಾಂದರ್ಭಿಕ ಲೇಖನಗಳೂ ವಿಶೇಷ ವಿಷಯಗಳನ್ನು ತಿಳಿಸಿ ಪತ್ರಿಕೆಯ ಅಮೂಲ್ಯತೆಯನ್ನು ಹೆಚ್ಚಿಸಿವೆ. ಸುತರ, ಸಾಧಕರ ಜೀವನ ಚರಿತ್ರೆಗಳು ಅನುಕರಣೀಯ ಆದರ್ಶಗಳನ್ನು ಒದಗಿಸುತ್ತಿವೆ. ಸಪ್ತಗಿರಿಯ ಲೇಖಕ ಒಳಗವೂ ಮನನೀಯ ಲೇಖನಗಳನ್ನು ನೀಡುತ್ತಾ ಅಭಿನಂದನಾರ್ಹವಾಗಿದೆ. ಮಹಿಳೆಯರು, ಎಳೆಯರು, ಎಲ್ಲರಿಗೂ ಪ್ರಿಯವಾಗಿರುವ ಸಪ್ತಗಿರಿಯ ಪತ್ರಿಯೊಂದು ಸಂಚಿಕೆಯೂ ಸಂಗ್ರಹ ಯೋಗ್ಯವಾಗಿದೆ.ಒಟ್ಟಿನಲ್ಲಿ ಸಪ್ತಗಿರಿ ಕನ್ನಡದ ಧಾರ್ಮಿಕ ಪತ್ರಿಕಾ ಪ್ರಪಂಚದಲ್ಲಿಯೇ ಒಂದು ಅತ್ಯುತ್ತಮ ಸ್ಥಾನಗಳಿಸಿ ನಮ್ಮೆಲ್ಲರ ಅಚ್ಚು ಮೆಚ್ಚಿನ ಪತ್ರಿಕೆಯಾಗಿದೆ. ತನ್ನ ಪಾಠಕರನ್ನು ಆಧ್ಯಾತ್ಮಿಕ ಔನ್ನತ್ಯದತ್ತ ಒಯ್ಯುವಲ್ಲಿ ಯಶಸ್ವಿಯಾಗಿದೆ.

ಸಪ್ತಗಿರಿ (ಕನ್ನಡ) ಮತ್ತು ನನ್ನ ನಡುವಿನ ಅನುಬಂಧ ಐದು ದಶಕಗಳದ್ದು (50 ವರ್ಷ) ಎಂದು ಬರೆಯಲು ಹೆಮ್ಮೆಯೆನಿಸುತ್ತದೆ. 1970 ನೇ ಇಸವಿಯ ಜೂನ್ ತಿಂಗಳ ಸಪ್ತಗಿರಿಯಲ್ಲಿ ನಾನು ಬರೆದ 'ಕನಕದಾಸರು ಕಂಡ ಶ್ರೀನಿವಾಸ' ಎಂಬ ಲೇಖನ ಪ್ರಥಮತಃ ಪ್ರಕಟಗೊಂಡಿತ್ತು. ಅಂದಿನಿಂದ ಇಂದಿನವರೆಗೂ ತಡೆಯಿಲ್ಲದೆ ಸಪ್ತಗರಿಗೆ ಲೇಖನಗಳನ್ನು ಬರೆಯುವ ತನ್ಮೂಲಕ ಶ್ರೀನಿವಾಸನಿಗೆ ಸಾರಸ್ವತಸೇವೆ ಸಲ್ಲಿಸುವ ಸೌಭಾಗ್ಯ ನನ್ನದಾಗಿದೆ. ಇದೀಗ 2019 ನೇ ಇಸವಿ ಜೂನ್ ತಿಂಗಳ ಸಪ್ತಗಿರಿಯಲ್ಲಿ ನಾನು ಬರೆದ "ತ್ರಾಮಪರ್ಣಿ ಪುಷ್ಕರ ಪರ್ವ ಕಾಲ" ಪ್ರಕಟಗೊಂಡಿದ್ದು ಧನ್ಯತಾಭಾವ ಮೂಡಿಸಿದೆ. ಈ ಸದವಕಾಶವನ್ನು ನನಗಿತ್ತ ಸಪ್ತಗಿರಿ ಪತ್ರಿಕೆಗೆ ನನ್ನ ಅನಂತ ಕೃತಜ್ಞತೆಗಳು. ಇದೀಗ ನನಗೆ ಲಭಿಸಿರುವ ಗೌರವ ಡಾಕ್ಟರೇಟ್ ಪದವಿಯೂ ಶ್ರೀನಿವಾಸ ಪದ್ಮಾವತಿ ದಿವ್ಯ ದಂಪತಿಗಳ ಅನುಗ್ರಹವೇ ಆಗಿದೆ.

ಸಪ್ತಗಿರಿಗೆ ಶುಭವಾಗಲಿ. ಇಂದು ಸ್ವರ್ಣ ಮಹೋತ್ಸವವನ್ನು ಕಾಣುತ್ತಿರುವ ಪತ್ರಿಕೆ ಶತಮಾನೋತ್ಸವ ಆಚರಿಸುವಂತಾಗಲಿ. ತನ್ಮೂಲಕ ಶ್ರೀನಿವಾಸ ಪದ್ಮಾವತಿಯರ ಅನುಗ್ರಹ, ಭಕ್ತರ, ಪಾಠಕರ ಮೇಲೆ ನಿರಂತರವಾಗಿ ಹರಿದು ಬರುತ್ತಿರಲಿ ಎಂದು ಸಪ್ತಗಿರೀಶನಲ್ಲಿ ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಭಕ್ತರ ಸೇವೆಯಲ್ಲಿ...

# ಅಪಾಯದ ಸಮಯದಲ್ಲಿ ಗೋವಿಂದ ನಾಮಸ್ಮರಣೆಯೇ ದಿವ್ಯೌಷಧಿ



ಕರೋನ ಹೊಡೆತಕ್ಕೆ ಇಡೀ ಪ್ರಪಂಚವೇ ವಿಲವಿಲ ಒದ್ದಾಡುತ್ತರುವ ಸಂಕಷ್ಟ ಕಾಲವಿದು. ಇಡೀ ಮಾನವಕುಲಕ್ಕೆ ಮರು ಸವಾಲ್ ಹಾಕಿರುವ ಕರೋನ ಕರಾಳ ನೃತ್ಯವು ಎಲ್ಲ ದೇಶಗಳನ್ನು ಅಣುಕಿಸುತ್ತಿದೆ.ಎಲ್ಲಿ ನೋಡಿದರೂ ಭಯ-ಆತಂಕಗಳು ಅವರಿಸಿರುವ ಪ್ರಸ್ತುತ ದೃಶ್ಯಗಳು ವಿಷಾದಕರ, ಮಾನವ ಕುಲಕ್ಕೆ ಆಪತ್ತುಗಳು, ಪ್ರಕೃತಿ ವಿಕೋಪಗಳು, ಸಾಂಕ್ರಾಮಿಕ ರೋಗಗಳು, ತುಫಾನುಗಳು, ಭೂಕಂಪಗಳು ಹೊಸತೇನಲ್ಲ. ಆದರೆ ಪ್ರತಿ ಸಂದರ್ಭದಲ್ಲೂ ಈ ಪ್ರಕೋಪಗಳ ಮೇಲೆ ಮನುಷ್ಯ ತನ್ನ ವಿಜಯ ಪತಾಕೆಯನ್ನು ಹಾರಿಸುತ್ತಲೇ ನಡೆದಿದ್ದಾನೆ. ಪ್ರಪಂಚದಲ್ಲೇ ಅತಿದೊಡ್ಡ ಧಾರ್ಮಿಕ ಕೇಂದ್ರವೆಂದು ಹೆಸರು ಗಳಿಸಿರುವ ತಿರುಮಲೆ ತಿರುಪತಿ ದೇವಸ್ಥಾನವು ಈ ಕ್ಷೋಭೆಯ ಸಮಯದಲ್ಲಿ ಅದೆಷ್ಟೋ ಪಾರಮಾರ್ಥಿಕ ಕಾರ್ಯಕ್ರಮಗಳ ಮೂಲಕ "ಮಾನವ ಸೇವೆಯೇ ಮಾಧವನ ಸೇವೆ"ಯಂಬ ಗಾದೆ ಮಾತನ್ನು ಪರಿಪಾಲಿಸುತ್ತಾ "ಸರ್ವೇ ಜನಾ ಸುಖನೋ ಭವಂತು" ಎಂಬ ಸನಾತನ ಧರ್ಮಾಚರಣೆಯನ್ನು ಚಾಚೂ ತಪ್ಪದೆ ಪಾಲಿಸುತ್ತದೆ.

## ತಿ.ತಿ.ದೇ. ದೂರ ದೃಷ್ಟಿ

ಕರೋನ ವಿಪತ್ತನ್ನು ಮುಂಚಿನಿಂದಲೇ ಆಲೋಚಿಸಿ ತಕ್ಕುದಾದ ಪರಿಹಾರಗಳನ್ನು ತೆಗೆದುಕೊಳ್ಳುವುದರಲ್ಲಿಯೂ, ಭಕ್ತರು ಯಾವುದೇ ತಾಪತ್ರಯಗಳಿಗೆ ಗುರಿಯಾಗದೇ ನೋಡಿಕೊಳ್ಳುವುದರಲ್ಲಿಯೂ ತಿ.ತಿ.ದೇ ತೆಗೆದುಕೊಂಡಿರುವ ನಿರ್ಧಾರಗಳು ಉತ್ತಮ ಫಲಿತಾಂಶಗಳನ್ನು ನೀಡಿವೆ. ಇದರ ಫಲಿತವಾಗಿ ಮಾರ್ಚ್17 ರಿಂದ ಟೈಮ್ ಸ್ಲಾಟ್ ಟೋಕನ್‌ಗಳನ್ನು ಜಾರಿಗೊಳಿಸಿದೆ. ವೈಕುಂಠ ಕಾಂಪ್ಲೆಕ್ಸ್ 1 ಮತ್ತು 2 ರಲ್ಲಿ ಭಕ್ತರು ಕಾಯದೇ ನೇರವಾಗಿ ದೇವಸ್ಥಾನಕ್ಕೆ ಸಾಗಲು ಅನುಮತಿಯನ್ನಿತ್ತಿದ್ದಾರೆ. ಬೆಟ್ಟದ ಮೇಲೆ ಪ್ರತಿ ತಾಸಿಗೊಮ್ಮೆ ಎಲ್ಲಾ ಸ್ಥಳಗಳಲ್ಲಿ ಸ್ಯಾನಿಟೈಜರ್ ಹಾಕಿಸಲಾಗಿದೆ.ಕರೋನ ನಿಯಂತ್ರಣದಲ್ಲಿ ಸಾಮಾಜಿಕ ಪ್ರತ್ಯೇಕತೆ. ಮೂಲಭೂತವಾದ್ದರಿಂದ ಮುಖ್ಯಮಂತ್ರಿ ಶ್ರೀ ವೈ.ಎಸ್.ಜಗನ್‌ಮೋಹನ್ ರೆಡ್ಡಿಯೊಂದಿಗೆ ಸಮಾಲೋಚಿಸಿ ಅವರ ಸೂಚನೆಯ ಮೇರೆಗೆ ತಿ.ತಿ.ದೇ. ಆಲಯದಲ್ಲಿ ಭಕ್ತರ ಪ್ರವೇಶವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗುವುದೆಂದು ತಿ.ತಿ.ದೇ.ಅಧಿಕಾರಿಗಳು ಮಾರ್ಚ್19 ರಂದು ಪ್ರಕಟಿಸಿದ್ದಾರೆ. ಮಾರ್ಚ್ 20 ರ ಪ್ರಾಂತಃ ಕಾಲದ ಆರ್ಜಿತ ಸೇವೆಯ ಭಕ್ತರಿಗೆ ವಿ.ಐ.ಪಿ.ಬ್ರೇಕ್‌ದರ್ಶನದ ಅವಕಾಶವನ್ನು ಕಲ್ಪಿಸಿ ಬೆಟ್ಟದ ಮೇಲಿರುವ ಭಕ್ತರೆಲ್ಲರಿಗೂ ಕೈಲಾದಷ್ಟು ದರ್ಶನ ಕಲ್ಪಿಸಿ ಬೆಟ್ಟದ ಮೇಲಿರುವ ಭಕ್ತರೆಲ್ಲರಿಗೂ ಕೈಲಾದಷ್ಟು ದರ್ಶನ ಭಾಗ್ಯವನ್ನೊದಗಿಸಿ ಎಲ್ಲರನ್ನು ಬೆಟ್ಟದಿಂದ ಕೆಳಗಿಳಿಸಿದ್ದಾರೆ. ದಿನದಿಂದ ತಿರುಮಲೇಶನ ಸೇವೆಗಳೆಲ್ಲವನ್ನು ಆಗಮೋಕ್ತವಾಗಿ ಏಕಾಂತದಲ್ಲಿಯೇ ತಿ.ತಿ.ದೇ. ನೆರವೇರಿಸುತ್ತಿದೆ. ಶ್ರೀ ವೆಂಕಟೇಶ್ವರ ಭಕ್ತಿ ಚಾನಲ್ (SVBC) ಮೂಲಕ ತಿರುಮಲೇಶನ ಕಲ್ಯಾಣೋತ್ಸವವನ್ನು, ತಿರುಚಾನೂರು ಅಮ್ಮನವರ ಕಲ್ಯಾಣವನ್ನು ಪ್ರತ್ಯಕ್ಷ ಪ್ರಸಾರ ಮಾಡುತ್ತಿದೆ. ಹಾಗೆಯೇ ಲಕ್ಷಾದಿ ಪ್ರಜೆಗಳೊಡನೆ ನೆರವೇರಿಸುವ ಒಂಟಿಮಿಟ್ಟ ಶ್ರೀ ಸೀತಾರಾಮರ ಕಲ್ಯಣೋತ್ಸವವನ್ನು ಆಲಯದ ಪ್ರಾಂಗಣಕ್ಕೆ ಸೀಮಿತಗೊಳಿಸಿ ಶ್ರೀ ವೆಂಕಟೇಶ್ವರ ಭಕ್ತಿ ಚಾನಲ್ ಮೂಲಕ ಪ್ರತ್ಯಕ್ಷ ಪ್ರಸಾರದೊಂದಿಗೆ ಭಕ್ತರಿಗೆ ತೋರಿಸಲಾಗಿದೆ.

## ರೋಗಗಳನ್ನು ಹೆಡಮುರಿ ಕಟ್ಟುವ ಯಾಗಗಳು

ಕರೋನ ಗಂಡಾಂತರದಿಂದ ಹೊರಬರಬೇಕೆಂದು ಭಾವಿಸಿದ ತಿ.ತಿ.ದೇ. ಮಾಚ್‌ವ 26 ರಿಂದ 28 ರ ವರೆಗೆ ಶ್ರೀ ಶ್ರೀನಿವಾಸ ಶಾಂತ್ಯೋತ್ಸವಸಹಿತ ಧನ್ವಂತರಿ ಯಾಗವನ್ನು ಮೂರು ದಿನಗಳವರೆಗೆ ತಿರುಪತಿಯಲ್ಲೇ ಧಮಗಿರಿ ವೇದ ವಿಜ್ಞಾನಪೀಠದಲ್ಲಿ ದೃಢದಿಂದ ಆಚರಿಸಿದೆ.

ಶ್ರೀನಿವಾಸ ವೇದ ಮಂತ್ರ. ಆರೋಗ್ಯ ಜಪಯಜ್ಞ ಮಂತ್ರಗಳನ್ನು ಪಠಿಸಿದ್ದಾರೆ. ಇನ್ನು ಲೋಕ ಕ್ಷೇಮವನ್ನೇ ಕೋರುತ್ತಾ ಪ್ರಜೆಗಳಿಗೆ, ಅಗತ್ಯವಾದ ಆರೋಗ್ಯವನ್ನು ಪ್ರಸಾದಿಸಬೇಕೆಂದು ಭಗವಂತನನ್ನು ಪ್ರಾರ್ಥಿಸುತ್ತಾ ಯೋಗಾವಶಿಷ್ಟ, ಶ್ರೀ ಧನ್ವಂತರಿ ಮಹಾಮಂತ್ರ ಪಾರಾಯಾಣವನ್ನು ತಿರುಮಲೆಯನಾದ ನೀರಾಜನ ವೇದಿಕೆಯ ಮೇಲೆ ಏಪ್ರಿಲ್ 10 ರಿಂದ ಆರಂಭಿಸಿ ಇದರಲ್ಲಿ ಭಕ್ತರೂ ಸಹಾ ಪಾಲ್ಗೊಂಡಿದ್ದು ವಿಶೇಷವಾದುದು. ಎಸ್.ವಿ.ಬಿ.ಸಿ. ಯಲ್ಲಿ ನೇರಪ್ರಸಾರ ಮಾಡುವುದರ ಮೂಲಕ ಪಂಡಿತರು ಉಚ್ಚರಿಸಿದ ಮಂತ್ರಗಳನ್ನು ಭಕ್ತರು ಟಿ.ವಿಯ ಮುಂದೆ ಕುಳಿತು ಪಠಿಸಿದರು.

## ಮಾನವ ಸೇವೆಯೇ ಮಾಧವ ಸೇವೆ

ಕರೋನ ಸ್ತಬ್ಧ ಪರಿಸ್ಥಿತಿಯನ್ನು ಎದುರಿಸುತ್ತಿರುವ ತಿರುಪತಿ, ಸುತ್ತಮುತ್ತಲಿನ ಪರಿಸರ ಪ್ರಾಂತ್ಯಗಳಲ್ಲಿ ಸಾವಿರಾರು ಮಂದಿ ನಿರಾಶ್ರಿತ ನಿತ್ಯಗೂಲಿಯವರಿಗೆ ಪ್ರತಿನಿತ್ಯ 1,20,000 ಆಹಾರದ ಪೊಟ್ಟಣಗಳನ್ನು ಅನ್ನಪ್ರಸಾದ ವಿಭಾಗದ ಮುಖೇನ ತಯಾರಿಸಿ ವಿತರಿಸಲಾಗುತ್ತಿದೆ. ಇದರೊಂದಿಗೆ ಗೋಶಾಲೆಯಲ್ಲಿ ಸಾವಿರಾರು ಗೋವುಗಳನ್ನು ಸಂರಕ್ಷಿಸುತ್ತಾ ತಿ.ತಿ.ದೇ. ತಿರುಪತಿಯಲ್ಲಿ ಸುಮಾರು 500 ಬೀದಿನಾಯಿಗಳಿಗೆ ಆಹಾರ ಸರಬರಾಜು ಮಾಡುತ್ತಿದೆ. ಬೀದಿಗಳ ಮೇಲೆ ಸಂಚರಿಸುವ ಪ್ರಾಣಿಗಳಿಗಾಗಿ ತಿರುಪತಿಯಲ್ಲಿರುವ ಬಸ್ಟ್ಯಾಂಟ್‌ಗಳಲ್ಲಿ ತಾತ್ಕಾಲಿಕವಾಗಿ ಪಶು ಶಾಲೆಗಳನ್ನು ಏರ್ಪಾಟು ಮಾಡಿದೆ. ದಿನಕ್ಕೆ ಸುಮಾರು 3 ಮೆಟ್ರಿಕ್ ಟನ್‌ಗಳ ಪಶುಗ್ರಾಸ, 300 ಕಿ.ಲೋ. ಧಾನ್ಯಗಳನ್ನು ತಿ.ತಿ.ದೇ. ರವಾನಿಸುತ್ತಿದೆ. ತಿರುಮಲೆ ತಿರುಪತಿ ದೇವಸ್ಥಾನಗಳು ತನ್ನ ಆಯುರ್ವೇದ ಪರಿಶೋಧನಾಲಯಗಳಲ್ಲಿ ಕರೋನ ಕಟ್ಟಳೆಯ "ರಕ್ಷೋಘ್ನಧೂಪಂ" (ಕ್ರಿಮಿಸಂಹಾರಕ ಧೂಪ) " ಪವಿತ್ರ" (ಕೈಗಳನ್ನು ಶುಭ್ರವಾಗಿಟ್ಟು ಕೊಳ್ಳುವ ದ್ರಾವಕ) "ಗಂಡೂಷಕಮು" (ಮುಕ್ಕಳಿಸುವ ಔಷಧಿ) " ನಿಂಬವನ್ಯ ಮು" (ಮೂಗಿನಲ್ಲಿ ಹಾಕಿ ಕೊಳ್ಳುವ ಬಿಂದು ಔಷಧಿ) "ಅಮೃತ" (ವ್ಯಾಧಿ ನಿರೋಧಕ ಶಕ್ತಿಯನ್ನು ವೃದ್ಧಿಸುವ ಮಾತ್ರೆಗಳು) ಇವುಗಳನ್ನು ತಯಾರಿಸಿದೆ.

## ಕರೋನದ ಮೇಲೆ ಯುದ್ಧಕ್ಕೆ 19 ಕೋಟಿ:

ಸಿಮ್ಸ್ ಆಸ್ಪತ್ರೆಯು ಪೂರ್ತಿಯಾಗಿ ಕರೋನ ಚಿಕಿತ್ಸಾಲಯವಾಗಿ ಮಾರ್ಪಡಿಸಿದೆ. ಸಿಮ್ಸ್ ಆವರಣದಲ್ಲಿ ಶ್ರೀ ಪದ್ಮಾವತಿ ಮಹಿಳಾ ವೈದ್ಯಶಾಲೆಯಲ್ಲಿ ಅಂತರರಾಷ್ಟ್ರೀಯ ಕರೋನ ಚಿಕಿತ್ಸಾಲಯವನ್ನಾಗಿ ಬದಲಾಯಿಸಲಾಗಿದೆ. ಇವುಗಳಲ್ಲಿ ವೆಂಟಿಲೇಟರ್‌ಗಳು ಮುಂತಾದ ವೈದ್ಯಕೀಯ ಸಾಮಾಗ್ರಿಗಳೊಂದಿಗೆ ಗೊರಸು, ಸ್ವಯಂ ಸೇವಕರಿಗಾಗಿ ತಿ.ತಿ.ದೇ 19 ಕೋಟಿ ಹಣವನ್ನು ಮಂಜೂರು ಮಾಡಿದೆ. ಕರೋನ ಸಹಾಯ ವರ್ತಿಗಳ ವಾಸಕ್ಕಾಗಿ ತಿ.ತಿ.ದೇ ಅಧೀನದಲ್ಲಿರುವ ತಿರುಚಾನೂರಿನಲ್ಲಿರುವ ಪದ್ಮಾವತಿ ನಿಲಯವನ್ನೂ, ತಿರುಪತಿಯಲ್ಲಿರುವ ವಿಷ್ಣುನಿವಾಸ , ಶ್ರೀನಿವಾಸ, ಮಾಧವ ವಿಶ್ರಾಂತಿ ಗೃಹಗಳನ್ನು ಚಿತ್ತೂರು ಜಿಲ್ಲೆ ಜಿಲ್ಲಾಧಿಕಾರದ ಕಾರ್ಯಗಾರಕ್ಕಾಗಿ ತಿ.ತಿ.ದೇ. ಬಿಟ್ಟು ಕೊಟ್ಟಿದೆ.



Edited and Published on behalf of T.T.Devasthanams by Dr. K. Radha Ramana, M.A., M.Phil., Phd., Chief Editor, T.T.D. and Printed at T.T.D. Press by Sri R.V. Vijaya Kumar, B.A., B.Ed., Dy. E.O. (Publications & Press), T.T.D. Press, Tirupati - 517 507.



ಅಂತರ್‌ಜಾತೀಯ ವಿಪತ್ತು ಆದಂತಹ ಕರೋನ ವೈರಸ್ ವ್ಯಾಪ್ತಿಯನ್ನು ತಡೆಗಟ್ಟುವ ಸಂದರ್ಭವಾಗಿ
ಲಾಕ್‌ಡೌನ್‌ನಲ್ಲಿ ನಿರಾಶ್ರಿತರಾದ ವಲಸೆ ಕೂಲಿಗಳಿಗೆ, ಮೂಕಜೀವಿಗಳಿಗೆ
ತಿ.ತಿ.ದೇ. ದೇವಸ್ಥಾನವು ಆಹಾರ ಒದಗಿಸುತ್ತಿರುವ ದೃಶ್ಯ














SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
Printed on 25-05-2020. Regd. with the Registrar of Newspapers under "RNI" No.10742,
Postal Regd. No.TRP/14-2018-2020, Licensed to post without prepayment
No.PMGK/RNP/WPP-04/2018-2020

